ಪುಸ್ತಕ ಪ್ರಪಂಚ

ಮಾರ್ಚ್ - ೧೯೯೮

50



ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ
ಮೈಸೂರು-೫೭೦ ೦೦೬

ಪುಸ್ತಕ ಪ್ರಪಂಚ

ಮಾಸಿಕ

ಸಂಪುಟ ೪೮ ಸಂಚಿಕೆ-೬

ಮಾರ್ಚ್-೧೯೯೮

ಮುಖ ಚಿತ್ರ
ಪ್ರಧಾನಮಂತ್ರಿ
ಅಟಲ್ ಬಿಹಾರಿ ವಾಜಪೇಯಿ

ಪರಿವಿಡಿ

೧. ವಾಜಪೇಯಿಯವರ ಆಡಳಿತ ಸುಗಮವಾಗಲಿ ೩
—ಚುನಾವಣೆಯ ಹಗರಣ ೮
—ಮಹಾತ್ಮ ನೇತಾಜಿ ಚಿರಾಯುವಾಗಲಿ ೧೫
—ಮತಾಂಧತೆ ಹೆರವರಿಗೆ ಮಾತ್ರವಲ್ಲ- ಹೆತ್ತವರಿಗೂ ಕೇಡು ೧೯
—ದೇಜಗೌ

೨. ಶ್ರೀನಿವಾಸರ ಸಣ್ಣ ಕತೆಗಳು ೨೩
—ಪ್ರೊ॥ ಕೆ. ಬಿ. ಪ್ರಭುಪ್ರಸಾದ್

೩. ಸೂರದಾಸರ ಭ್ರಮರಗೀತ ೩೦
—ಡಾ॥ ಎಂ.ಎನ್. ಮೃತ್ಯುಂಜಯ

೪. ರಾಜೀನಾಮೆ ೩೪
—ಟಿ. ಎಸ್. ಲಲಿತ

೫. ಖಾನಾವಳಿ ಗಂಗಪ್ಪ ೪೨
—ಡಾ॥ ಸ. ಜ. ನಾಗಲೋಟಿಮಠ

೬. ಪೋಲಿಯೊ ಪೀಡಿತರಿಗೆ ಆಶಾಜ್ಯೋತಿ: ಪುನರ್ವಸತಿ ತರಬೇತಿ ೪೬
—ಡಾ॥ ಕರವೀರಪ್ರಭು ಕ್ಯಾಲಕೊಂಡ

೭. ಮಕ್ಕಳಲ್ಲಿ ಭಾಷೆಯ ಆರಂಭ ಮತ್ತು ಬೆಳವಣಿಗೆ ೫೦
—ಪ್ರೊ॥ ಎನ್. ಸುಬ್ರಹ್ಮಣ್ಯಂ

೮. ಪರೋಕ್ಷ ಧೂಮಪಾನದ ಬಗ್ಗೆ ನಿಮಗೆ ಗೊತ್ತಿಲ್ಲದಿರುವುದು ೫೫
—ಜಿ. ವೈದೇಹಿ

೯. ನನ್ನ ವಿದ್ಯಾರ್ಜನೆ ೬೧
—ಬ್ರಿಗೇಡಿಯರ್ ಎಂ. ಎ. ಗೋಖಲೆ

೧೦. ಸುಂದರ ಮನೆಗೆ ೨೫ ಸೂತ್ರಗಳು ೬೬
—ಜಿ. ಕುಮಾರಪ್ಪ

ಪುಸ್ತಕ ಪರಿಚಯ
—ಎ. ಪಿ. ಚಂದ್ರಶೇಖರ ೬೪
—ಜೀನಹಳ್ಳಿ ಸಿದ್ಧಲಿಂಗಪ್ಪ ೬೬

ಓದುಗರ ಅಭಿಸಿಕೆ ೭೮

PUSTAKA PRAPANCHA : Monthly

Published and printed by Karnataka State Adult Education Council, Mysore-6. Price : Rupees Six

ಬಿಡಿಪ್ರತಿ : ರೂ. ೬

ವಾರ್ಷಿಕ ಚಂದಾ : ರೂ. ೬೦

ಅಜೀವ ಸದಸ್ಯತ್ವ ಚಂದಾ :

ವ್ಯಕ್ತಿಗೆ : ರೂ. ೪೦೦

ಸಂಸ್ಥೆಗೆ : ರೂ. ೬೦೦

ಪ್ರಕಟಣೆ

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ

ಮೈಸೂರು–೫೭೦ ೦೦೬

ವಾಜಪೇಯಿಯವರ ಆಡಳಿತ ಸುಗಮವಾಗಲಿ

ಕೊನೆಗೂ ೧೨ನೆಯ ಮಹಾಚುನಾವಣೆಯಲ್ಲಿ ಲೋಕಸಭೆ ಮತ್ತೆ ಅತಂತ್ರವಾಯಿತು!

ಈ ಚುನಾವಣೆಯ ಮುಖ್ಯ ಫಲಶ್ರುತಿಗಳು ನಾಲ್ಕು: ೧) ಕಾಂಗ್ರೆಸ್ಸಿನ ಏಕಮಾತ್ರ ನಾಯಿಕೆ ಸೋನಿಯಾಗಾಂಧಿ. ಮಹಾರಾಷ್ಟ್ರದ ಶರದ್‌ಪವಾರ್ ಸಮಾನಾಂತರ ನಾಯಕರಾಗಿ ಮೇಲೆದ್ದಿದ್ದರೂ ಸೋನಿಯಾ ಚುನಾವಣೆಯ ಅಖಾಡಕ್ಕೆ ಧುಮುಕದಿದ್ದರೆ, ಸೀತಾರಾಮ ಕೇಸರಿಯೆ ಪ್ರಚಾರಕ್ಕೆ ಹೊರಟಿದ್ದರೆ, ಕಾಂಗ್ರೆಸ್ ತಳಕಾಣುತ್ತಿತ್ತೆಂಬುದರಲ್ಲಿ ಅನುಮಾನವಿಲ್ಲ. ೨) ಭಾರತೀಯ ಜನತಾಪಕ್ಷದ ಅಲೆ ಗ್ರಾಮಾಂತರ ಪ್ರದೇಶವನ್ನು ಪ್ರವೇಶಿಸಿದಂತಾಯಿತು. ಹಿಂದಿನ ಎಲ್ಲ ಸರ್ಕಾರಗಳ ಅವಿವೇಕವನ್ನು ನೋಡಿದ್ದಾಯಿತು; ಅವು ಸೃಷ್ಟಿಸಿರುವ ಗೊಂದಲದ ಪರಿಸ್ಥಿತಿಯ ಮತ್ತು ಸಮಸ್ಯೆಗಳ ಫಲವನ್ನು ವೋಟು ಕೊಟ್ಟ ಜನ ಅನುಭವಿಸುವಂತಾಯಿತು. ಭಾಜಪಕ್ಕೊಮ್ಮೆ ಅಧಿಕಾರ ಕೊಟ್ಟು ನೋಡೋಣವೆಂಬ ಜನರ ಅಭೀಪ್ಸೆ ಹೆಪ್ಪುಗಟ್ಟಿತು. ಆ ಅಲೆ ಮುಖ್ಯವಾಗಿ ಯುವಕರನ್ನಾಕರ್ಷಿಸಿತು. ೩) ಎಂಥ ರಾಷ್ಟ್ರೀಯ ಪಕ್ಷವೇ ಆಗಲಿ, ಪ್ರಾದೇಶಿಕ ಅಥವಾ ಪುಡಿಪಕ್ಷಗಳ ಸಹಕಾರವಿಲ್ಲದೆ ತಮ್ಮ ಕಾಲ ಮೇಲೆ ನಿಲ್ಲಲಾರವೆಂಬುದು ಸಾಬೀತಾಯಿತು. ಇಷ್ಟಕ್ಕೆಲ್ಲ ಕೇಂದ್ರೀಕರಣವೆ ಕಾರಣದೆಂಬುದು, ಸುಸ್ಪಷ್ಟವಾಯಿತು. ೪) ಸದ್ಯದ ಪರಿಸ್ಥಿತಿಯಲ್ಲಿ ಅಟಲ್ ಬಿಹಾರಿ ವಾಜಪೇಯಿಯವರು ರಾಷ್ಟ್ರದ ಏಕಮಾತ್ರ ಬಹುಜನಪ್ರಿಯ ನಾಯಕರೆಂಬ ಸಂಗತಿ ಅನ್ಯಪಕ್ಷಗಳಿಗೂ ಅರಿವಾಯಿತು. ಜಾತೀಯತೆಯಂತು ಇದ್ದದ್ದೇ. ತಮ್ಮ ಪಕ್ಷದ ಅಭ್ಯರ್ಥಿಯಿದ್ದರೂ ತಮ್ಮ ಜಾತಿಯವನೆಂಬ ಏಕೈಕ ಕಾರಣಕ್ಕಾಗಿ ಅನ್ಯಪಕ್ಷದ ಅಭ್ಯರ್ಥಿಯ ಪರವಾಗಿ ತೆರೆಮರೆಯಲ್ಲಿ ಕತ್ತಲೆಯಲ್ಲಿ ಭೋಜನ ಕೂಟಗಳಲ್ಲಿ ಪ್ರಚಾರ ನಡಸಿದ ಜಾತ್ಯಂಧನಾಯಕರಂತು ಎಲ್ಲ ಪಕ್ಷಗಳಲ್ಲಿಯೂ ಇದ್ದೇ ಇದ್ದಾರೆ. ಸಂಘಟನಾ ವಿಧಾನ ಬೇರೆಯಾದರೂ, ಸಂಯುಕ್ತಸ್ವರೂಪದ ಸರ್ಕಾರ ಅಸ್ತಿತ್ವಕ್ಕೆ ಬಂದಾಗ, ಅದರ ಭವಿಷ್ಯವೇನೆಂಬುದು ತೂಗುಕತ್ತಿಯಾಗಿಯೇ ಉಳಿಯುತ್ತದೆ. ಭಾಜಪಕ್ಕೆ ಹೊರಗಿನಿಂದ ಬೆಂಬಲ ಕೊಡುತ್ತೇವೆಂದು ಎ ಐ ಎ ಡಿ ಎಂ ಕೆ ಮತ್ತು ತಟಸ್ಥವಾಗಿರುತ್ತೇನೆಂದು ಟಿ ಡಿ ಪಿ ಘೋಷಿಸುವ ಮೂಲಕ ಒಡಕು ದನಿ ತೋರಿದಾಗಲೆ ಸಂಶಯ ವ್ಯಕ್ತವಾಗುತ್ತದೆ. ಅವುಗಳ ಘೋಷಣೆಯ ಹಿನ್ನೆಲೆಯಲ್ಲಿ ಸಯುಕ್ತಿಕ ರಾಜಕಾರಣವಿದ್ದರೆ ಆಶ್ಚರ್ಯಪಡಬೇಕಾಗಿಲ್ಲ. ಆದರೂ ಪಕ್ಷಗಳು ಹಾಗೂ ನಾಯಕರು ಮಕ್ಕಳಾಟವನ್ನು ಕಡಿದವರ ಅಮಲುಚೇಷ್ಟೆಯನ್ನು ತೊರೆದು, ಜನರ ಅಭೀಪ್ಸೆಯನ್ನರಿತು ತಾಟಸ್ಥ್ಯದ ಮೂಲಕವಾದರೂ ಭಾಜಪಕ್ಕೆ ಬೆಂಬಲ ನೀಡಿ, ರಾಷ್ಟ್ರದ ಮರ್ಯಾದೆಯನ್ನೂ ಭದ್ರತೆಯನ್ನೂ ಕಾಪಾಡಿಕೊಳ್ಳಬೇಕಾದ್ದು ಸರ್ವರ ಕರ್ತವ್ಯವಾಗಿದೆ.

ಈಗ ದೇಶದ ಮುಂದೆ ನೂರಾರು ಸಮಸ್ಯೆಗಳಿವೆ. ಅವುಗಳಿಗೆ ಆಡಳಿತ ಪಕ್ಷವೆಂತು ಬಾಧ್ಯವೋ, ವಿರೋಧಪಕ್ಷಗಳು ಮಾತ್ರವಲ್ಲ, ಜಾತ್ಯಂಧ ಮತದಾರರೂ ಜವಾಬ್ದಾರಿಯನ್ನು ಹೊರಬೇಕಾಗಿದೆ. ಬಡತನ, ನಿರಕ್ಷರತೆ, ಹಿಟ್ಟುಬಟ್ಟೆ ಮನೆಗಳ ಕೊರತೆ, ಕಪ್ಪುಹಣದ ಹೆಚ್ಚಳ, ಅಸಮಾನತೆಯ ದೊಡ್ಡ ಕಂದಕ, ಹಣದುಬ್ಬರ, ಭ್ರಷ್ಟಾಚಾರ, ಶಿಸ್ತುರಾಹಿತ್ಯ, ಕಾನೂನಿನ ಅವ್ಯವಸ್ಥೆ, ಕಾರ್ಯಾಂಗ ಶಾಸಕಾಂಗಗಳ ಸೋಲು, ಜಾತೀಯತೆಯ ನಗ್ನ ನೃತ್ಯ, ಸಾಮಾಜಿಕ ಒತ್ತಡಗಳು, ದುರ್ಬಲ ವರ್ಗಗಳ ಮೇಲಣ ಧಾಳಿ, ಈಶಾನ್ಯ ರಾಜ್ಯಗಳ ಅಸಹಕಾರ, ಪಂಜಾಬ್ ಕಾಶ್ಮೀರ ಸಮಸ್ಯೆ, ಗಡಿ–ಜಲ ವಿವಾದ, ಉಗ್ರಕೇಂದ್ರೀಕರಣ, ಮುಂದುವರಿದ ರಾಷ್ಟ್ರಗಳ ಹೊಸವಸಾಹತುಶಾಹಿ ನೀತಿ, ನೆರೆಹೊರೆಯ ರಾಷ್ಟ್ರಗಳ ಅತೃಪ್ತಿಕರ ಸಂಬಂಧ, ಮೌಲ್ಯಪತನ, ನಿರುದ್ಯೋಗ, ಪರಿಸರಮಾಲಿನ್ಯ, ಕೃಷಿಕ್ಷೇತ್ರ ನಿರ್ಲಕ್ಷ್ಯ, ರಾಜಕೀಯ ಅಪರಾಧಿಗಳ ರಕ್ಷಣೆ, ಉತ್ಪಾದನೆಯ ಕ್ಷೀಣತೆ—ಇವೇ ಮೊದಲಾದ ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳಬಲ್ಲ, ಕ್ರಿಯಾತ್ಮಕ ಕರ್ತೃತ್ವ ಶಕ್ತಿಯುಳ್ಳ, ಅನುಭವ ಸಂಪನ್ನನಾದ, ಜಾತ್ಯತೀತನಾದ, ವಿಶಾಲದೃಷ್ಟಿಯ ಪ್ರಜ್ಞಾವಂತನಾದ, ಮೇಧಾವಿಯಾದ, ರಾಷ್ಟ್ರಹಿತರಕ್ಷಣೆಗಾಗಿ ಸರ್ವತ್ಯಾಗಗಳಿಗೂ ಸಿದ್ಧನಾದ ನಾಯಕನೀಗಬೇಕಾಗಿದೆ. ಈ ಹೊತ್ತಿನ ಪರಿಸ್ಥಿತಿಯಲ್ಲಿ ಅಂಥ ಯೋಗ್ಯತೆಯುಳ್ಳ ಎಲ್ಲ ಪಕ್ಷಗಳ ಗೌರವಕ್ಕೂ ಪಾತ್ರರಾದ, ನಾಯಕರೆಂದರೆ ಅಟಲ್ ಬಿಹಾರಿ ವಾಜಪೇಯಿ ಯೊಬ್ಬರೇ. ೧೯೫೭ ರಿಂದ, ಅಂದರೆ ನಲವತ್ತು ವರ್ಷ ಸಂಸತ್ ಸದಸ್ಯರಾಗಿದ್ದು, ರಾಷ್ಟ್ರದ ಸರ್ವಸಮಸ್ಯೆಗಳನ್ನು ಕರತಲಾಮಲಕ ಮಾಡಿಕೊಂಡಿರುವ, ನಾಡಿನ ಅದ್ವಿತೀಯವಾಗ್ಮಿಯೆಂದು ಹೆಸರಾದ, ಶ್ರೇಷ್ಠ ಸಂಸತ್‌ಪಟುವೆಂಬ ಪ್ರಶಸ್ತಿಗೆ ಪಾತ್ರರಾದ ಅವರ ಸಾಮರ್ಥ್ಯಕ್ಕೆ ಸವಾಲಾಗಿ ಅವರ ಎಪ್ಪತ್ತೆರಡನೆಯ ವಯಸ್ಸಿನಲ್ಲಿ ಪ್ರಧಾನಿ ಪದವಿ ಲಭಿಸಿರುವುದೊಂದು ಯೋಗಾಯೋಗ. ಅವರೆಲ್ಲಿಯೆ ಇರಲಿ, ಕೇವಲ ಸದಸ್ಯರಾಗಿರಲಿ, ವಿರೋಧ ಪಕ್ಷದ ನಾಯಕರಾಗಿರಲಿ, ಅವರೆಂದೂ ವೈಯಕ್ತಿಕ ಘನತೆಗೆ, ಮಾನವಗಾಂಭೀರ್ಯಕ್ಕೆ, ರಾಜಕೀಯ ಪ್ರಾಮಾಣಿಕತೆಗೆ ಕಳಂಕ ಬರುವಂತೆ ನಡೆದುಕೊಂಡಿದ್ದಿಲ್ಲ.

ಹಿಂದಿನ ಗ್ವಾಲಿಯರ್ ಸಂಸ್ಥಾನದಲ್ಲಿ ಶಾಲಾತನಿಖಾಧಿಕಾರಿಯಾಗಿದ್ದು, ಹಿಂದಿ ಇಂಗ್ಲಿಷ್ ಭಾಷೆಗಳಲ್ಲಿ ಮಹಾವಾಗ್ಮಿಯೂ, ಜತೆಗೆ ಕವಿಯೂ ಆಗಿದ್ದ ಕೃಷ್ಣ ಬಿಹಾರಿ ವಾಜಪೇಯಿಯ ಮಗನಾಗಿ ೧೯೨೭ರಲ್ಲಿ ಹುಟ್ಟಿ, ರಾಜಕೀಯ ಶಾಸ್ತ್ರದಲ್ಲಿ ಎಂ.ಎ. ಪದವಿಯನ್ನು ಪಡೆದು ಸಂಘ ಪರಿವಾರಸೇರಿ, ಪ್ರಚಾರಕರಾಗಿ ಸೇವೆಸಲ್ಲಿಸುತ್ತಿದ್ದಾಗಿನಿಂದ, ಜತೆಜತೆಗೆ ಕವಿತೆ ರಚಿಸುತ್ತ, ತಮ್ಮ ಮೊದಲೊಲವಿನ ಪತ್ರಿಕೋದ್ಯಮವನ್ನು ರಾಷ್ಟ್ರಧರ್ಮ ಮಾಸಿಕ ಮತ್ತು ಪಾಂಚಜನ್ಯ ಪಾಕ್ಷಿಕೆಗಳ ಮೂಲಕ ಪ್ರಾರಂಭಿಸುತ್ತ, ೧೯೫೭ರಲ್ಲಿ ಭಾರತೀಯ ಜನಸಂಘದ ಪತಿಯಿಂದ ಲೋಕಸಭೆಯನ್ನು ಪ್ರವೇಶಿಸಿ, ೧೯೭೫ರಲ್ಲಿ ತುರ್ತು

ಪರಿಸ್ಥಿತಿ ಸಮಯದಲ್ಲಿ ತುರಂಗವಾಸವನ್ನನುಭವಿಸಿ, ೧೯೭೭ ರಲ್ಲಿ ಮೊರಾರ್ಜಿ ನೇತೃತ್ವದ ಜನತಾಪಕ್ಷದ ಸರ್ಕಾರದಲ್ಲಿ ವಿದೇಶೀಯ ವ್ಯವಹಾರಗಳ ಸಚಿವರಾಗಿ, ೧೯೯೬ ರಲ್ಲಿ ಕೇವಲ ಹದಿಮೂರು ದಿನದ ಪ್ರಧಾನಿಯಾಗಿದ್ದರವರೆಗೆ ಅಟಲ್ ಬಿಹಾರಿ ವಾಜಪೇಯಿಯವರು ಕ್ರಮಿಸಿದ ದಾರಿ ಸುದೀರ್ಘವಾದದ್ದು, ಸಾಹಸಮಯವಾದದ್ದು, ಅಂತೆಯೇ ವೈಭವಪೂರ್ಣವಾದದ್ದು. ವಿದೇಶೀಯ ವ್ಯವಹಾರಖಾತೆಯ ಸಚಿವರಾಗಿ, ಪಾಶ್ಚಾತ್ಯ ರಾಷ್ಟ್ರಗಳೊಡನೆ ಯಶಸ್ವಿಯಾಗಿ ಕುದುರಿಸಿದ ರಾಜತಾಂತ್ರಿಕಕೌಶಲ ಹಾಗೂ ನೆರೆಹೊರೆಯ ರಾಷ್ಟ್ರಗಳೊಡನೆ ರೂಪಿಸಿದ ಸ್ನೇಹಸಂಧಾನದಿಂದಾಗಿ ಅವರು ಶ್ರೇಷ್ಠಮುತ್ಸದ್ದಿಯೆಂಬುದು, ರಾಷ್ಟ್ರದ ಕರ್ಣಧಾರತ್ವವನ್ನು ಹಿಡಿಯಬಲ್ಲ ಸಮರ್ಥರೆಂಬುದು ಜಗಕ್ಕೆ ಜಾಹೀರಾಯಿತು. ವಿಶ್ವಸಂಸ್ಥೆಯ ಮಹಾಸಭೆಯಲ್ಲಿವರು ಹಿಂದಿ ಭಾಷೆಯಲ್ಲಿ ಮಾತಾಡಿದಾಗ ಅವರ ಭಾಷಾಭಿಮಾನ ಹಾಗೂ ಆತ್ಮಗೌರವ ಶ್ರದ್ಧೆ ಅಭಿವ್ಯಕ್ತಗೊಂಡುವು.

ಅಖಂಡ ಭಾರತ ವಾಜಪೇಯಿಯವರ ಕನಸು ಹಾಗೂ ಸಂಕಲ್ಪ. ದೇಶ ವಿಭಜನೆಗೆ ಅವರು ಭಾರಿವಿರೋಧಿ. ಜಾನಾಂಗಿಕವಾಗಿ ಇಂಡಿಯಾ ಪಾಕಿಸ್ತಾನಗಳ ಜನರೆಲ್ಲ ಒಂದೆ. ಸಹಸ್ರ ಸಹಸ್ರ ವರ್ಷಗಳಿಂದ ಒಟ್ಟಿಗಿದ್ದು, ಸುಖದುಃಖಗಳನ್ನು ಸಮನಾಗಿ ಹಂಚಿಕೊಂಡು, ಒಂದೇ ಗಾಳಿ ನೀರುಗಳನ್ನು ಕುಡಿದು ಬದುಕಿದ ಜನರ ವಿಘಟನೆ ಅಸಹಜವಲ್ಲವೆ? ಜರ್ಮನಿ ಕೊರಿಯಾ ವಿಯಟ್ನಾಮ್ ಒಂದಾಗಬಹುದಾದರೆ, ಅಖಂಡ ಭಾರತದ ಕಲ್ಪನೆ ಹುಸಿಯಾಗುತ್ತದೆಯೆ? ಸಂಯುಕ್ತಘಟನಾ ವ್ಯವಸ್ಥೆಯ ಮೂಲಕ, ರಕ್ಷಣೆ, ವಿದೇಶಾಂಗ ವ್ಯವಹಾರ, ಪ್ರಮುಖಸಾರಿಗೆ ವ್ಯವಸ್ಥೆಗಳ ಜವಾಬ್ದಾರಿಯನ್ನು ಕೇಂದ್ರಕ್ಕೆ ವಹಿಸಿ, ಉಳಿದುವನ್ನು ಪ್ರಾಂತ್ಯಗಳಿಗೆ ಬಿಟ್ಟುಕೊಡುವ ಮೂಲಕ ಅಖಂಡ ಭಾರತವನ್ನು ವಾಪಸು ಪಡೆಯಬಹುದೆಂಬ ಕನಸು ಅವರದು. ಬಾಬ್ರಿಮಸೀದಿ ವಿಧ್ವಂಸಕಕೃತ್ಯವನ್ನು ಖಂಡಿಸಿದ ಅವರು ಹಿಂದೂ-ಮುಸ್ಲಿಂ ಸ್ನೇಹ ಸೇತುವಾಗಬಲ್ಲರೆಂಬ ನಂಬಿಕೆ ಭಗ್ನದರ್ಪಣವಾಗಬಹುದೆ? ಅಂತೆಯೇ ಅವರು ಭಾಷಾಂಧರಲ್ಲ, ಮತಾಂಧರಲ್ಲವೆಂಬುದನ್ನೀಗ ಮಾಡಿ ತೋರಿಸುವರೆ?

ಮತ ನಿರಪೇಕ್ಷತೆಗೆ ಬದ್ಧವಾಗಿರುವುದಾಗಿ ಇಂಡಿಯಾ ತನ್ನ ರಾಜ್ಯಾಂಗದಲ್ಲಿ ಹೇಳಿಕೊಂಡಿದೆ. ಅದು ಆಚರಣೆಯಲ್ಲಂತು ಇಲ್ಲ. ಜಾತಿನಿರಪೇಕ್ಷತೆಯ ವಿಷಯ ರಾಜ್ಯಾಂಗದಲ್ಲಿಲ್ಲ; ಅದು ಲಂಗು ಲಗಾಮಿಲ್ಲದೆ, ಅಮಲೇರಿದಂತೆ ಕುಣಿದು ಕುಪ್ಪಳಿಸುತ್ತಿದೆ. ಇಲ್ಲಿ ಪಕ್ಷ ಬರಿಯ ಬೂಟಾಟಿಕೆ. ಮತಚಲಾವಣೆಗೆ ಜಾತಿ ಆಧಾರವೇ ಹೊರತು ಪಕ್ಷವಲ್ಲ. ಅಂತರಂಗದಲ್ಲಿ ಮತೀಯತೆ, ಬಹಿರಂಗದಲ್ಲಿ ನಿರ್ಮತೀಯತೆ. ಇದು ಭಾರತದ ಸೆಕ್ಯುಲರಿಸಮ್ ಎಂದು ನ್ಯಾಯಮೂರ್ತಿ ಎಂ. ಸಿ. ಛಾಗ್ಲಾ ಮೊದಲಾದವರು ಹೇಳಿದ್ದುಂಟು. ಈ ಒಗಟನ್ನು

ವಾಜಪೇಯಿ ಹೇಗೆ ಬಿಡಿಸುತ್ತಾರೆಯೊ ಕಾದುನೋಡಬೇಕಾಗಿದೆ. ರಾಜ್ಯಾಂಗದ ೩೫೬ನೆಯ ವಿಧಿಯನ್ನು ವಿರೋಧಿಸುತ್ತಿದ್ದ ಭಾಜಪ ಈಗ ಆ ಬಗ್ಗೆ ಹೇಗೆ ವರ್ತಿಸುತ್ತದೆಯೋ ಪರೀಕ್ಷಿಸಬೇಕಾಗಿದೆ. ಅಂತೆಯೇ ೩೭೦ನೆಯ ವಿಧಿ. ಆ ವಿಧಿಯನ್ನು ರದ್ದುಗೊಳಿಸಿ, ಎಲ್ಲ ರಾಜ್ಯಗಳಿಗೂ ಏಕರೀತಿಯ ಸ್ವಾಯತ್ತತೆ ನೀಡಬಾರದೇಕೆ? ಯಾವ ಕಾರಣಕ್ಕೂ ರಾಜ್ಯ ರಾಜ್ಯಗಳ ನಡುವೆ ತಾರತಮ್ಯ ಸಲ್ಲದು. ಅಂಗಗಳಿಂದ ಅಂಗಿ; ಅಂಗಗಳು ಬಲವಾಗಿದ್ದರೆ ಮಾತ್ರ ಅಂಗಿಯೂ ಬಲವಾಗುತ್ತದೆ. ರಾಜ್ಯಾಂಗದ ನಿರ್ದೇಶಕ ಸೂತ್ರಗಳಲ್ಲೊಂದಾದ ಏಕರೂಪ ನೀತಿ ಸಂಹಿತೆಯ ಹಣೆಬರಹವೇನಾಗಬಹುದೆನ್ನುವುದೂ ಕುತೂಹಲದ ಸಂಗತಿಯಾಗಿದೆ.

೧೯-೩-೯೮ರಂದು ಪ್ರಧಾನಿ ಹುದ್ದೆಯನ್ನು ವಹಿಸಿಕೊಂಡ ಸಂದರ್ಭದಲ್ಲಿ ಅವ್ರು ವಾಜಪೇಯಿಯವರು ರಾಷ್ಟ್ರಕ್ಕೆ ಕೆಲವು ಆಶ್ವಾಸನೆಗಳನ್ನು ಘೋಷಿಸಿದ್ದರು. ಗಳಲ್ಲಿ ಎರಡು ಮೂರನ್ನು ಮಾತ್ರ ಈಗ ನೆನಪಿಗೆ ತರಬಹುದಾಗಿದೆ. ದೇಶದಲ್ಲಿ ನಿಸರ್ಗ ಸಂಪತ್ತು ಹೇರಳವಾಗಿದ್ದರೂ, ಬಡತನವೊಂದು ಸವಾಲಾಗಿದೆ; ಬಡವರಿಗೆ ಬೆಳೆಯಲು ಅವಕಾಶ ಕಲ್ಪಿಸಲಾಗಲಿಲ್ಲ. ಅದು ನನ್ನ ಸರ್ಕಾರದ ಮೊದಲ ಹೊಣೆಗಾರಿಕೆ. ಸಂಸತ್ ಶಾಸನ ಸಭೆಗಳಲ್ಲಿ ಮಹಿಳೆಯರಿಗೆ ಶೇಕಡ ಮೂವತ್ತುಮೂರು ಸ್ಥಾನಗಳನ್ನು ಮೀಸಲಾಗಿಡಲು ಸರ್ಕಾರ ಬದ್ಧವಾಗಿದೆ. ರಾಜಕೀಯ ಕ್ಷೇತ್ರವನ್ನು ಕಲುಷಿತಗೊಳಿಸಿರುವ ಧನಶಕ್ತಿಯ ಪ್ರಾಬಲ್ಯವನ್ನು ಕುಗ್ಗಿಸಲು ಚುನಾವಣಾ ಸಂಹಿತೆಯನ್ನು ಮಾರ್ಪಡಿಸಬೇಕಾಗಿದೆ. ಗೋಸ್ವಾಮಿ ವರದಿಯನ್ನು ವರಿಷ್ಠ ನ್ಯಾಯಾಲಯದ ತೀರ್ಪುಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಚುನಾವಣಾತಂತ್ರವನ್ನು ಸುಧಾರಿಸಲು ಸರ್ಕಾರ ಬದ್ಧವಾಗಿದೆ. 'ಇಂಥ ಅನೇಕ ಮಂತ್ರ ತಂತ್ರ ಸುಧಾರಣೆಗಳ ಮೂಲಕ ಸುಸಮರ್ಥವೂ, ಸುಸಮೃದ್ಧವೂ ಆದ ನವಭಾರತವನ್ನು ನಿರ್ಮಿಸುವುದೇ ನನ್ನ ಕನಸು ಹಾಗೂ ನನ್ನ ಜೀವನೋದ್ದೇಶ'ವೆಂದವರು ಹೇಳಿದ್ದರಲ್ಲಿ ದೇಶದ ಬಗೆಗಿರುವ ಅವರ ಕಳಕಳಿ ಸ್ವದೇಶೀತತ್ತ್ವದ ಬಗೆಗಿನ ಅವರ ಕಾಳಜಿ ಯಾರಿಗಾದರೂ ಅರ್ಥವಾಗುತ್ತದೆ.

ವಾಜಪೇಯಿಯವರ ಮುಂದೆ ಇನ್ನೂ ಹಲವು ಸಮಸ್ಯೆಗಳಿವೆ. ಸಾಂಕ್ರಾಮಿಕ ರೋಗದಂತಿರುವ ಸ್ಪರ್ಧಾತ್ಮಕ ಜಾತೀಯತೆ ಕೊನೆಗೊಳ್ಳದಿದ್ದರೆ ಏಕತಾ ಸಾಧನೆ ಸಾಧ್ಯವೆ? ಆರ್ಥಿಕ ಕ್ಷೇತ್ರದ ಉದಾರೀಕರಣದಿಂದಾಗಿ, ಮಾರುಕಟ್ಟೆಯ ಆರ್ಥಿಕತೆಯಿಂದಾಗಿ ದೇಶ ಮುಂದುವರಿದ ವಿದೇಶಗಳಿಂದ ಅನಾರೋಗ್ಯಕರ ಸ್ಪರ್ಧೆಯನ್ನೆದುರಿಸಬೇಕಾಗುತ್ತದಲ್ಲವೆ? ಬೌದ್ಧಿಕ ಆವಿಷ್ಕಾರಗಳ ಹಕ್ಕಿನ ಹೆಸರಿನಲ್ಲಿ ಪ್ರಾಚೀನ ಕಾಲದಿಂದ ನಿಸರ್ಗದತ್ತವಾಗಿ ಇಂಡಿಯಾದಲ್ಲಿ ಮಾತ್ರವೆ ರೂಢಿಗತವಾಗಿರುವ ಬೇವು ತುಲಸಿ ಬಾಸ್ಮತಿ ಮೊದಲಾದ ಗಿಡಮೂಲಿಕೆ ಹಾಗೂ ಬೆಳೆಗಳ ಮೇಲಣ ಹಕ್ಕನ್ನು ವಂಚನೆಯ ಮೂಲಕ

ಕಸಿದುಕೊಳ್ಳುತ್ತಿರುವ ಮುಂದುವರಿದ ರಾಷ್ಟ್ರಗಳ ಹುನ್ನಾರನ್ನು ತಪ್ಪಿಸುವ ಬಗೆ ಹೇಗೆ? ಇವೆಲ್ಲವುಗಳನ್ನು ಕುರಿತು ನೂತನ ಪ್ರಧಾನಿಗಳು, ರಾಷ್ಟ್ರದ ಬುದ್ಧಿ ಜೀವಿಗಳು ಯೋಚಿಸಬೇಕಾಗಿದೆ. ಭಾಷಾಂಧತೆಯನ್ನು ತೊರೆದು ಎಲ್ಲ ಭಾಷೆಗಳಿಗೂ ಸಮಾನಸ್ಥಾನ ನೀಡಲಿಲ್ಲವಾದರೆ ಅಪಾಯವನ್ನೆದುರಿಸಬೇಕಾಗುತ್ತದೆ, ಮುನ್ನಡೆಗಿಂತ ಹಿನ್ನಡೆ ಕಟ್ಟಿಟ್ಟ ಬುತ್ತಿಯೆಂಬುದನ್ನು ಮರೆಯಲಾಗದು. ಸ್ವಂತ ಲಾಭಕ್ಕಾಗಿ ಹೊರಗಿನಿಂದ ಬೆಂಬಲಿಸುತ್ತೇವೆನ್ನುವ ಮಿತ್ರ ಪಕ್ಷಗಳ ಬಗ್ಗೆಯೂ ಪ್ರಧಾನಿಗಳು ಜಾಗ್ರತರಾಗಿರಬೇಕಾಗಿದೆ. ತೀವ್ರ ಮಧ್ಯಂತರ ಚುನಾವಣೆಗವಕಾಶವಾಗದಂತೆ, ಎಲ್ಲ ಪಕ್ಷಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು. ವಾಜಪೇಯಿಯವರು ಯಶಸ್ವಿಯಾಗಿ ಆಡಳಿತ ನಡೆಸುವಂತಾಗಲೆಂದು, ನಾಯಕರಲ್ಲಿ ವಿವೇಕ ಮೂಡಲೆಂದು, ದೇಶದ ಆಡಳಿತದಲ್ಲಿ, ಮಂತ್ರಿಮಂಡಲಕ್ಕೆ ಮಾರ್ಗದರ್ಶನ ನೀಡುವಲ್ಲಿ ರಾಷ್ಟ್ರಾಭ್ಯುದಯ ಸಾಧನೆಯಲ್ಲಿ ತಮ್ಮ ಪಾತ್ರ ಮತ್ತು ಹೊಣೆಗಾರಿಕೆ ಅತಿಶಯವಾಗಿವೆಯೆಂಬುದನ್ನು ವಿರೋಧಪಕ್ಷಗಳಿಗರಿವಾಗಲೆಂದು ಭ ಗ ವಂ ತ ನ ಲ್ಲಿ ಭಾರತೀಯರೆಲ್ಲರೂ ಮೊರೆಯಿಡೋಣ!

ದೇಜಗೌ

ಚುನಾವಣೆಯ ಹಗರಣ

ಹನ್ನೆರಡನೆಯ ಲೋಕಸಭಾ ಚುನಾವಣೆಯ ಹಗರಣ ಇದೆ ತಾನೆ ಮುಗಿದಿದೆ. ಅದೊಂದು ತಮಾಷೆಯೂ ಹೌದು, ದುರಂತವೂ ಹೌದು.

ಈ ದುರಂತ ಇಂಡಿಯಾಕ್ಕೆ ಮಾತ್ರವೇ ಹೊಸತಲ್ಲ. ಯೂರೋಪಿನ ಫ್ರಾನ್ಸ್, ಇಟಲಿ, ಗ್ರೀಸ್ ಮೊದಲಾದ ರಾಷ್ಟ್ರಗಳಲ್ಲಿ ವಾರಕ್ಕೊಬ್ಬ ಪ್ರಧಾನಿ, ಅರೆವರ್ಷಕ್ಕೊಂದು ಚುನಾವಣೆ ಆಗಿಹೋದದ್ದುಂಟು. ಅವಧಿಪೂರ್ವ ಚುನಾವಣೆಗಳು ಜಪಾನ್ ಕೊರಿಯಾಗಳಲ್ಲಿಯೂ ನಡೆದದ್ದುಂಟು.

ಲಕ್ಷಾಂತರ ಕೋಟಿ ಸಾಲದಲ್ಲಿ ಮುಳುಗಿರುವ ಭರತಖಂಡ ಆಗಾಗ್ಗೆ ನಡೆಯುವ ಮಹಾಚುನಾವಣೆಗೆ ಹಣ ಪೋಲುಮಾಡುವ ಸ್ಥಿತಿಯಲ್ಲಿಲ್ಲ, ನಿಜ. ಚುನಾವಣೆಯಿಂದ ಚುನಾವಣೆಗೆ ಜನರಲ್ಲಿ—ಅದರಲ್ಲಿಯೂ ಗ್ರಾಮಾಂತರ ಪ್ರದೇಶದ ಜನರಲ್ಲಿ—ಜಾಗ್ರತಿ ಹೆಚ್ಚುತ್ತದೆಂಬುದರಲ್ಲಿ ಸಂಶಯವಿಲ್ಲ. ಒಂದು ರೀತಿಯಲ್ಲಿ ಚುನಾವಣೆ ಅನೌಪಚಾರಿಕ ರಾಜಕೀಯ ಶಿಕ್ಷಣವೆಂದೇ ಹೇಳಬೇಕು. ಹಳ್ಳಿಗರಿಗೆ ಎಲ್ಲ ಪಕ್ಷಗಳ ಜಾತಕ, ರಾಜಕಾರಣಿಗಳ ಕುಲಗೋತ್ರ ಗುಣ ಸ್ವಭಾವ ವರ್ತನೆಗಳೆಲ್ಲ ಗೊತ್ತಿರುತ್ತವೆ. ಹಿಂದಿನಂತೆ ಕಣ್ಣು ಮುಚ್ಚಿಕೊಂಡು, ಯಾರ ಮಾತನ್ನೊ ಕೇಳಿಕೊಂಡು, ಯಂತ್ರದಂತೆ ಮತಪತ್ರಗಳ ಮೇಲೆ ಮುದ್ರೆಯೊತ್ತುವುದಿಲ್ಲ. ಅವನಿಗೂ ಯೋಚಿಸುವ, ತುಲನೆಮಾಡುವ, ವಿವೇಚಿಸುವ ಸಾಮರ್ಥ್ಯಲಭಿಸಿದೆ. ಅಪರಾಧಿಯೊಬ್ಬನ ಪರವಾಗಿ ಮತಚಲಾಯಿಸುವಾಗಲೂ, ಅವನ ಯಾವುದೋ ಸಹಾಯ ಮತ್ತು ಉಪಕಾರಬುದ್ಧಿ ಮತದಾರನ ಮನಸ್ಸಿನಲ್ಲಿರುತ್ತದೆ. ಕಾಂಗ್ರೆಸ್ಸಿನ ಪತನಕ್ಕೆ ಅತಿಕೇಂದ್ರೀಕರಣ ಕಾರಣವಾಯಿತೆಂಬುದನ್ನು ಪ್ರಾದೇಶಿಕ ಪಕ್ಷಗಳ ವಿಜಯಡಿಂಡಿಮ ಘೋಷಣೆಯಿಂದ ನಾಯಕರು ಅರಿತುಕೊಳ್ಳಲಿಲ್ಲವೆಂಬುದೇ ಈ ನಾಡಿನ ದುರ್ದೈವ. ಪ್ರಾದೇಶಿಕ ಸ್ವಾಯತ್ತತೆ ಮತ್ತು ಕೇಂದ್ರೀಯ ಸಂಯುಕ್ತ ಆಡಳಿತವೇ ಈ ದೇಶದ ಪ್ರಗತಿಗೆ ಹಾಗೂ ಭದ್ರತೆಗೆ ಆಧಾರವೆಂಬುದನ್ನು ನಾಯಕರು ಅರಿಯದಿರುವುದೇ ಸೋಜಿಗ. ವೈವಿಧ್ಯಬಾಹುಳ್ಯದ ದೇಶದಲ್ಲಿ ಕೇಂದ್ರೀಯ ಸರ್ವಾಧಿಕಾರ ಸೋಲುತ್ತದೆಂಬುದಕ್ಕೆ ಸೋವಿಯತ್ ಯೂನಿಯನ್ನೇ ಸಾಕ್ಷಿ.

ಈ ದೇಶದಲ್ಲಿ ದೊಡ್ಡ ಪಕ್ಷಗಳೆಂದರೆ ಎರಡು. ಕಾಂಗ್ರೆಸ್ಸು ಮತ್ತು ಭಾರತೀಯ ಜನತಾಪಕ್ಷ. ಇವು ಪ್ರಾದೇಶಿಕ ಭೇದ ಭಾಷಾಭೇದವನ್ನು ಜಾತಿ ಭೇದವನ್ನು ತೊರೆದು, ಏಕಪ್ರಕಾರವಾಗಿ ಸರ್ವಕ್ಷೇಮವನ್ನು ಸಾಧಿಸಲಿಲ್ಲವಾದ್ದರಿಂದ, ಸ್ವಾಭಿಮಾನಕ್ಕಾಗಿ ಹಾಗೂ ಆತ್ಮರಕ್ಷಣೆಗಾಗಿ ಪ್ರಾದೇಶಿಕ ಪಕ್ಷಗಳು ಹುಟ್ಟಿಕೊಳ್ಳುತ್ತವೆ. ತ್ಯಾಗ ಬಲಿದಾನಗಳ ಮೂಲಕ ದೇಶಕ್ಕೆ ಸ್ವಾತಂತ್ರ್ಯವನ್ನು

ತಂದುಕೊಟ್ಟ ಕಾಂಗ್ರೆಸ್ಸು ಬರಬರುತ್ತ ನೀತಿ ರಹಿತ ರಾಜಕಾರಣದ ಫಲವಾಗಿ ನಿತ್ರಾಣಗೊಂಡಿತು. ಇದನ್ನು ಮನಗಂಡ ಗಾಂಧೀಜಿ ಸ್ವಾತಂತ್ರ್ಯ ಬಂದಕೂಡಲೇ ರಾಜಕೀಯ ಪಕ್ಷವಾಗಿ ಕಾಂಗ್ರೆಸ್ಸು ಉಳಿಯಬಾರದೆಂದು ಘೋಷಿಸಿದರು. ಆದರೆ ಕುಶಾಗ್ರಮತಿಯ ನೆಹ್ರೂ ಮನೆತನ ಕಾಂಗ್ರೆಸ್ಸು ಮತ್ತು ಗಾಂಧಿ ಹೆಸರಿನಲ್ಲಿ ಅಧಿಕಾರಲಾಭ ಪಡೆಯಬಹುದೆಂಬ ಮಹದಾಶೆಯನ್ನು ಪೂರೈಸಿಕೊಳ್ಳುತ್ತದೆ. ರಾಜಕೀಯ ಲಾಭಕ್ಕಾಗಿ ನೆಹ್ರೂ ವಂಶಸ್ಥರೆಲ್ಲರೂ ಗಾಂಧಿಗಳಾದರು. ರಾಜೀವಗಾಂಧಿ ರಾಜೀವ ನೆಹ್ರೂ ಆಗಲಿಲ್ಲ. ಸೋನಿಯಾರಾಜೀವ್ ಸೋನಿಯಾಗಾಂಧಿ ಆಗುತ್ತಾರೆ. ಗಾಂಧಿ ಸತ್ತು ಐವತ್ತು ವರ್ಷಗಳಾದರೂ ಗಾಂಧಿಯ ಹೆಸರಿಗೆ ದೇಶವಿದೇಶಗಳಲ್ಲಿ ಅಪಾರ ಗೌರವವಿದೆ. ಅದೊಂದು ಗಾರುಡಮಂತ್ರವಾಗಿದೆ. ಆ ಹೆಸರಿನ ಲಾಭ ಪಡೆಯುವಲ್ಲಿ ಕೆಲವು ಜನ ತಮ್ಮ ವಂಶದ ಗೌರವವನ್ನು ಮರೆಯುತ್ತಾರೆ.

ಈಗಂತು ಹಳೆಯ ಕಾಂಗ್ರೆಸ್ ಇಲ್ಲ. ಗಾಂಧಿ ಕಾಂಗ್ರೆಸ್ ನೆಹ್ರೂ ಕಾಂಗ್ರೆಸ್ ಆಯಿತು; ನೆಹ್ರೂ ಕಾಂಗ್ರೆಸ್ ಇಂದಿರಾ ಕಾಂಗ್ರೆಸ್ ಆಯಿತು; ಈಗ ಕೇಸರಿ ಕಾಂಗ್ರೆಸ್! ವಾಟ್ ಎ ಫೌಲ್ ಮೈ ಕಂಟ್ರಿ ಮೆನ್! ಎಂದು ಉದ್ಗರಿಸುವಂತಾಗಿದೆ. ಇಷ್ಟರಲ್ಲೇ ಅದು ಸೋನಿಯಾ ಕಾಂಗ್ರೆಸ್ ಆಗಲಿದೆ. ಕಾಂಗ್ರೆಸ್ಸಿನ ಬಣ್ಣ ಬದಲಾವಣೆಯಿಂದಾಗಿ ಭಾರತೀಯ ಜನತಾಪಕ್ಷದ ಪ್ರೊಗರು ಹೆಚ್ಚಲಾರಂಭಿಸುತ್ತದೆ. ಸಮಾಜವಾದ ಕಮ್ಯೂನಿಸಮ್‌ಗಳ ಅಭ್ಯುದಯವನ್ನು ತಡೆಯಲು ಕಾಂಗ್ರೆಸ್ಸು ಅವುಗಳ ಕೆಲವು ಲಕ್ಷಣಗಳನ್ನು ತನ್ನೊಡಲೊಳಗೆ ಸೇರಿಸಿಕೊಂಡಂತೆ, ಭಾಜಪದ ಅಭ್ಯುದಯ ಕಾರಣವನ್ನು ಅದು ಗಂಭೀರವಾಗಿ ಪರಿಗಣಿಸಿದಂತೆ ಕಾಣುವುದಿಲ್ಲ; ಭಾರತೀಯ ಮತದಾರನ ಮನೋವಿಜ್ಞಾನವನ್ನು ಅರ್ಥಮಾಡಿಕೊಂಡಂತೆ ತೋರುವುದಿಲ್ಲ. ಅಭ್ಯುದಯದ ಪಥದಲ್ಲಿದ್ದ ಭಾರತೀಯ ಜನತಾಪಕ್ಷವಾದರೂ ತನ್ನ ಮೂಲಗುಣಗಳನ್ನು ಳಿಸಿಕೊಂಡಿತೆ? ಇಲ್ಲ. ೧೯೯೬ ರಲ್ಲಿ ಅದು ಸಹ ಶ್ರೀಮಂತರಿಂದ ಹಣ ಪಡೆಯಲು ಮುಂದಾಯಿತೆಂದು ಸಾಹಿತಿ ಮುಲ್ಕ್‌ರಾಜ್‌ಆನಂದ್ ಹೇಳುತ್ತಾರೆ. (ಹಿಂದೂ: ಡಬಲ್ ಸ್ಪೀಕ್. ೧೫–೨–೯೮) ಶ್ರೀಮಂತರಿಂದ ಹಣಪಡೆದವರು ಕಾಂಗ್ರೆಸ್ಸಿಗರಂತೆಯೇ ಆಗುತ್ತಾರೆ. ಭಾಜಪ 'ಹಿಂದುತ್ವ'ದ ಘೋಷಣೆಯನ್ನು ತೊರೆದು 'ಭಾರತೀಯತ್ವ'ದ ಬಾವುಟವನ್ನು ಹಾರಿಸಿದ್ದರೆ ಅದಕ್ಕೆ ಅನುಕೂಲವಾಗುತ್ತಿತ್ತೋ ಏನೊ? ಬಾಬ್ರಿ ಮಸೀದಿಯ ವಿನಾಶ ಆ ಪಕ್ಷದ ಹಿಂಜರಿತಕ್ಕೆ ಕಾರಣವಾಗುತ್ತದೆ. ಈಚೆಗಿನ ಉತ್ತರಪ್ರದೇಶದ ಕಲ್ಯಾಣ್ ಸಿಂಗ್‌ರ ರಾಜಕೀಯ ವೈಖರಿ, ಅದಕ್ಕೆ ಜ್ಯೇಷ್ಠ ನಾಯಕರು ನೀಡಿದ ಬೆಂಬಲದಿಂದಾಗಿ, ಅದು ತನ್ನ ವೈಶಿಷ್ಟ್ಯವನ್ನು ಕಳೆದುಕೊಂಡಿದೆ. ಆದರೆ ಅದಕ್ಕೆ ಜಾತೀಯತೆಯ ಕಳಂಕವನ್ನು ಹಚ್ಚುವುದಾಗಲಿ, ಅದನ್ನು ಅಸ್ಪೃಶ್ಯವೆಂದು ಕರೆಯುವುದಾಗಲಿ ಮಾತ್ಸರ್ಯದ ಅವಿವೇಕದ ಪ್ರವೃತ್ತಿಯೆಂದೇ ಹೇಳಬೇಕಾಗು

ತ್ತದೆ. ಏಕೆಂದರೆ ಜಾತಿವಾದದಿಂದ ಮುಕ್ತವಾದ ಪಕ್ಷಗಳೇ ಇಂಡಿಯಾದಲ್ಲಿಲ್ಲ. ಕಾಂಗ್ರೆಸ್ಸೂ ಪ್ರಚ್ಛನ್ನ ಜಾತಿವಾದಿಯೆ ಹೌದು. ಕುವೆಂಪು ಹೇಳುವಂತೆ ಈ ದೇಶದಲ್ಲಿ ಕಮ್ಯೂನಿಸಮ್ಮಿಗೂ ಕ್ರಾಸು ತಗುಲಿಸುತ್ತಾರೆ, ಮುದ್ರೆಯೊತ್ತುತ್ತಾರೆ, ಲಿಂಗದೀಕ್ಷೆ ಕೊಡುತ್ತಾರೆ, ನಾಮ ಬಳಿಯುತ್ತಾರೆ ಆದ್ದರಿಂದಲೇ ಪ್ರಾದೇಶಿಕ ಪಕ್ಷಗಳ ಪ್ರಾಬಲ್ಯ ದಿನೇ ದಿನೇ ಹೆಚ್ಚುತ್ತಿದೆ, ರಾಷ್ಟ್ರೀಯ ಪಕ್ಷಗಳು ಅವುಗಳ ಆಸರೆ ಪಡೆಯಲು ಕಾತರವಾಗಿವೆ. ಬಾಬ್ರಿ ಮಸೀದಿ ಧ್ವಂಸದ ಪ್ರಕರಣದಲ್ಲಿ ಅಂದಿನ ಸರ್ಕಾರದ ಪಾತ್ರ ಎಷ್ಟರಮಟ್ಟಿನದೆಂಬುದು ನಿರ್ಧಾರವಾಗಬೇಕಾಗಿದೆ.

ಈಗಂತೂ ದುರ್ದೈವದಿಂದಲೆಂಬಂತೆ ರಾಷ್ಟ್ರೀಯ ಪಕ್ಷಗಳು ತಂತಮ್ಮ ಮೂಲ ಸತ್ವವನ್ನು ಕಳೆದುಕೊಂಡು ದುರ್ಬಲವಾಗಿವೆ. ಮಮತಾಬ್ಯಾನರ್ಜಿಯಂಥ ಸ್ವಾಭಿಮಾನದ ಕೆಚ್ಚೆದೆಯ ನಾಯಕಿ, ಜಾರ್ಜ್‌ಫರ್ನಾಂಡಿಸ್‌ರಂಥ ಧೀರ ಧೀಮಂತ ನಿರ್ಭೀತ ಸಮಾಜವಾದಿ ಬಾಬ್ರಿ ಮಸೀದಿಯನ್ನು ಧ್ವಂಸಮಾಡಿದ ಪಕ್ಷದ ಸಖ್ಯಕ್ಕಾಗಿ ಹಾತೊರೆದದ್ದೇ ವಿಚಿತ್ರ; ಅದು ನಿರಾಶೆಯ ಚಿಹ್ನೆಯೆಂದೇ ಹೇಳಬೇಕಾಗುತ್ತದೆ. ಕಾಂಗ್ರೆಸ್ ಕದತಟ್ಟಿ ಅದು ತೆರೆಯದಿದ್ದಾಗ, ಜಾತೀಯ ಪಕ್ಷವೆಂದು ಭಾಜಪವನ್ನು ಹಳಿಯುತ್ತಿದ್ದ ರಾಮಕೃಷ್ಣಹೆಗ್ಡೆಯವರು ಆ ಪಕ್ಷವನ್ನಪ್ಪಿಕೊಂಡದ್ದು ಸಹಜವೇ ಸರಿ. ಜನತಾವೊ, ಜನತಾದಳವೊ, ಕಾಂಗ್ರೆಸ್ಸೊ ಅವುಗಳಲ್ಲಿದ್ದು, ಅವುಗಳಿಂದ ಸಕಲ ಸೌಭಾಗ್ಯಗಳನ್ನನುಭವಿಸಿ, ಅಧಿಕಾರ ವ್ಯಾಮೋಹದಿಂದ ಪಕ್ಷಾಂತರ ಮಾಡುವ, ಗೋಸುಂಬೆಯಂತೆ ಸ್ಥಳ ಸಂದರ್ಭಕ್ಕನುಗುಣವಾಗಿ ಬಣ್ಣ ಬದಲಾಯಿಸುವ ಜನಎಲ್ಲ ದೇಶಗಳಲ್ಲಿ ಎಂದೂ ಇದ್ದವರೇ. ಭ್ರಷ್ಟಾಚಾರದ ಪ್ರತಿರೂಪವೆಂದೇ ಹೇಳಲಾದ ಜಯಲಲಿತ ಅವರ ಎಐಎಡಿಎಂಕೆಯೊಡನೆ ಪಾಣಿಗ್ರಹಣಮಾಡಿಕೊಂಡಾಗಲೇ ಭಾಜಪವನ್ನು ಒರೆಹಚ್ಚಿದಂತಾಗಿದೆ. ಭಾಜಪ ಶಿವಸೇನೆಯ ಹಾಗೂ ಅಕಾಲಿದಳಗಳ ಸಖ್ಯವೂ ದೋಷದೂರವಾಗಿಲ್ಲ, ನಾಡಿನ ಗೌರವಕ್ಕೆ ಪಾತ್ರವಾಗಿಲ್ಲ. ಆದರೆ ಅಯೋಧ್ಯಾಸಮಸ್ಯೆಯ ಬಗ್ಗೆ ಶಿವಸೇನೆ ಸೂಚಿಸಿರುವ ಪರಿಹಾರ ಯೋಗ್ಯವಾಗಿದೆ. ಅನ್ಯಪಕ್ಷಗಳ ಸಖ್ಯದ ವಿಷಯಬಂದಾಗ ಕಾಂಗ್ರೆಸ್ಸನ್ನು ನಂಬುವಂತಿಲ್ಲ. ಅದನ್ನು ದೇಶವೇ ಬಲ್ಲುದು, ಈ ರಾಜಕೀಯ ದೃಶ್ಯಾವಳಿಗಳನ್ನು ನೋಡಿದಾಗ

> ಭಕ್ತರ ಕಂಡರೆ ಬೋಳಪ್ಪರಯ್ಯ,
> ಸವಣರಕಂಡರೆ ಬತ್ತಲೆಯಪ್ಪರಯ್ಯ,
> ಹಾರುವರಕಂಡರೆ ಹರಿನಾಮ ವೆಂಬರಯ್ಯ,
> ಅವರವರ ಕಂಡಡೆ ಅವರವರಂತೆ
> ಸೂಳೆಗೆ ಹುಟ್ಟಿದವರ ಎನಗೆ ತೋರದಿರಯ್ಯಾ,

ಎಂಬ ಬಸವಣ್ಣನವರ ವಚನ ನೆನಪಿಗೆ ಬರುತ್ತದೆ.

ಇದನ್ನೆಲ್ಲ ನೋಡಿದಾಗ ಎಲ್ಲ ಪಕ್ಷಗಳೂ ಒಳಿತು ಕೆಡುಕುಗಳ ಸಮ್ಮಿಶ್ರಣವೆಂದೇ ಹೇಳಬೇಕು. ತತ್ತ್ವನಿಷ್ಠೆಯಂತು ಎಲ್ಲಿಯೂ ಇಲ್ಲ. ಸಮಯ ಸಂದರ್ಭಾನುಸಾರವಾಗಿ ಈ ಒಳಿತು ಕೆಡುಕುಗಳನ್ನು ತುಲನಾತ್ಮಕವಾಗಿ ಪರೀಕ್ಷಿಸಬೇಕಾಗುತ್ತದೆ. ಪಕ್ಷಗಳು ಸೃಷ್ಟಿಸಿರುವ ಗೊಂದಲದಿಂದಾಗಿ, ಭಾರತೀಯ ಮತದಾರ ಕವಲುದಾರಿಯಲ್ಲಿದ್ದಾನೆ; ಹಲವು ದಾರಿಗಳು ಸೇರುವ ನಾಭಿಯಲ್ಲಿ ನಿಂತು ಬೆಪ್ಪರಗಾಗಿ ಪೆಬ್ಬಳಿಸುತ್ತಿದ್ದಾನೆ. ಗಾಂಧೀಜಿಯಂಥವರು, ಪಟೇಲ್, ರಾಜೇಂದ್ರಪ್ರಸಾದ್, ಜಯಪ್ರಕಾಶನಾರಾಯಣರಂಥವರು ಸಿಗುವುದಿಲ್ಲ. ಇದ್ದದ್ದರಲ್ಲಿ—ಒಂದು ಟನ್ ತೌಡಿನಲ್ಲಿ ಎರಡು ಗಟ್ಟಿಕಾಳು ಆರಿಸಿಕೊಳ್ಳುವಂತೆ—ಪರವಾಗಿಲ್ಲ ಎನ್ನಬಹುದಾದವರನ್ನು ಆರಿಸಿಕೊಳ್ಳಬೇಕಾಗಿದೆ.

ಇಂಥ ಚುನಾವಣೆಗಳಿಗೆ ಭಾರತ ತೆರಬೇಕಾದ ಬೆಲೆ ಅತಿಯಾದರೂ, ದೂರ ನಿಂತು ನೋಡುವವರಿಗೆ ಅವು ತಮಾಷೆಯ, ವಿಡಂಬನೆಯ ಖೋಟಾ ನಾಟಕಗಳಂತೆ ತೋರುತ್ತವೆ. ಪಕ್ಷಗಳ ಮತ್ತು ನಾಯಕರ ಸ್ವಪ್ರಶಂಸೆ, ಪರಸ್ಪರ ಮೂದಲಿಕೆಗಳಲ್ಲಿ ಅತಿಶಯೋಕ್ತಿ ಉತ್ಪ್ರೇಕ್ಷೆ ನೀಚತನ ವ್ಯಾಜನಿಂದೆ ನಿಂದಾಸ್ತುತಿಗಳೊಂದಿಗೆ, ಅವರವರ ಗುಣಸ್ವಭಾವ ಸಂಸ್ಕೃತಿ ಮನೋಧರ್ಮ ನೀಚತನಗಳು ಅಭಿವ್ಯಕ್ತವಾಗುತ್ತವೆ. ಪತ್ರಿಕೆಗಳಲ್ಲಿ ಪ್ರಕಟಗೊಂಡಿರುವ ವ್ಯಾಗನ್ ಭರ್ತಿಯ ಸ್ತುತಿನಿಂದೆಗಳ ಪೈಕಿ ಕೆಲವು ತುಣುಕುಗಳನ್ನು ಮಾತ್ರ ಇಲ್ಲಿ ಕೊಡಲಾಗಿದೆ.

'ಸೀತಾರಾಮ ಕೇಸರಿ ಗಾಂಧೀಜಿಯ ಅಂತಿಮ ಸಂದೇಶವನ್ನು ದೃಢಹಠದಿಂದ ಕಾರ್ಯಗತಗೊಳಿಸುತ್ತಿದ್ದಾರೆ; ಕಾಂಗ್ರೆಸ್ ಪಕ್ಷವನ್ನು ಸಮೂಲವಾಗಿ ಉತ್ಪಾಟನೆಮಾಡುತ್ತಿದ್ದಾರೆ. ಜಯಲಲಿತರ ರೂಪವನ್ನು ನೋಡಿ ಕೆಲವು ಪಕ್ಷಗಳು ಸಖ್ಯಬೆಳೆಸುತ್ತಾರೆ, ನಿಜ. ಕೇಸರಿಯಲ್ಲಿ ಯಾವ ರೂಪವಿದೆ. ಅವರೊಬ್ಬ ಕುರೂಪಿ. ಸ್ವಪ್ರತಿಷ್ಠೆಗಾಗಿ, ಸಂಯುಕ್ತರಂಗದ ಬೆಂಬಲವನ್ನು ಹಿಂತೆಗೆದುಕೊಂಡು ದೇಶದ ಮೇಲೆ ಚುನಾವಣೆಯ ಭಾರವನ್ನು ಹೇರಿದರು.'

'ವಿದೇಶಿಯ ಸಾಮಾನ್ಯ ಮಹಿಳೆಯೊಬ್ಬಳು ಇಲ್ಲಿಯ ಪುರುಷನೊಬ್ಬನ ಕೈ ಹಿಡಿಯಲಾಗಿ ಈಗ ಭಾರತೀಯ ನಾಯಕಿಯಾಗಿದ್ದಾರೆ; ಅಲ್ಲಿ ಸೊನ್ನೆಯಾಗಿರಬೇಕಾಗಿದ್ದವರು ಇಲ್ಲಿ ಪೂರ್ಣರಾಗಿದ್ದಾರೆ. ಇಲ್ಲಿಯ ಪವಾರ್, ಸಿಂಧ್ಯ, ಅರ್ಜುನ್‌ಸಿಂಗ್, ತಿವಾರಿ ಮೊದಲಾದವರೆಲ್ಲ ಸೊನ್ನೆಯಾಗಿ, ಕಾಂಗ್ರೆಸ್‌ಗೆ ನಾಯಕತ್ವದ ಕ್ಷಾಮವೊದಗಿದೆ. ಬೊಫರ್ಸ್ ಕಳಂಕ ಮೆತ್ತಿಕೊಂಡಿರುವ, ಕ್ವತ್ರಾಚಿಯ ಸಖ್ಯವನ್ನು ಹೊಂದಿರುವ ಆ ಹೆಣ್ಣು ಕಾಂಗ್ರೆಸ್ಸಿನ ಏಕಮಾತ್ರ ನಾಯಕಿಯಾಗಿದ್ದಾರೆ. ಕಾಂಗ್ರೆಸ್ಸಿನ ಎಲ್ಲ ಪುರುಷರೂ ಅವರ ಕೃಪಾಕಟಾಕ್ಷಕ್ಕಾಗಿ ಹಂಬಲಿಸುವಂತಾಗಿದೆ. ವಿದೇಶೀಯ

ಮಹಿಳೆ ಭಾರತದ ಪ್ರಧಾನಿಯಾಗುವುದೆಂದರೇನು? ಅವರಿಗೆ ಬದಲಾಗಿ ಕೆಲವು ತಿಂಗಳ ಹಿಂದೆ ಇಂಡಿಯಾಕ್ಕೆ ಬಂದಿದ್ದ ಎಲಿಜಬೆತ್ ರಾಣಿಯನ್ನೆ ಇಲ್ಲಿರಿಸಿಕೊಳ್ಳಬಹುದಿತ್ತು.'

'ಸೋನಿಯಾ ವಿದೇಶೀಯರಾದರೆ, ಅಡ್ವಾನಿ ಗುಜ್ರಾಲ್‌ರೂ ವಿದೇಶೀಯ ರಲ್ಲವೆ? ವಾಜಪೇಯಿ ೧೯೪೨ರಲ್ಲಿ ಕ್ವಿಟ್ ಇಂಡಿಯಾ ಚಳುವಳಿ ಕಾಲದಲ್ಲಿ ಅಂದಿನ ಸರ್ಕಾರಕ್ಕೆ ಕ್ಷಮಾಪಣಾಪತ್ರ ಬರೆದುಕೊಟ್ಟು ಸೆರೆಮನೆವಾಸದಿಂದ ತಪ್ಪಿಸಿಕೊಳ್ಳಲಿಲ್ಲವೆ? ಅವರು ತತ್ವನಿಷ್ಠೆಯುಳ್ಳವರಾಗಿದ್ದರೆ ಕಲ್ಯಾಣಸಿಂಗರ ಹೊಣೆಗೇಡಿಯ ನೀಚತನವನ್ನು ನಿಯಂತ್ರಿಸಲಿಲ್ಲವೇಕೆ? ಭಾಜಪ ಅಧಿಕಾರಕ್ಕೆ ಬಂದರೆ ಅಲ್ಪಸಂಖ್ಯಾತರ ಗತಿಯೇನು?'

'ರಾಜೀವ್‌ಗಾಂಧಿಯವರ ಪತ್ನಿ ವಿದೇಶೀಯಳೆಂದು ಕರೆಯುವುದೇ ಮೂರ್ಖ ತನ. ನಾಡಿಗೆ ಸ್ವಾತಂತ್ರ್ಯವನ್ನು ತಂದುಕೊಟ್ಟ, ಕಾಂಗ್ರೆಸ್ಸನ್ನು ಬೆಳೆಸಿದ ಮನೆತನದ ಸೊಸೆಯಾಗಿ ಆ ವಂಶದ ಹಾಗೂ ಕಾಂಗ್ರೆಸ್ಸಿನ ನ್ಯಾಯವಾದ ಉತ್ತರಾಧಿಕಾರಿ ಅವರಲ್ಲವೆ? ರಾಜ್ಯಾಂಗದ ಪ್ರಕಾರ ಅವರ ಪ್ರಧಾನಿಪಟ್ಟಕ್ಕೆ ಯಾವ ಅಡೆತಡೆಯೂ ಇಲ್ಲ. ಕರಾರುವಾಕ್ಕಿಗಾಗಿ ಅವರು ಬರೆದ ಭಾಷಣ ವನ್ನೋದಿದರೆ ತಪ್ಪೇನು? ಅಷ್ಟರಿಂದಲೇ ತೃಣಮೂಲನಾಯಕಿಯಲ್ಲವೆನ್ನ ಬಹುದೆ? ಅವರೆಂದೋ ರಾಜಕೀಯ ಕ್ಷೇತ್ರವನ್ನು ಪ್ರವೇಶಿಸಬಹುದಿತ್ತು. ಪತಿವಿಯೋಗ ದುಃಖದಿಂದ ಯಾವ ಅಧಿಕಾರವೂ ಬೇಡವಾಗದೆ ಭಾರತೀಯ ಸ್ತ್ರೀ ಧರ್ಮಕ್ಕನುಗುಣವಾಗಿ ಆರೇಳು ವರ್ಷ ಮೌನವ್ರತ ಧಾರಣೆಮಾಡಿ, ತಪಸ್ವಿನಿಯಂತೆ ಬಾಳು ನಡಸಲಿಲ್ಲವೆ?'

'ಅಟಲ್ ಬಿಹಾರಿಯಂಥ ದೇಶಪ್ರೇಮಿ, ವಾಗ್ಮಿ, ಶುದ್ಧ ಹಸ್ತ, ಧರ್ಮವೀರ, ದಕ್ಷ, ವಿದ್ವಾಂಸ, ಪುರುಷಪುಂಗವ ಈ ದೇಶದಲ್ಲಿ ಮತ್ತೊಬ್ಬನುಂಟೆ? ಪಕ್ಷ ಭೇದ, ಜಾತಿಭೇದ, ಪ್ರಾಂತಭೇದವಿಲ್ಲದೆ ಸಮಗ್ರ ಭಾರತೀಯರ ಹೃದಯ ಸಿಂಹಾಸನದಲ್ಲಿ ರಾರಾಜಿಸುತ್ತಿರುವ ನಾಯಕಬೇರೊಬ್ಬನುಂಟೆ?'

'ಸ್ಥಿರ ಸರ್ಕಾರದಿಂದಲ್ಲದೆ ದೇಶದ ಪ್ರಗತಿ ಸಾಧ್ಯವಿಲ್ಲ; ಭದ್ರತೆ ಲಭಿಸದು, ಅನ್ಯರಾಷ್ಟ್ರಗಳಲ್ಲಿ ಭಾರತದ ಬಗ್ಗೆ ವಿಶ್ವಾಸವಮೂಡದು. ಸಂಯುಕ್ತರಂಗದಿಂದ ಇಂಥ ಸರ್ಕಾರ ಸಾಧ್ಯವಿಲ್ಲ, ಆರ್ಥಿಕ ಪ್ರಗತಿ ಗಗನ ಕುಸುಮವಾಗು ತ್ತದಲ್ಲವೆ?'

'ವಿವಿಧೋದ್ದೇಶವುಳ್ಳ ಹದಿಮೂರು ಪಕ್ಷಗಳು ಸಾಮರಸ್ಯದಿಂದ ಸುಮಾರು ಎರಡು ವರ್ಷ ಯಶಸ್ವಿಯಾಗಿ ಅಧಿಕಾರ ನಡಸಲಿಲ್ಲವೆ? ಜಮ್ಮು ಕಾಶ್ಮೀರ ಪಂಜಾಬುಗಳಲ್ಲಿ ಚುನಾವಣೆ ನಡಸಲಿಲ್ಲವೆ? ಈಶಾನ್ಯ ಪ್ರಾಂತ್ಯಗಳಲ್ಲಿ ಶಾಂತಿ ನೆಲೆಸಲು ಸೂಕ್ತಕ್ರಮ ಕೈಗೊಳ್ಳಲಿಲ್ಲವೆ? ನೆರೆಹೊರೆಯ ರಾಷ್ಟ್ರಗಳೊಡನೆಯ ಮೈತ್ರಿ ಅಭಿವೃದ್ಧಿಯಾಗಲಿಲ್ಲವೆ? ಅವರ ಪತನಕ್ಕೆ ಕಾರಣ ಸಂಯುಕ್ತರಂಗದ

ಸದಸ್ಯ ಪಕ್ಷಗಳಲ್ಲ, ಕಾಂಗ್ರೆಸ್ ಎಂಬುದನ್ನು ಜನ ಅರಿಯಬೇಕಾಗಿದೆ. ವೈವಿಧ್ಯಬಾಹುಳ್ಯವುಳ್ಳ ಭರತಖಂಡಕ್ಕೆ ಇನ್ನುಮುಂದೆ ಸಂಯುಕ್ತರಂಗ ಆಡಳಿತವೇ ಗತಿ ಅನ್ಯ ವಿಧಾನವೇ ನಾಸ್ತಿ.'

'ಸಂಯುಕ್ತರಂಗ ಏನಿದ್ದರೂ ಹೊರಗಿನಿಂದ ಬೆಂಬಲ ಪಡೆಯಬಾರದು. ಹೊಣೆಗಾರಿಕೆಯಿಲ್ಲದೆ ಅಧಿಕಾರದ ಎಲ್ಲ ಸೌಲಭ್ಯಗಳನ್ನನುಭವಿಸಬೇಕೆನ್ನುವ ಪಕ್ಷವನ್ನು ನಂಬಬಾರದು.'

'ಕರ್ನಾಟಕದ ನಾಯಕರೊಬ್ಬರು ಬೆಂಗಳೂರಿನ ಪತ್ರಿಕಾ ಪ್ರತಿನಿಧಿಗಳ ಪ್ರಶ್ನೆಗಳಿಗೆ ನಾಗರಿಕರಿಗೆ ಸಲ್ಲದ ಅಶ್ಲೀಲ ಉತ್ತರ ನೀಡುತ್ತಾರೆ. 'ದೇವೇಗೌಡರು ಪಾರದರ್ಶಿಕೆಯ ವಿಚಾರ ಮಾತಾಡುತ್ತಾರೆ. ಪಾರದರ್ಶಿಕೆಗೆ ಸಾಕ್ಷಿಯಾಗಿ ಅವರು ಲುಂಗಿಯನ್ನು ಮೇಲೆತ್ತುತ್ತಾರೆ' (ಹಿಂದು : ೧೬-೨-೯೮ ಹಿ ಲಿಫ್ಟೆಡ್ ಹಿಸ್ ಲುಂಗಿ ಟು ಬಿ ಟ್ರಾನ್ಸ್‌ಫರೆಂಟ್) ಪಾಪ ಆ ನಾಯಕರ ಕಣ್ಣು ಯಾವಾಗಲೂ ಗೌಡರ ಲುಂಗಿಯನ್ನೆ ನೋಡುತ್ತದೆಂದು ತೋರುತ್ತದೆ. ಆಕಾಶದಲ್ಲಿ ಹಾರಾಡುವ ಗಿಡಗನ ಕಣ್ಣು ಯಾವಾಗಲೂ ನೆಲದ ಮೇಲೆ ಕೊಳೆತು ನಾರುವ ಕ್ರಿಮಿಕೀಟಗಳ ಕಡೆಗಿರುತ್ತದೆ. ಎತ್ತಿನ ಹಿಂದೆಯೇ ತಿರುಗುವ ಪಂಚತಂತ್ರದ ನರಿಯನ್ನೆ ಹೋಲುವ, ಸೊಂಟದ ಕೆಳಗಿನ ವಿಷಯ ಕುರಿತು ಮಾತಾಡುವ ಕೀಳುನಾಯಕರೆಂದರೆ ಅವರೊಬ್ಬರೇ. ಬಸು, ಅಟಲ್, ಅದ್ವಾನಿ, ಸುರ್ಜಿತ್‌ಸಿಂಗ್, ಠಕ್ಕರೆ, ಸೋನಿಯಾ, ಕಾನ್ಷಿರಾಂ, ಮುಲಾಯಮ್‌ಸಿಂಗ್, ಪಾಸ್ವಾನ್, ಕರುಣಾನಿಧಿ—ಯಾರೇ ಆಗಲಿ ಅವರ ಬಾಯಿಂದ ಕೆಟ್ಟ ಶಬ್ದಗಳು ಬಂದದ್ದಿಲ್ಲ. ಇಂಥ ಪ್ರಸಂಗಗಳಿಂದ ನಾಯಕರ ಮನೋಧರ್ಮವನ್ನು ಸುಲಭವಾಗಿ ಗುರುತಿಸಬಹುದಾಗಿದೆ. ತಂತಮ್ಮ ಮನೋಧರ್ಮ ವರ್ತನೆಗಳನ್ನು ಇತರರಲ್ಲಿ ಕಾಣಲು ಪ್ರಯತ್ನಿಸುತ್ತಾರೆ.'

ಈ ಚುನಾವಣೆಯ ಪರಿಣಾಮವಾಗಿ ಮೇಲ್ಕಾಣಿಸಿರುವ ನಾಟಕೀಯ ಪ್ರಸಂಗಗಳಲ್ಲದೆ ಇನ್ನೂ ಹಲವು ಅಂಶಗಳು ಹೊರಬೀಳುತ್ತವೆ. ಅಯೋಧ್ಯೆ ಉರಿಯುತ್ತಿದ್ದಾಗ ಸಂಗೀತ ಕೇಳುತ್ತ ಮಲಗಿದ್ದರೆಂಬ ಕಾರಣಕ್ಕಾಗಿ, ಮುಖ್ಯವಾಗಿ ವೈಯಕ್ತಿಕ ದ್ವೇಷದಿಂದಾಗಿ, ಐದುವರ್ಷದ ಆಳ್ವಿಕೆಯಿಂದ ಕಾಂಗ್ರೆಸ್ಸಿನ ಕೀರ್ತಿಯನ್ನು ಉಳಿಸಿದ ಪಿ. ವಿ. ನರಸಿಂಹರಾಯರನ್ನು ಅವರ ಎಲ್ಲ ಕಾರ್ಯಗಳಿಗೆ ಸಹಿಹಾಕಿದ ಕೇಸರಿಯಂಥವರು ನಿರ್ಲಜ್ಜೆಯಿಂದ ಕೃತಘ್ನತೆಯಿಂದ ಮೂಲೆಗುಂಪಾಗಿಸಿದ್ದು ಘೋರ ಸ್ವಪ್ನದಂತಿದೆ. ರಾಜಕಾರಣಿಗಳ ಪ್ರಣಾಳಿಕೆಗಳಾಗಲಿ, ಭಾಷಣಗಳಾಗಲಿ ಬರಿಯ ಬುರುಡೆಯೆಂಬುದು ಜನರಿಗೆ ಗೊತ್ತಾಗಿದೆ. ಶೋಷಕರು, ದರೋಡೆಕೋರರು, ಕೊಲೆಗಾರರು, ಸರ್ಕಾರಿ ನೆಲ ಒತ್ತುವರಿಸಿಕೊಂಡಿರುವವರು ಧರ್ಮರಾಯನ ಮರಿಮಕ್ಕಳಂತೆ ಬೂರಿ

ಬಿಡುತ್ತಾರೆಂಬ ಸಂಗತಿ ಸಾಮಾನ್ಯರಿಗೂ ಮನದಟ್ಟಾಗಿದೆ. ಏನೋ ಹೇಳಿ, ಹೇಳಿದ್ದು ನಡೆಯದಿದ್ದಾಗ, ಏನಾದರೊಂದು ಕತೆಕಟ್ಟಿ ನಂಬಿಸುವ ಜ್ಯೋತಿಷ್ಯರಿಗೆ ಮತ್ತು ಸ್ವಾಮಿಗಳಿಗೆ ಇದೊಂದು ಪೊಗದಸ್ತಾದ ಪೊಂಪುಳಿ ಹಬ್ಬ. ಮೌಮೌ, ಮಾಫಿಯಾಗುಂಪಿಗೆ ಸೇರಿದ ಉಗ್ರರಿಗಂತೂ ಈ ಸಮಯ ಸಂತೋಷಸಮಯ. ಅತೃಪ್ತಿಯಿಂದ, ಮಾತ್ಸರ್ಯದಿಂದ, ವ್ಯಕ್ತಿದ್ವೇಷದಿಂದ, ಹತಾಶೆಯಿಂದ ಮೂಲಪಕ್ಷದಿಂದ ಸಿಡಿದ ಸಿಪುರುಗುಂಪುಗಳ, ಗುಳ್ಳೆನರಿಗಳ, ಕೂಗುಮಾರಿಗಳ, ಬಕಧ್ಯಾನಿಗಳ, ಶಕುನಿಗಳ ಅರಚುಕಿರುಚುಗಳನ್ನು ನೋಡಿ ನಗಬಹುದು. ಈ ಸಂದರ್ಭದಲ್ಲಿ ಎಲ್ಲ ನಾಯಕರ ಗುಟ್ಟುಗಳು ರಟ್ಟಾಗುತ್ತವೆ. ಯಾವ ಯಾವ ಪತ್ರಿಕೆ ಯಾರ ಯಾರ ಕಡೆಗಿವೆ, ಯಾರು ಯಾರಿಂದ ಅವು ಉಪಕಾರ ಪಡೆದಿವೆ, ಅವು ಯಾರ ಮೇಲೆ ಸುಳ್ಳು ಬರೆಯುತ್ತವೆ, ಚಾರಿತ್ರ್ಯ ವಿನಾಶಕರ ಧಾಳಿ ನಡೆಸುತ್ತವೆ ಎಂಬುದು ಹಳ್ಳಿಗರಿಗೂ ಅರ್ಥವಾಗುತ್ತವೆ. ಅಮೃತಸರ ಸುವರ್ಣಮಂದಿರದ ಮೇಲಣ ಧಾಳಿ, ಇಂದಿರಾ ಮರಣೋತ್ತರ ಸಿಖ್ ಮಾರಣಹೋಮ, ಬಾಬ್ರಿ ಮಸೀದಿ ವಿನಾಶದ ಬಗ್ಗೆ ನಾಯಕ ನಾಯಿಕೆಯರು ಮೊಸಳೆ ಕಣ್ಣೀರು ಸುರಿಸಿದರೆ ಯಾರಾದರೂ ನಂಬುತ್ತಾರೆಯೆ? ಧ್ರುವೀಕರಣ ಮತ್ತು ಪಕ್ಷಾಂತರಕ್ಕೆ ಜಾತಿವಾಸನೆಯ ಕಾರಣವಿರಬಹುದೆಂಬ ಮಾತೂ ಇದೆ.

ಏನೇ ಇರಲಿ, ಚುನಾವಣೆಯ ಫಲಶ್ರುತಿ, ಅನಿಶ್ಚಿತ ಅತಂತ್ರಸ್ಥಿತಿ!

ಭಾರತೀಯ ಜನತಾಪಕ್ಷ ದೊಡ್ಡ ಪಕ್ಷವಾಗಿ ಚಿಮ್ಮಿದರೂ, ಸಂಯುಕ್ತ ರಂಗದಲ್ಲಿ ಸಾಮರಸ್ಯವಿದ್ದರೂ ಸೋನಿಯಾಗಾಂಧಿ ಕಾಂಗ್ರೆಸ್ಸಿನ ನಾಯಕಿಯಾಗಿ ಹೊಮ್ಮಿದರೂ, ಸರ್ಕಾರ ರಚನೆಗೆ ಕಸರತ್ತು ಅನಿವಾರ್ಯ. ಅತಂತ್ರ ಪರಿಸ್ಥಿತಿಯೊದಗಿದಾಗ ಏನುಮಾಡಬೇಕೆಂಬುದನ್ನು ರಾಜ್ಯಾಂಗದ ತಿದ್ದುಪಡಿಯೋ, ಸರ್ವಪಕ್ಷಗಳ ರಾಷ್ಟ್ರೀಯ ಸಮಿತಿಯೋ, ಸಮಸ್ಯ ಪರಿಹಾರಾತ್ಮಕ ಮತದಾನವೊ (ರೆಫರೆಂಡಮ್) ನಿರ್ಣಯಿಸಬೇಕಾಗಿದೆ. ದೇಶಪ್ರೇಮ, ವಿವೇಕ, ವೀತರಾಗಭಯಕ್ರೋಧ ಪ್ರವೃತ್ತಿಯ, ಪರಿಪಕ್ವಾನುಭವದ ನಾಯಕತ್ವ ಈ ದೇಶದಲ್ಲಿದೆಯೆನ್ನುವ ಹೆಮ್ಮೆಯನ್ನು ಚುನಾಯಿತ ಸದಸ್ಯರು ಲೋಕಕ್ಕೆ ತೋರಿಸಬೇಕಾಗಿದೆ!

ದೇಜಗೌ

ಹುತಾತ್ಮ ನೇತಾಜಿ ಚಿರಾಯುವಾಗಲಿ

ಪ್ರಲಯಕಾಲದ ಪ್ರಭಂಜನನಂತೆ ಬಾಡಬನಂತೆ ಬೀಸಿ ಸಿಡಿದು ಬ್ರಿಟಿಷ್ ಸಾಮ್ರಾಜ್ಯಕ್ಕೆ ಆಸನಕಂಪನವನ್ನುಂಟುಮಾಡಿದ ನೇತಾಜಿ ಸುಭಾಷ್‌ಚಂದ್ರ ಬೋಸ್ ಬದುಕಿದ್ದರೆ ಈಗ ನೂರು ವರ್ಷವಾಗುತ್ತಿತ್ತು. ಗಾಂಧೀಜಿಯ ನಂತರ ದೇಶಕ್ಕೆ ಸ್ವಾತಂತ್ರವನ್ನು ತಂದುಕೊಟ್ಟ ಹುತಾತ್ಮರಲ್ಲಿ ಅವರು ಅಗ್ರಗಣ್ಯರು. ಗಾಂಧಿಯಂಥ ವಟವೃಕ್ಷದ ಕೆಳಗೆ ಸಣ್ಣ ಪುಟ್ಟ ಗಿಡಮರಗಳು ಬೆಳೆಯುವುದಿಲ್ಲ; ಅಂತೆಯೇ ಆ ಮಹಾತ್ಮರವಿಯ ಬೆಳಕಿನಲ್ಲಿ ಚಂದ್ರನಂಥ ಗ್ರಹವೂ ಕಾಣಿಸುವುದಿಲ್ಲ. ಆದ್ದರಿಂದಲೇ ಸೂರ್ಯ ಪೂರ್ವಗೋಲದಲ್ಲಿದ್ದಾಗ ಚಂದ್ರ ಪಶ್ಚಿಮ ಗೋಲದಲ್ಲಿರುತ್ತಾನೆ.

ಸ್ವಾತಂತ್ರ್ಯ ಸಂಪಾದನೆಯಲ್ಲಿ ಗಾಂಧೀಜಿಯ ಅಹಿಂಸಾಮಾರ್ಗದಷ್ಟು ಸಮ ಪ್ರಮಾಣದಲ್ಲಿಲ್ಲದಿದ್ದರೂ, ಸಾಕಷ್ಟು ಪ್ರಮಾಣದಲ್ಲಿ ಸುಭಾಷ್‌ಚಂದ್ರ ಬೋಸರ ಕ್ರಾಂತಿ ಮಾರ್ಗವೂ ನೆರವಾಯಿತೆಂಬುದರಲ್ಲಿ ಸಂದೇಹವಿಲ್ಲ. ಗಾಂಧಿ ಬೋಸರು ಸಮರಾಂಗಣದಲ್ಲಿ ಧುಮುಕುವುದಕ್ಕೆ ಮುಂಚೆಯೇ ಸ್ವಾತಂತ್ರ್ಯ ಸಮರಸಿದ್ಧತೆ ನಡೆದಿತ್ತೆಂದೇ ಹೇಳಬಹುದು. ಅದು ಆರಂಭವಾದದ್ದೇ ೧೮೫೭ರಲ್ಲಿ. ಅಲ್ಲಿಂದೀಚೆಗೆ ಚಾಪೇಕರ್ ಸೋದರರು, ಸತೀಶ್‌ಬೋಸ್ ವೀರೇಂದ್ರನಾಥ ಚಟ್ಟೋಪಾಧ್ಯಾಯ, ಮದನಲಾಲ್‌ಡಿಂಗ್ರಾ, ಪಿಂಗಳೆ, ಖುದಿರಾಮ್‌ಬೋಸ್, ಜತೀಂದ್ರದಾಸ್, ಮೊದಲಾದ ಕ್ರಾಂತಿವೀರರು ಫ್ರಾನ್ಸ್ ಮತ್ತು ರಷ್ಯನ್ ಕ್ರಾಂತಿಕಾರರೊಡನೆ ಸಂಬಂಧವಿಟ್ಟುಕೊಂಡು, ಬಾಂಬ್ ತಯಾರಿಸುತ್ತಾರೆ, ಬ್ರಿಟಿಷ್ ಜಿಲ್ಲಾಧಿಕಾರಿಗಳನ್ನು, ಪ್ರಜೆಗಳನ್ನು ಕೊಲ್ಲುತ್ತಾರೆ, ತಾವೂ ನೇಣುಗಂಬವನ್ನೇರುತ್ತಾರೆ. ರಾಸ್‌ಬಿಹಾರಿ ಬೋಸ್ ವೈಸ್‌ರಾಯ್ ಹಾರ್ಡಿಂಗ್‌ನ ಮೇಲೆ ಬಾಂಬೆಸೆಯುತ್ತಾನೆ. ಮದನಲಾಲ್ ಢಿಂಗ್ರ ಎನ್ನುವವನು ಇಂಗ್ಲೆಂಡಿನಲ್ಲಿ ಕರ್ಜನ್ ವೈಲಿಯನ್ನು ಕೊಲೆಮಾಡುತ್ತಾನೆ. ೧೭–೮–೧೯೦೦ರಲ್ಲಿ ನೇಣುಗಂಬವನ್ನೇರುವಾಗ ಅವನೇನು ಹೇಳಿದ? 'ನನ್ನ ದೇಶಕ್ಕಾಗಿ ನನ್ನ ಜೀವನವನ್ನು ಬಲಿಗೊಡುವ ಭಾಗ್ಯದಿಂದಾಗಿ ನನಗೆ ಹೆಮ್ಮೆಯಾಗುತ್ತಿದೆ.' ಪಾಂಡಿಚೆರಿಗೆ ಹೋಗುವ ಮುನ್ನ ಅರವಿಂದೊ ಸಹ ಕ್ರಾಂತಿಕಾರರೇ! ವಿ. ಡಿ. ಸಾವರ್ಕರ್ ಪಟ್ಟಶ್ರಮ, ಮಾಡಿದ ತ್ಯಾಗ ಅನನ್ಯವಾದದ್ದು. ತರುಣ ಕ್ರಾಂತಿವೀರ ಭಗತ್‌ಸಿಂಗ್‌ನ ಕತೆ ಹೃದಯ ವಿದ್ರಾವಕವಾದದ್ದು. ಸಾವಿರಾರು ಯುವಕರು ಗದ್ದರ್ ಚಳುವಳಿಗಾರರು ವಿದೇಶೀಯ ನೆಲೆಗಳಿಂದ ಇಂಡಿಯಾದ ರಾಜಕೀಯ ಕ್ರಾಂತಿಯನ್ನು ಪೋಷಿಸುತ್ತಾರೆ. ಅವರಲ್ಲಿ ಅನೇಕರು ದೇವರಿಗಿಂತ ಮಿಗಿಲಾಗಿ ದೇಶಮಾತೆಯನ್ನು ಆರಾಧಿಸುತ್ತಾರೆ ಇಂಥವರಿಂದ ಬ್ರಿಟಿಷ್ ಸರ್ಕಾರಕ್ಕೆ ನಿದ್ದೆ ಹತ್ತುತ್ತಿರಲಿಲ್ಲ.

ಈ ಹುತಾತ್ಮರ ಸರಣಿಯಲ್ಲಿ ರಾರಾಜಿಸಿದ ಸುಭಾಷ್ ಚಂದ್ರಬೋಸ್‌ರ ಸೈನ್ಯ ಬರ್ಮಾ ಕಡೆಯಿಂದ ಇಂಡಿಯಾದ ಮೇಲೆ ಧಾಳಿ ನಡಸಲಾಗಿ, ಅವರ ಪ್ರೇರಣೆಯಿಂದ ಇಂಡಿಯಾದ ನೌಕಾಬಲದಲ್ಲಿ ಮುಷ್ಕರ ನಡೆಯಲಾಗಿ ಬ್ರಿಟಿಷ್ ಸರ್ಕಾರದ ಜಂಘಾಬಲ ಉಡುಗಿಹೋಗುತ್ತದೆ; ನಿರೀಕ್ಷೆಗಿಂತ ಮೊದಲೇ ಇಂಗ್ಲಿಷರು ಗಂಟುಮೂಟೆ ಕಟ್ಟುತ್ತಾರೆ. ಸುಭಾಷರಿದಿದ್ದಲ್ಲಿ ಸ್ವಾತಂತ್ರ್ಯ ಸಂಪಾದನೆ ತುಂಬ ತಡವಾಗುತ್ತಿತ್ತು. ಅವರು ಗಾಂಧಿಗರಡಿಯಲ್ಲಿ ತಯಾರಾಗುತ್ತಿದ್ದಾಗಲೇ ಕ್ರಾಂತಿ ವಿಧಾನದಿಂದಲ್ಲದೆ ಸ್ವಾತಂತ್ರ್ಯ ಬೇಗ ಕೈಗೂಡಲಾರದೆಂದು ಸಜ್ಜಾಗುತ್ತಿದ್ದರು.

ಗಾಂಧಿ ಬಿಟ್ಟರೆ ಸುಭಾಷರೆ ಆಗಿನ ಅತ್ಯಂತ ಜನಪ್ರಿಯ ವ್ಯಕ್ತಿ. ಆಗ ಆಂಗ್ಲ ಸರ್ಕಾರದ ಒಂದು ಕಣ್ಣು ಕಾಂಗ್ರೆಸ್ಸಿಗರ ಮೇಲಿದ್ದರೆ, ಮತ್ತೊಂದು ಕಣ್ಣು ಬೋಸರನ್ನು ಬೇಟೆಯಾಡುತ್ತಿತ್ತು. ಮಹತ್ವಾಕಾಂಕ್ಷಿ ಜವಾಹರಲಾಲ್ ನೆಹ್ರೂ ಪುರುಷಸಿಂಹ ಸುಭಾಷರಲ್ಲಿ ಪ್ರತಿಸ್ಪರ್ಧಿಯನ್ನು ಕಂಡಿರಬೇಕೆಂದು ತೋರುತ್ತದೆ. ಬೋಸರ ಭಾರತನಿಷ್ಕ್ರಮಣವೇ ಒಂದು ವೀರಗಾಥೆ. ಆಂಗ್ಲ ಸರ್ಕಾರ ಜಗತ್ತಿನಾದ್ಯಂತ ತನ್ನ ಗೂಢಚರ್ಯೆಯ ಬಲೆಯನ್ನು ಬೀಸಿದಾಗಲೂ ಬೋಸರನ್ನು ಪತ್ತೆಹಚ್ಚಲಾಗಲಿಲ್ಲ. ಆಗ, ೧೯೪೫ರಲ್ಲಿ ಜವಾಹರಲಾಲ್ ನೆಹರೂ ಬ್ರಿಟಿಷ್ ಪ್ರಧಾನಿ ಕ್ಲೆಮೆಂಟ್ ಆಟ್ಲಿಗೆ ಬರೆದ ಪತ್ರ ನೆಹರೂ ಅವರ ಮನೋಧರ್ಮಕ್ಕೆ ದರ್ಪಣವಾಗಿದೆ:

'ಪ್ರಿಯ ಆಟ್ಲಿಯವರೆ,

ನೀವು ಹುಡುಕುತ್ತಿರುವ ಅಪರಾಧಿ ಸುಭಾಷ್‌ಚಂದ್ರ ಬೋಸರಿಗೆ ರಷ್ಯವನ್ನು ಪ್ರವೇಶಿಸಲು ಸ್ಟಾಲಿನ್ ಅನುಮತಿ ನೀಡಿದ್ದಾರೆ ಎಂದು ನನಗೆ ವಿಶ್ವಸನೀಯ ಮೂಲಗಳಿಂದ ತಿಳಿದುಬಂದಿದೆ. ಇದು ರಷ್ಯಾದ ವಿಶ್ವಾಸದ್ರೋಹ. ಇಲ್ಲಿಯವರೆಗೆ ರಷ್ಯಾ, ಇಂಗ್ಲೆಂಡ್ ಮತ್ತು ಅಮೆರಿಕಗಳ ನಡುವೆ ಮೈತ್ರಿ ಇತ್ತು. ರಷ್ಯಾ ಇದೀಗ ಹೀಗೆ ಮಾಡಬಾರದಿತ್ತು. ನೀವು ಉಚಿತಕ್ರಮ ಕೈಕೊಳ್ಳುವಿರಿ ಎಂದು ಆಶಿಸುತ್ತೇನೆ.

ನಿಮ್ಮ ಶುಭೇಚ್ಛು,
ಜವಾಹರಲಾಲ್ ನೆಹ್ರೂ'([1])

ನೆಹರೂ ಅವರ ಅಧಿಕಾರಲಾಲಸೆ ಸಮಸ್ಪರ್ಧಿಗಳನ್ನು ಸಹಿಸುತ್ತಿರಲಿಲ್ಲವೆಂಬುದಕ್ಕೆ ವಲ್ಲಭಭಾಯಿ ಪಟೇಲರೂ ನಿದರ್ಶನವಾಗಿದ್ದಾರೆ. ಈಗ

[1] ಕನ್ನಡ ಕಣ್ಮಣಿ, ಸಂ. ಗೋವಿಂದಹಳ್ಳಿ ದೇವೇಗೌಡ, ೧೪–೯, ಫೆಬ್ರುವರಿ ೧೯೯೦.

ಹನುಮಂತಯ್ಯನವರಿಲ್ಲ; ನಿಜಲಿಂಗಪ್ಪನವರನ್ನು ಕೇಳಿ—ನೆಹರೂ ಎಂಥವರೆಂಬುದು ಗೊತ್ತಾಗುತ್ತದೆ.

ನೆಹರೂ ಮಹಾನ್‌ವ್ಯಕ್ತಿ, ಮಹಾತ್ಯಾಗಿ, ನಿಜ. ಆದರೆ ಸುಭಾಷ್‌ಚಂದ್ರ ಬೋಸರ ತ್ಯಾಗ, ಸಾಹಸ, ಧೈರ್ಯಗಳ ಮುಂದೆ ನೆಹರೂ ಅವರದೇನೂ ಇಲ್ಲ. ಮನಸ್ಸಿನಲ್ಲಿ ಗಾಂಧಿತತ್ತ್ವ ಬೇಡವಾಗಿದ್ದರೂ, ಭವಿಷ್ಯದ ದೃಷ್ಟಿಯಿಂದ ರಾಜಕೀಯ ಚತುರ ನೆಹರೂ ಅವರಿಗಂಟಿಕೊಳ್ಳುತ್ತಾರೆ. ನಡೆನುಡಿ ಒಂದಾಗಿದ್ದ ಬೋಸ್ ಗಾಂಧಿತತ್ತ್ವವನ್ನೊಪ್ಪದೆ, ಅವರಿಂದ ದೂರ ಸಿಡಿದು ಸ್ವತಂತ್ರ ಮನೋಧರ್ಮವನ್ನು ಮೆರೆಯುತ್ತಾರೆ. ಸ್ವಾತಂತ್ರ್ಯಾವತಾರದ ಸಮಯದಲ್ಲಿ ಇಂಡಿಯಾದ ಹೊರಗೊಳಗೆ ರಾಜನೀತಿಯನ್ನು ಆಡಳಿತ ನೀತಿಯನ್ನು ಕುದುರಿಸಲು ನೆಹರೂ ಅವರಂಥ ಮುತ್ಸದ್ದಿಯ ಬುದ್ಧಿ ಚಾತುರ್ಯ ಹಾಗೂ ವ್ಯಕ್ತಿಮಹಿಮೆ ಅನಿವಾರ್ಯವಾಗಿತ್ತು. ಸರದಾರ್ ವಲ್ಲಭಭಾಯಿ ಪಟೇಲ್‌ರಂಥ ಉಕ್ಕಿನ ಮನುಷ್ಯ ಇರದಿದ್ದರೆ ದೇಶದ ಸ್ಥಿತಿಗತಿ ಏನಾಗುತ್ತಿತ್ತೊ ಕಲ್ಪನೆಗೂ ನಿಲುಕದ ಸಂಗತಿ. ಆದರೆ ಆ ಮನೆತನದವರು ದೇಶಕ್ಕೆ ಕೊಟ್ಟದ್ದಕ್ಕಿಂತ ತೆಗೆದುಕೊಂಡದ್ದೇ ಹೆಚ್ಚು, ಮಾಡಿದ ತ್ಯಾಗಕ್ಕಿಂತ ಅನುಭವಿಸಿದ ಭೋಗವೇ ಅಧಿಕ. ಗಾಂಧಿ ಸುಭಾಷ್ ಪಟೇಲ್ ಗಡಿನಾಡಿನ ಗಾಂಧಿಯವರ ತ್ಯಾಗಕ್ಕಿಂತ ನೆಹರೂ ಮನೆತನದವರ ತ್ಯಾಗ ದೊಡ್ಡದಲ್ಲ; ನೆಹರೂ ವಂಶಜರು ಗಾಂಧಿ ಹೆಸರಿನಲ್ಲಿ ಗಾಂಧಿವಂಶಜರೆಂಬ ಭ್ರಮೆಹುಟ್ಟಿಸಿ, ಅಧಿಕಾರ ರುಚಿಯನ್ನನುಭವಿಸಿದಂತೆ ಉಳಿದ ತ್ಯಾಗಿಗಳ ಮಕ್ಕಳು ಅನುಭವಿಸಿಲ್ಲವೆಂಬುದು ಸರ್ವವೇದ್ಯ. ಅದೂ ಇರಲಿ, ಅಜಾದ್ ಹಿಂದ್ ಫೌಜಿನ ಸೇನಾನಾಯಕರನ್ನು ಸ್ವತಂತ್ರ ಭಾರತದ ಸೈನ್ಯಕ್ಕೆ ಸೇರಿಸಿಕೊಳ್ಳುವ, ಭಾರತದ ಮೂಲೆ ಮೂಲೆಗಳಲ್ಲಿ ಹುತಾತ್ಮ ಬೋಸರ ಸಾಹಸ ಗಾಥೆಯನ್ನು ಪ್ರಚುರಪಡಿಸುವ ಅಥವಾ ಅವರ ಸ್ಮಾರಕಗಳನ್ನು ನಿರ್ಮಿಸುವ ಔದಾರ್ಯ ನೆಹರೂ ಅವರಿಗಾಗಲಿ, ಅವರ ವಂಶಜರಿಗಾಗಲಿ ಇರಲಿಲ್ಲ. ಇದರ ಅರ್ಥವೇನು? ಯಾರಿಗೆಷ್ಟು ಗೌರವಸಲ್ಲಬೇಕೋ ಅಷ್ಟೇ ಸಲ್ಲಬೇಕೆಂಬುದು ಈ ಎಲ್ಲ ಮಾತುಗಳ ತಿರುಳು.

ಸ್ಥೈರ್ಯಧೈರ್ಯ ಪ್ರತಾಪ ಸಾಹಸ ಸತ್ಯ ಅತ್ಯುನ್ನತಿಗಳ ದೃಷ್ಟಿಯಿಂದ ಸುಭಾಷ್‌ಚಂದ್ರಬೋಸ್ ಪುರಾಣ ಪುರುಷರ ಎತ್ತರಕ್ಕೇರತಕ್ಕ ವ್ಯಕ್ತಿ. ವಾಷಿಂಗ್‌ಟನ್, ಲಿಂಕನ್, ಬಿಸ್ಮಾರ್ಕ್, ಹೊಚಿಮಿನ್, ಮಾವೊ, ಲೆನಿನ್ ಮೊದಲಾದ ಮಹಾಪುರುಷರಿಗೆ ಸಮನಾದವರು. ಅಮೆರಿಕೆಯೊ ರಷ್ಯಾವೊ ವಿಯಟ್‌ನಾಮ್‌ಓ, ಚೀನಾವೋ, ಜರ್ಮನಿಯೊ—ಅಲ್ಲೆಲ್ಲಾದರೂ ಬೋಸರು ಹುಟ್ಟಿದ್ದರೆ ಅವರಿಗೆ ದೊರಕುತ್ತಿದ್ದ ಮರಣೋತ್ತರ ಗೌರವ ಕಲ್ಪನೆಗೆಟಕುವಂಥದಲ್ಲ. ಈ ನತದೃಷ್ಟ ದೇಶದಲ್ಲಿ ಅನರ್ಹತೆಗೆ ಪಟ್ಟ ಅರ್ಹತೆಗೆ ಚಟ್ಟವೇ ನಿಯಮವಾಗಿದೆ. ಅವರ ಶತಮಾನೋತ್ಸವ ಸಮಯದಲ್ಲಾದರೂ ಉಪಕೃತ

ರಾದ ಜನ, ಕೃತಜ್ಞತೆಯುಳ್ಳ ದೇಶ ಅವರ ಗರಿಮೆಮಹಿಮೆಗಳಿಗೆ ತಗುವಂತೆ ದೇಶದೆಲ್ಲೆಡೆ ಅವರ ಕೀರ್ತಿಯನ್ನು ಹಾಡಿ ಹರಡಬೇಕಾದ್ದು, ಅವರ ಸಂದೇಶವನ್ನು ಚಿತ್ರಿಸಬೇಕಾದ್ದು, ಮುಂದಿನ ಪೀಳಿಗೆಗಳಿಗೆ ಸ್ಫೂರ್ತಿಯಾಗುವಂತೆ ಸ್ಮಾರಕಗಳನ್ನು ರಚಿಸಬೇಕಾದ್ದು ಧರ್ಮ. 'ನೆನೆಯದಿರಣ್ಣ ಭಾರತದೊಳ್ ಪೆಱರಾರುಮನೊಂದೆ ಚಿತ್ತದಿಂ ನೆನೆವೊಡೆ ಬೋಸರಂ ನೆನೆಯ, ಬೋಸರೊಳಾರ್ದೊರೆ' ಎಂದು ಭಾರತೀಯರೆಲ್ಲ ಒಕ್ಕೊರಲಿನಿಂದ ಹಾಡೋಣ, ಕುಣಿಯೋಣ, ನಲಿಯೋಣ!

ದೇಜಗೌ

ಮತಾಂಧತೆ ಹೆರವರಿಗೆ ಮಾತ್ರವಲ್ಲ, ಹೆತ್ತವರಿಗೂ ಕೇಡು

ಮತದ ಹೆಸರಿನಲ್ಲಿ, ದೇವರ ನೆಪದಲ್ಲಿ, ಧರ್ಮಯುದ್ಧದ ವ್ಯಾಜದಲ್ಲಿಸಂಭವಿಸಿರುವಷ್ಟು ಸಾವುನೋವುಗಳು ಮತೀಯೇತರ ಯುದ್ಧಗಳಲ್ಲಿ ಸಂಭವಿಸಿಲ್ಲವೆಂದೇ ಹೇಳಬೇಕು. ಮತೀಯ ಮೂಲಭೂತವಾದಿಗಳಿಂದಾಗಿ ಜಗತ್ತಿನ ಅನೇಕ ರಾಷ್ಟ್ರಗಳಲ್ಲಿ ಸುಖವಿಲ್ಲ, ಶಾಂತಿಯಿಲ್ಲ. ಅವರೆಲ್ಲರೂ ಭಯೋ-ತ್ಪಾದಕರು, ತಮ್ಮ ಮತದ ಸಂಪ್ರದಾಯಕ್ಕನುಗುಣವಾಗಿ ಸರ್ಕಾರ ಆಡಳಿತ ನಡಸುತ್ತಿಲ್ಲ, ಜನ ಸಾಮಾಜಿಕ ಜೀವನ ನಡಸುತ್ತಿಲ್ಲ, ಆಧುನಿಕ ಪಾಶ್ಚಾತ್ಯ ರೀತಿಯ ಜೀವನ ಹೇಯವಾದದ್ದು ಎಂದವರು ಸರ್ಕಾರಿ ನೌಕರರ, ಸಂಪ್ರದಾಯವಿರೋಧಿಗಳ ಮತ್ತು ಅವರ ಮಕ್ಕಳ ತಲೆಗಳನ್ನು ಚೆಂಡಾಡುತ್ತಾರೆ; ಹೆಣ್ಣು ಮಕ್ಕಳ ಮೇಲೆ ಅತ್ಯಾಚಾರವೆಸಗಿ, ಸಾಕಾದನಂತರ ಕೊಲ್ಲುತ್ತಾರೆ. ವರ್ತಕರು, ಪ್ರಾಧ್ಯಾಪಕರು, ಪತ್ರಕರ್ತರು, ವಿದ್ಯಾರ್ಥಿಗಳು, ಎಲ್ಲ ಕಸಬುದಾರರು ಅವರ ಕತ್ತಿ ಬಂದೂಕಗಳಿಗೆ ಬಲಿಯಾಗುತ್ತಾರೆ. ಆ ಗೊರಿಲ್ಲಾಗಳ ಮೇಲೆ ಸರ್ಕಾರವೂ ಧಾಳಿನಡೆಸಿ ಸಿಕ್ಕಷ್ಟು ಭಯೋತ್ಪಾದಕರನ್ನು ಕೊಲ್ಲುವುದಲ್ಲದೆ, ತನ್ನವರನ್ನೂ ಆಹುತಿ ತೆಗೆದುಕೊಳ್ಳುತ್ತದೆ. ಬೆಳಕು ಹರಿಯುವಹೊತ್ತಿಗೆ ತಾವು ಉಳಿದಿರುವುದುಂಟೆ, ನಾಳೆ ತಮಗೆ ಮತ್ತು ತಮ್ಮ ಮಕ್ಕಳಿಗೇನು ಕಾದಿದೆಯೋ ಎಂಬ ನಿರಂತರ ಭೀತಿಯಲ್ಲಿಯೇ ಜಗತ್ತಿನ ಮಿಲಿಯ ಮಿಲಿಯ ಜನ ಬದುಕಬೇಕಾಗಿದೆ.

ಇಂಥದೊಂದು ಕ್ರೂರ ಹೃದಯ ವಿದ್ರಾವಕ ದಾರುಣ ಪರಿಸ್ಥಿತಿಯಲ್ಲಿ ಆಫ್ರಿಕಾದ ಉತ್ತರಭಾಗದ ಆಲ್ಜೀರಿಯಾ ರಾಷ್ಟ್ರ ನರಳುತ್ತಿದೆ. ೧೯೬೨ರಲ್ಲಿ ಫ್ರೆಂಚರ ದಾಸ್ಯದಿಂದ ಮುಕ್ತಗೊಂಡಾಗ ಅರಬ್ ಪ್ರಜ್ಞೆಯನ್ನು ಪ್ರಚೋದಿಸುವ ಸಲುವಾಗಿ ಆಡಳಿತ ಸಾವಿರಾರು ಮಂದಿ ಬೋಧಕರನ್ನು ನೇಮಿಸಿಕೊಳ್ಳುತ್ತದೆ. ಆ ಬೋಧಕರು ಯುವಕರ ಮನಸ್ಸಿನಲ್ಲಿ ಇಸ್ಲಾಂ ಮತದ ಸಿದ್ಧಾಂತಗಳನ್ನು ಜೀವನ ವಿಧಾನಗಳನ್ನು ಬಿತ್ತುತ್ತಾರೆ. ೧೯೮೦ರಲ್ಲಿ ಎಣ್ಣೆ ಬೆಲೆ ಇಳಿದು, ನಿರುದ್ಯೋಗ ಹೆಚ್ಚಿ, ವಿದೇಶಗಳಿಂದ ಸಿಕ್ಕಾಬಟ್ಟೆಸಾಲ ಪಡೆದು, ಭ ಷ್ಟಾಚಾರ ಅಧಿಕವಾಗಿ, ಆಡಳಿತ ಸಡಿಲವಾದಾಗ, ಮತೀಯ ಮೂಲಭೂತವಾದಿ ಭಯೋತ್ಪಾದಕರು ಇಸ್ಲಾಂ ವಿರೋಧಿಯೆಂದು ದೈವ ವಿರೋಧಿಯೆಂದು ತಮ್ಮ ಸರ್ಕಾರದ ಮೇಲೆ ಧಾಳಿ ನಡೆಸುತ್ತಾರೆ. ಸೈನ್ಯವೂ ಪ್ರತಿಧಾಳಿ ನಡಸುತ್ತದೆ. ಸಿಕ್ಕಿರುವ ಲೆಕ್ಕದ ಪ್ರಕಾರ ೧೯೯೨ರಿಂದೀಚೆಗೆ ೬೫ ಸಾವಿರ ಮುಗ್ಧ ಜನ ಹತರಾಗಿದ್ದಾರೆ. ತಬ್ಬಲಿಗಳ, ವಿಧವೆಯರ, ಅಂಗವಿಕಲರ ಗೋಳು ಹೇಳತೀರದು.

ಸಿದಿ ಎಲ್ ಕೆಬೀರ್ ಎನ್ನುವುದೊಂದು ಎತ್ತರದ ಗುಡ್ಡಗಾಡಿನಹಳ್ಳಿ. ಅಲ್ಲಿರುವ ೪೦೦ ಜನರೆಲ್ಲ ಕೃಷಿಕರು. ಒಂದು ದಿನ ಕೊರೆವ ಚಳಿ ನಡುರಾತ್ರಿ

ನಾಸಿಮನ ಮನೆಯ ಕದ ಬಡಿದ ಸದ್ದಾಯಿತು. 'ನಿನ್ನ ಮಗನೊಬ್ಬ ಸೈನ್ಯದಲ್ಲಿದ್ದಾನಲ್ಲವೆ?' ಎಂದು ಕ್ರೂರಧ್ವನಿಕೂಗಿತು. 'ಅವನಿಂದ ನಿಮಗೇನಾಗಬೇಕಾಗಿದೆ?' ಎಂದು ನಾಸಿಮನ ತಾಯಿ ಕೇಳಿದಳು. 'ಸರ್ಕಾರಿ ನೌಕರರೆಲ್ಲ ದೈವದ್ರೋಹಿಗಳು, ನಾಸ್ತಿಕರು' ಎಂದು ಹೇಳುತ್ತಿದ್ದಂತೆ ನಾಸಿಮನ ತಾಯಿಯ ಕೊರಳನ್ನು ಕತ್ತರಿಸಲಾಯಿತು. ಆಕ್ರಂದನ ಕೇಳಿ ಓಡಿಬಂದ ಅವಳ ಗಂಡನಿಗೂ ಮತ್ತೊಬ್ಬ ಮಗನಿಗೂ ಅದೇ ಗತಿಯಾಯಿತು. ತನ್ನ ಸರದಿಗಾಗಿ ೧೯ ವಯಸ್ಸಿನ ಮುಗ್ಧ ತರುಣ ನಾಸಿಮ್ ಕಾಯುತ್ತಿದ್ದನು. ಆ ಕಟುಕರಿಗೇನು ಕರುಣೆಯೊ, ರಕ್ತದಲ್ಲಿ ಮುಳುಗಿದ್ದ ಹೆಣಗಳ ನಡುವೆ ಅವನನ್ನುಳಿಸಿ, ಹೊರಟು ಹೋದರು. ಅಲ್ಲಿಂದ ಅವರ ಕರಾಳ ಹೆಜ್ಜೆ ಬೇರೆ ಮನೆಗಳ ಕಡೆಗೆ ಹೊರಳಿದುವು. ಬೆಳಗಾಗುವುದರೊಳಗೆ ಮೂವತ್ತೆರಡು ಜೀವಗಳು ಹೆಣವಾಗಿದ್ದವು.

ಜನ ಸರ್ಕಾರವುರುಳಿ ಸೈನ್ಯಾಡಳಿತ ಚಾಲುಗೊಂಡಾಗ ಸಾಮಾನ್ಯ ಜನ ಮತೀಯ ಮೂಲಭೂತವಾದಿಗಳಿಗೆ ಬೆಂಬಲ ನೀಡುತ್ತಾರೆ. ಆ ಬೆಂಬಲ ಅವರಿಗೇ ಕುತ್ತಾಗುತ್ತದೆ. ಮಾರಿಯ ಮೂರಿಯಂತಿದ್ದ ಭಯೋತ್ಪಾದಕರ ಅಮಾನುಷ ಕೃತ್ಯಗಳಿಂದಾಗಿ ದೇಶಕ್ಕೆ ದೇಶವೇ ತತ್ತರಿಸುತ್ತದೆ. ಜನ ಪ್ರಜಾಪ್ರಭುತ್ವ ವಿಧಾನದ ಆಡಳಿತಕ್ಕಾಗಿ ಹಾತೊರೆಯುತ್ತಾರೆ. ಚುನಾವಣೆ ಬಂದಾಗ ಜನ ಶಾಂತಿಗಾಗಿ ಮತ ಚಲಾಯಿಸುತ್ತಾರೆ. ಮಾನವ ಹಕ್ಕುಗಳಿಗಾಗಿ ಹೋರಾಟ ನಡಸಿ, ಐದುಸಲ ಜೈಲುವಾಸ ಅನುಭವಿಸಿದ, ಸೆಕ್ಯುಲರ್ ಪಕ್ಷದ ಮುಖಂಡನೂ ಮನೋವೈದ್ಯನೂ ಆದ ಸಯದ್ ಸಾದಿ ಏನು ಹೇಳುತ್ತಾನೆ, ಕೇಳಬಹುದು: 'ಮುಸ್ಲಿಮ್ ರಾಷ್ಟ್ರದಲ್ಲಿ ಪ್ರಜಾಪ್ರಭುತ್ವದ ಸ್ಥಾಪನೆ ಸಾಧ್ಯವೆ ಎಂಬುದೇ ದೊಡ್ಡ ಪ್ರಶ್ನೆಯಾಗಿದೆ. ಜನರಿಗೆ ಮತೀಯ ರಾಜ್ಯಬೇಕಿಲ್ಲ. ಪ್ರಜಾಪ್ರಭುತ್ವಬೇಕೆಂದು ಹಂಬಲಿಸುವ ಜನರೇ ದುಃಖ ದಾರಿದ್ರ್ಯಗಳಿಂದಾಗಿ ಇಸ್ಲಾಂ ಪರವಾಗಿ ಮತ ನೀಡುತ್ತಾರೆ.'

ಭಯೋತ್ಪಾದಕರ ನಿರ್ಮೂಲನಕ್ಕಾಗಿ ಸ್ಥಾಪನೆಗೊಂಡ ಭದ್ರತಾಪಡೆಯೇ ಮಿತಿಮೀರಿದ ಹಿಂಸಾಕಾರ್ಯದಲ್ಲಿ ತೊಡಗಿದೆ. ಸಂಶಯದ ನೆಪದಿಂದ ಮುಗ್ಧ ಜನರನ್ನು ಹಿಡಿದು ದಂಡಿಸುತ್ತದೆ. ಹೊರಗೆ ಹೋದ ಮಕ್ಕಳ ಬರವಿಗಾಗಿ ದಿನಗಟ್ಟಳೆ, ತಿಂಗಳುಗಟ್ಟಳೆ ತಂದೆ ತಾಯಿ ಗೋಳಾಡುತ್ತ ಕಾಯುತ್ತಾರೆ. ಪ್ರತಿದಿನ ಮಾನವ ಹಕ್ಕು ವಕೀಲರ ಕಚೇರಿಯ ಮುಂದೆ ಕಿಕ್ಕಿರಿಯುತ್ತಾರೆ; ತಮ್ಮವರ ಸುಳಿವುಸಿಕ್ಕಿತೇ ಎಂದು ಅಲ್ಪರಿಯುತ್ತಾರೆ. ಕೆಲವರು ಎರಡು ವರ್ಷಗಳತನಕ ದಿನಾಲೂ ಬರುತ್ತಾರೆ, ತಮ್ಮ ಪ್ರೀತಿಯ ಬಂಧುಗಳ ಪತ್ತೆಗಾಗಿ. 'ಪೊಲೀಸುವಶದಲ್ಲಿ ನಿಮ್ಮ ಮಕ್ಕಳು ಸತ್ತು ಹೋದರು' ಎಂದು ವಕೀಲ ಹೇಳಿದಾಗ ವೃದ್ಧರ ಮುಖ ಮುದುಡುತ್ತದೆ; ಕಣ್ಣಲ್ಲಿ ನೀರು ಹರಿಯುತ್ತದೆ; ಕೈಗಳು ಎದೆಗಳನ್ನು ಬಡಿಯುತ್ತವೆ; ಬಾಯಿಬಿಟ್ಟು

ತಮ್ಮನ್ನು ನುಂಗಿಕೊಳ್ಳುವ ಕರುಣೆ ನೆಲದಾಯಿಗಿಲ್ಲವೆಂದು ಬಾಯಳಿಯುತ್ತಾರೆ. ಕಲ್ಕತ್ತೆಯ ಕತ್ತಲು ಕೋಣೆಯಂಥ ಶೌಚಾನುಕೂಲವೂ ಇಲ್ಲದ ಲಾಕಪ್ಪಿನಲ್ಲಿ ಎಳೆಂಟು ಜನ ನಿರಪರಾಧಿಗಳನ್ನು ಅಪರಾಧಿಗಳೆಂದು ಕರೆದು ಕೂಡಿಹಾಕಿ, ಅನ್ನ ನೀರು ಕೊಡದೆ ಭದ್ರತಾಪಡೆ ಸಾಯಿಸುತ್ತದೆ. ಪುರಾಣಗಳು ವರ್ಣಿಸುವ ನರಕ ಎಲ್ಲಿಯೋ ಇಲ್ಲ, ಆಲ್‌ಜಿಯರ್ಸ್‌ನಲ್ಲಿ ಮೂಲಭೂತವಾದಿಗಳು ಇರುವೆಡೆಯಲ್ಲೆಲ್ಲ ಇದೆ. ಇಡೀ ಜನತೆ ಹುಲಿದರಿಗಳ ನಡುವೆ, ಕಡಲು ದೆವ್ವಗಳ ನಡುವೆ, ಕಟುಕರ ಮಧ್ಯದಲ್ಲಿ ಬದುಕು ಸಾವುಗಳ ನಡುವೆ ಉಸಿರಾಡುತ್ತಿದ್ದಾರೆ. ಕಾಶ್ಮೀರ, ಅಫ್ಘಾನಿಸ್ತಾನ, ಇರಾಖ್, ಪ್ಯಾಲೆಸ್ಟೈನ್, ಖುರ್ದಿಸ್ಥಾನಗಳ ಬಗ್ಗೆ ಮಾತಾಡುವ ಲೋಕರ(ಭ)ಕ್ಷಕರ ಗಮನ ಆ ಕಡೆಗೆ ಹರಿಯುತ್ತಿಲ್ಲ. ವಿಶ್ವಸಂಸ್ಥೆಯೂ ಕಣ್ಣು ಮುಚ್ಚಿಕೊಂಡಿದೆ.

ಪತ್ರಿಕೆಗಳ ಪರಿಸ್ಥಿತಿಯಂತು ಶೋಚನೀಯವಾಗಿದೆ. ಕಚೇರಿಗೆ ಬಾಂಬಿಟ್ಟರೂ ಬರೆಯುವಂತಿಲ್ಲ. ದಿನಕ್ಕೆ ಹತ್ತಾರುಸಲ ಕೊಲೆಬೆದರಿಕೆಯ ಪತ್ರಗಳು ಫೋನ್‌ಕರೆಗಳು ಸಂಪಾದಕರಿಗೆ ಬರುತ್ತವೆ. ಅಲ್ಲಿಯ ಪ್ರಜ್ಞಾವಂತ ಜನ ಪ್ರಜಾಪ್ರಭುತ್ವವನ್ನು ಕಾಣುವ ಕನಸಿನಲ್ಲಿ ಜೀವ ಹಿಡಿದುಕೊಂಡಿದ್ದಾರೆ. ಗುಡ್ಡಗಾಡಿನ ಸಿದಿ ಎಲ್‌ಕೆಬೀರ್‌ಗ್ರಾಮದ ಸ್ಮಶಾನ ಸದೃಶ ಕುಟೀರದಲ್ಲಿ ಬಂಧುಪ್ರೇಮ ಸಹಾನುಭೂತಿ ವಂಚಿತನಾಗಿ, ಕಣ್ಣೀರೂ ಬತ್ತಿಹೋಗಿ, ಭವಿಷ್ಯದ ಭರವಸೆಯಿಲ್ಲದೆ, ಬದುಕುವ ಆಸೆಯಿಲ್ಲದೆ, ಹಗಲು ಸೂರ್ಯನ ಹೆಜ್ಜೆಗಳನ್ನು ಇರುಳು ತಾರೆಗಳನ್ನು ಎಣಿಸುತ್ತ ಸಾಸಿವು ಕಾಲ ನೂಕುತ್ತಾನೆ.

ಎಂದೋ ಒಮ್ಮೆ ಅವನಿಗೆ ನಿದ್ದೆ ಬರುತ್ತದೆ. ಅದೂ ಕೋಳಿ ನಿದ್ದೆ. ನಿದ್ದೆಯಲ್ಲಿ ಯಾರೊ ಅವನನ್ನು ತಿವಿದೆಬ್ಬಿಸಿದಂತಾಗುತ್ತದೆ. ದೇವದೂತನ ಸಂದೇಶವೆಂಬಂತೆ ಸ್ವರ್ಗಧ್ವಾನ ಕೇಳಿಸುತ್ತದೆ. 'ಸರ್ವೇಶ್ವರ ಒಬ್ಬನೇ. ಅವನೇ ಸೃಷ್ಟಿಕರ್ತ, ಸರ್ವರಕ್ಷಕ. ಅವನನ್ನು ಒಂದೊಂದು ಕಡೆ ಒಂದೊಂದು ಹೆಸರಿಂದ ಕರೆಯುತ್ತಾರೆ, ಆ ಎಲ್ಲ ಹೆಸರುಗಳು ಅವನೊಬ್ಬನಿಗೆ ಅನ್ವಯವಾಗುತ್ತವೆ. ಅವನ ಸಂದೇಶವೇ ಎಲ್ಲ ಮತಗಳ ಹಿನ್ನೆಲೆಯಲ್ಲಿರುತ್ತದೆ. ನಿಜವಾದ ಭಕ್ತ ಜಗತ್ತಿನ ಎಲ್ಲ ಜನರನ್ನು ಏಕಪ್ರಕಾರವಾಗಿ ಪ್ರೀತಿಸುತ್ತಾನೆ; ಎಲ್ಲ ಮತಗಳನ್ನು ಏಕರೀತಿಯಾಗಿ ಗೌರವಿಸುತ್ತಾನೆ. ಪ್ರೀತಿಸದೆ, ಗೌರವಿಸದೆ ದ್ವೇಷಿಸುವವನು ದೈವದ್ರೋಹಿಯಾಗುತ್ತಾನೆ. ಸತ್ತಮೇಲೆ ಅವನಿಗೆ ನರಕಯಾತನೆ ತಪ್ಪದು. ದೇವರ ಮತ್ತು ಮತದ ಹೆಸರಿನಲ್ಲಿ ನಡಸುವ ಹಿಂಸಾಚಾರಗಳೆಲ್ಲ ಪಾಪಾತ್ಮಕವಾದುವು.

'ಮತೀಯ ದ್ವೇಷದ ದಳ್ಳುರಿ ಹೊತ್ತಿಸುವವರು ಪುರೋಹಿತರು. ವಿಜ್ಞಾನಯುಗ ಪ್ರಗತಿಹೊಂದಿದಂತೆಲ್ಲ ಮತಗಳು ಸಹ ವಿಕಾಸಗೊಳ್ಳಬೇಕು. ನೂರಾರು ವರ್ಷಗಳ ಹಿಂದೆ ಅಂದಿನ ಪರಿಸರಕ್ಕೆ ತಕ್ಕಂತೆ ಮನುಕುಲದ

ಉದ್ಧಾರಕ್ಕಾಗಿ ಹುಟ್ಟಿದ ಮತ ಕಾಲದ ಸಾಣೆಯಲ್ಲಿ ಸವೆದು ಹೋದ ರೂಢಿ ಸಂಪ್ರದಾಯಗಳನ್ನು ತ್ಯಜಿಸಿ, ಚಿರಂತನ ತತ್ತ್ವಗಳನ್ನು ಉಳಿಸಿಕೊಂಡು, ವೈಜ್ಞಾನಿಕ ಸತ್ಯಗಳೊಡನೆ ಸಮನ್ವಯಿಸಿಕೊಂಡರೆ ಮಾತ್ರ ಲೋಕದಲ್ಲಿ ಶಾಂತಿ ನೆಲಸುತ್ತದೆ, ಮಾನವ ಮಾನವನಾಗಿ ಬದುಕುತ್ತಾನೆ. ಆಧುನಿಕ ಸತ್ಯಗಳೊಡನೆ ಸನಾತನ ತತ್ತ್ವಗಳನ್ನು ಅಳವಡಿಸಿಕೊಳ್ಳಲಾರದ ಪುರೋಹಿತ ಅನಾಗರಿಕನಾಗಿ ಮಾನವದ್ವೇಷಿಯಾಗಿ ಲೋಕಕಂಟಕನಾಗುತ್ತಾನೆ. ಮನುಷ್ಯ ಎಲ್ಲಿ ಹೋದರೂ ಸ್ವಧರ್ಮವನ್ನು ಬಿಡಬೇಕಾಗಿಲ್ಲ; ಪರಧರ್ಮವನ್ನು ದ್ವೇಷಿಸಬೇಕಾಗಿಲ್ಲ; ಎರಡಕ್ಕೂ ಸ್ನೇಹ ಸೇತುವೆಯಾಗಿ ಬದುಕಿದ್ದಾದರೆ, ಅವನ ಬದುಕು ಸಮೃದ್ಧವಾಗುತ್ತದೆ, ದೇವರಿಗೆ ಪ್ರಿಯನಾಗುತ್ತಾನೆ. ಕ್ಲೇಶಗಳು ಸಹ ದೇವನ ವರಗಳೆಂದೇ ತಿಳಿಯಬೇಕು; ಚಿಂತೆಯಿಂದ ದೇವರು ಕೊಟ್ಟಿರುವ ಬದುಕನ್ನು ಹಾಳುಮಾಡಿಕೊಳ್ಳಬಾರದು. ಸತ್ಯವನ್ನು ಬಿಡಬಾರದು, ಕರ್ತವ್ಯವನ್ನು ನಿರ್ಲಕ್ಷಿಸಲಾಗದು, ಏಳು, ಎದ್ದೇಳು: ಕ್ರಿಯಾ ಮುಖನಾಗು, ಸ್ವರ್ಗವೇ ನಿನ್ನನ್ನರಸಿಕೊಂಡು ಬರುತ್ತದೆ.'

ನಾಸಿಮ್ ಕಣ್ಣು ಬಿಟ್ಟ; ಉಜ್ಜಿಕೊಂಡ; ಸುತ್ತನೋಡಿದ; ಯಾರೂ ಇಲ್ಲ. ಆಶ್ಚರ್ಯಚಕಿತನಾದ. ಕೂಡಲೇ ಕಾರ್ಯಮುಖನಾದ*

ದೇಜಗೌ

---

*ಆಧಾರ: ರೀಡರ್ಸ್ ಡೈಜೆಸ್ಟ್ ಫೆಬ್ರುವರಿ ೧೯೯೮.

ಶ್ರೀನಿವಾಸರ ಸಣ್ಣ ಕತೆಗಳು

ಪ್ರೊ॥ಕೆ. ಬಿ. ಪ್ರಭುಪ್ರಸಾದ್
೧೧, ದೇವಸ್ಥಾನ ರಸ್ತೆ
ಜಯಲಕ್ಷ್ಮೀಪುರಂ
ಮೈಸೂರು–೫೭೦ ೦೧೨

೧೯೨೦ ರಲ್ಲಿ ಶ್ರೀನಿವಾಸರ (ಮಾಸ್ತಿ ವೆಂಕಟೇಶ ಅಯ್ಯಂಗಾರ್) 'ಕೆಲವು ಸಣ್ಣ ಕತೆಗಳು' ಎಂಬ ಹೆಸರಿನ ಸಂಕಲನ ಪ್ರಕಟವಾಯಿತು. ಈ ಕತೆಗಳು ಓದುಗರಿಗೆ ಕೂಡಲೆ ಇಷ್ಟವಾದವು. ಕಾರಣ—ಈ ಬಗೆಯ ಕತೆಗಳು ಆ ಮೊದಲು ಕನ್ನಡದಲ್ಲಿ ಇರಲಿಲ್ಲ. ಎರಡನೆಯದಾಗಿ ಬದುಕಿನಲ್ಲಿ ಕಾಣುವ ಸಾಧಾರಣ ವ್ಯಕ್ತಿಗಳು, ಸಾಮಾನ್ಯ ಸಂಗತಿಗಳು ಕತೆಗಳಿಗೆ ವಸ್ತುವಾಗಿದ್ದವು. ಸುತ್ತಣ ಸಮಾಜವನ್ನು, ಮಾನವ ಸ್ವಭಾವವನ್ನು ಸೂಕ್ಷ್ಮವಾಗಿ ಅವಲೋಕಿಸಿದ, ಸುಸಂಸ್ಕೃತ ಹಾಗೂ ಪ್ರತಿಭಾವಂತ ಕತೆಗಾರ ಅವುಗಳಲ್ಲಿನ ವಿಶೇಷವನ್ನು, ಸೊಗಸನ್ನು, ಗ್ರಹಿಸಬೇಕಾದ ಅಂಶಗಳನ್ನು ಎತ್ತಿತೋರಿಸುತ್ತ ಎದುರಿಗೆ ಕುಳಿತು, ಆತ್ಮೀಯವಾಗಿ ಸರಳವಾಗಿ ಕತೆ ಹೇಳುವುದು ಈ ಕತೆಗಳು ಇಷ್ಟವಾಗಲು ಇನ್ನೊಂದು ಕಾರಣ.

ಇಷ್ಟವಾದುದೇ, ಸಣ್ಣ ಕತೆಗಳ ಯುಗ ಆರಂಭವಾಯಿತು. ಅಂದಿನಿಂದ ಇಂದಿನವರೆಗೆ ಸಾವಿರಾರು ಕತೆಗಳು ಬಂದಿವೆ. ಕತೆಗಾರರು, ಕತೆಗಾರ್ತಿಯರು ಅನೇಕ ಶ್ರೇಷ್ಠ ಕತೆಗಳನ್ನು ಬರೆದಿದ್ದಾರೆ. ಬದಲಾದ ಸಮಾಜ, ಬದಲಾದ ದೃಷ್ಟಿ, ಜೀವನದ ಸಂಕೀರ್ಣತೆ, ನವ್ಯ ವಿಚಾರಧಾರೆ ಎಲ್ಲ ಪ್ರತಿಬಿಂಬಿತವಾದ ಅನೇಕ ಕತೆಗಳು ಬಂದಿವೆ.

ಇಷ್ಟಾದರೂ ಶ್ರೀನಿವಾಸರ ಕತೆಗಳು ಹಳೆಯವಾದುವೆಂದು ಅನಿಸುವುದಿಲ್ಲ. ಅವರ ಹಾಗೆ ಅಷ್ಟು ಸೊಗಸಾಗಿ ಕತೆ ಹೇಳುವವರು ವಿರಳ. ಕತೆ ಕೇಳಿದ ಮೇಲೆ ಅದರ ಸವಿ ಮತ್ತು ಪ್ರಭಾವ ಬಹುಕಾಲ ಉಳಿಯುವುದಷ್ಟೇ ಅಲ್ಲ ಸುತ್ತಣ ಜಗತ್ತನ್ನೂ ಬದುಕನ್ನೂ ನೋಡುವ ನಮ್ಮ ದೃಷ್ಟಿ ಉತ್ತಮವಾಗುತ್ತದೆ. ಜೀವನ ಪ್ರೀತಿ, ಜೀವನ ಶ್ರದ್ಧೆ, ಜೀವನೋತ್ಸಾಹ ಮೊದಲಿಗಿಂತ ಹೆಚ್ಚುತ್ತವೆ. ನಮ್ಮ ಹೃದಯ ಮೃದುವಾಗುತ್ತದೆ. ಮನಸ್ಸು ಪರಿಪಾಕಗೊಳ್ಳುತ್ತದೆ. ಎಲ್ಲರ ಬಗ್ಗೆ, ಪ್ರೀತಿ, ಅನುಕಂಪ ಉಂಟಾಗುತ್ತವೆ. ಅಂತಃಕರಣ ಜಾಗ್ರತವಾಗುತ್ತದೆ.

ಕತೆಗಾರರಲ್ಲೇ ಇರುವ ಈ ಮಾನವೀಯ ಗುಣಗಳು ಕತೆಗಳಲ್ಲಿ ಅಭಿವ್ಯಕ್ತವಾಗುವುದರಿಂದಲೇ ಈ ಕತೆಗಳು ಇವತ್ತಿಗೂ ಇಷ್ಟವಾಗುತ್ತವೆ. ಸಾರ್ವತ್ರಿಕವಾಗಿ ಸಾರ್ವಕಾಲಿಕವಾಗಿ ನಿಲ್ಲುತ್ತವೆ.

ಶ್ರೀನಿವಾಸರು ತಮ್ಮ ಕತೆಗಳಿಗೆ ವಸ್ತುವನ್ನು ತಾವು ಕಂಡ, ಅನುಭವ ಪಡೆದ, ಸುತ್ತಣ ಜನಜೀವನದಿಂದ ಮಾತ್ರವಲ್ಲ,

ಭಾರತ, ಗ್ರೀಸ್, ರೋಮ್ ಮತ್ತು ಯೂರೋಪುಗಳ, ಇತಿಹಾಸಗಳಿಂದ, ಪುರಾಣಗಳಿಂದ, ಜಾನಪದದಿಂದ ಕೂಡ ಆರಿಸಿಕೊಂಡಿದ್ದಾರೆ. ಈ ಆಯ್ಕೆಯಲ್ಲಿ ಅವರ ಸದಭಿರುಚಿ, ಸುಸಂಸ್ಕೃತ ಮನಸ್ಸು ಕೆಲಸ ಮಾಡಿದೆ. ಅವರ ಒಟ್ಟು ೭೭ ಕತೆಗಳಲ್ಲಿ ಯಾವ ಕತೆಯನ್ನು ತೆಗೆದುಕೊಂಡರೂ, ಶಾಮಣ್ಣನವರು ಹೇಳಲಿ, ಶ್ರೀನಿವಾಸರೇ ಬರೆದಿರಲಿ ಅದರಲ್ಲಿ ಮಾಸ್ತಿಯವರ ಉದಾತ್ತದೃಷ್ಟಿ, ವಿವೇಕ, ಎಂಥ ಸಂದರ್ಭದಲ್ಲೂ ವಿಕಾರವಾಗದ, ತೂಕತಪ್ಪದ ಹದವರಿತ ಮಾತು, ಸರಸ-ವಿನೋದ, ಅನುಭವ ತೆರೆದ ಒಳನೋಟ ಸುವ್ಯಕ್ತವಾಗಿದೆ.

ಮಾಸ್ತಿಯವರು ಕಷ್ಟದ ದಿನಗಳನ್ನೂ ಬಲ್ಲರು, ಒಳ್ಳೆಯ ದಿನಗಳನ್ನೂ ಬಲ್ಲರು. ಬಾಲ್ಯದಲ್ಲಿ ಬಡತನದ ಬೇಗೆ, ತಾರುಣ್ಯದಲ್ಲಿ ಅಧಿಕಾರದ ಸವಿ ಇದ್ದೂ ಬಡತನದಲ್ಲಿ ದೈನ್ಯವಿಲ್ಲದೆ, ಅಧಿಕಾರದಲ್ಲಿ ಮದಿಸದೆ, ಸರಳ-ಸಜ್ಜನಿಕೆಯ ಸಮತೂಕವನ್ನು ಕಾಯ್ದುಕೊಂಡ ವಿವೇಕ ಅವರದು. ಎಲ್ಲಿಯೂ, ಯಾವ ಸಂದರ್ಭದಲ್ಲೂ ಸಿನಿಕತನ ತಲೆಹಾಕುವುದಿಲ್ಲ. ದೇವರು, ದೇಗುಲ ಎಂದು ಭಾವುಕರಾಗದೆ ಹೋದರೂ ಯಾವುದೊ ಅಗೋಚರ ಶಕ್ತಿ—ಅದನ್ನು ಸತ್ಯ ಎನ್ನಿ, ಧರ್ಮ ಎನ್ನಿ, ನ್ಯಾಯ ಎನ್ನಿ—ಪ್ರೀತಿ, ಕರುಣೆಗಳಿಂದ ಈ ಲೋಕವನ್ನು ನಡೆಸುತ್ತಿದೆ ಎಂಬ ದೃಢವಾದ ನಂಬಿಕೆ ಅವರದು. ಯಾವ ವ್ಯಕ್ತಿಯನ್ನೇ ಆಗಲಿ ತೂಗಿ-ಅಳೆದು, ಸರಿ-ತಪ್ಪು ಎಂಬ ತೀರ್ಪುನೀಡ ಹೋಗದೆ ವ್ಯಕ್ತಿಗಳು ಇರುವ ಹಾಗೇ ಅವರನ್ನು ಸಾಕ್ಷಿ ಪ್ರಜ್ಞೆಯಲ್ಲಿ ನೋಡುವರು. ಮಾಸ್ತಿಯವರದು ಕುಹಕವಿಲ್ಲದ ಹಾಸ್ಯ, ಗೌರವಗೆಡದ ವಿನಯ, ಜಂಭವಿಲ್ಲದ ಗಾಂಭೀರ್ಯ. ಸಿರಿವಂತರಿರಲಿ, ಬಡವರಿರಲಿ, ಚಕ್ರವರ್ತಿಯಾಗಿರಲಿ, ಸಾಮಾನ್ಯ ಯೋಧನಾಗಿರಲಿ, ಮೇಧಾವಿಯಾಗಿರಲಿ, ಮಂದ-ಮತಿಯಾಗಿರಲಿ, ಎಲ್ಲರನ್ನೂ ಮಾನವರನ್ನಾಗಿ ನೋಡಿ ಅವರವರ ಗುಣ-ದೋಷಗಳನ್ನು ಸಹಾನುಭೂತಿಯಿಂದ ಚಿತ್ರಿಸುವರು. ಪುರುಷ ಪ್ರಧಾನವಾದ ಸಮಾಜದಲ್ಲಿ ಅಮಾನುಷ ತುಳಿತಕ್ಕೆ, ಶೋಷಣೆಗೆ ಒಳಗಾಗಿದ್ದಾಳೆ ಎಂಬ ಅರಿವಿನಿಂದಲೋ ಏನೊ ಮಾಸ್ತಿಯವರಿಗೆ ಹೆಣ್ಣಿನ ಬಗ್ಗೆ ವಿಶೇಷ ಗೌರವ, ಪೂಜ್ಯಭಾವ. ಎಲ್ಲ ಕತೆಗಳಲ್ಲೂ ಇದು ನೇರವಾಗಿಯೊ, ಇಂಗಿತವಾಗಿಯೊ, ಆದರೆ ಅಸಂದಿಗ್ಧವಾಗಿ ವ್ಯಕ್ತವಾಗಿದೆ. ಮಹಿಳೆಯನ್ನು ಎಲ್ಲಿಯೂ ಆದರ್ಶೀಕರಿಸುವುದಿಲ್ಲ. ಆರಾಧನಾಪೀಠದ ಮೇಲೆ ಕೂರಿಸುವುದಿಲ್ಲ. ಮಹಿಳೆಯನ್ನು ಮಹಿಳೆಯನ್ನಾಗಿ-ಮಾನವೀಯತೆಯಿಂದ ನೋಡುತ್ತಾರೆ. ಜೊತೆಗೆ ಆಕೆಯಲ್ಲಿ ಜಾಣ್ಮೆ, ವ್ಯಾವಹಾರಿಕ ವಿವೇಕ, ವಿಶೇಷ ಗ್ರಹಣಶಕ್ತಿ ಪುರುಷನಲ್ಲಿರುವುದಕ್ಕಿಂತ ಹೆಚ್ಚಾಗಿ ಮತ್ತು ಸ್ವಾಭಾವಿಕವಾಗಿ, ಪ್ರಕೃತಿದತ್ತ ಸಾಮರ್ಥ್ಯವಾಗಿ ಇರುವುದನ್ನು ಸೂಚಿಸುತ್ತಾರೆ, ಪ್ರಸಂಗಗಳಲ್ಲಿ ತೋರಿಸುತ್ತಾರೆ. "ವುಮನ್ ಈಸ್ ಮ್ಯಾನ್ ಅಂಡ ವುಮನ್ ಪುಟ್ ಟುಗೆದರ್" ಎಂಬುದ ಅವರ ಅಭಿಮತ. ನಮ್ಮ ಸಾಂಪ್ರದಾಯಿ ಸಮಾಜದಲ್ಲಿ ಮಹಿಳೆಗೆ ವಾಸ್ತವವಾ ಉತ್ತಮವಾದ ಸ್ಥಾನ, ಸ್ವಾತಂತ್ರ್ಯಗಳ ದಿರುವುದನ್ನು ಬಲ್ಲರು. ಗಂಡಿನ ಅಹಂಕಾ

ಪ್ರತಿಷ್ಠೆ; ಹೆಣ್ಣು ತಾಯಿಯಾಗಿಯೊ, ಹೆಂಡತಿಯಾಗಿಯೊ ಎಷ್ಟೇ ತಿಳಿಹೇಳಿ, ಎಚ್ಚರಿಕೆ ನೀಡಿದರೂ ಕಿವಿಗೊಡದ ಕಠತನದಿಂದ, ಸಂಸಾರದಲ್ಲಿ ಬರುವ ಸಂಕಷ್ಟಗಳನ್ನು ಮಹಿಳೆ ಮೂಕಳಾಗಿ (ಮಾತಾಡಿಯೂ ಪ್ರಯೋಜನವಾಗದೆ)ಅಸಹಾಯಕಳಾಗಿ ಅನುಭವಿಸುವುದನ್ನು ತಮ್ಮ ಕತೆಗಳಲ್ಲಿ ಮನಕರಗುವಂತೆ ಚಿತ್ರಿಸುತ್ತಾರೆ.

ಚೆನ್ನಮ್ಮ ಅಂಥ ಒಂದು ಕಥೆ. ಹಳ್ಳಿಯಲ್ಲಿ ತನ್ನದೆಂಬ ಸ್ವಲ್ಪ ಭೂಮಿಯಿದ್ದು ಅದರಲ್ಲೆ ಕಷ್ಟಪಟ್ಟು ಸಾಗುವಳಿ ಮಾಡಿದರೆ ನೆಮ್ಮದಿಯಾಗಿ ಮರ್ಯಾದೆಯಿಂದ ಬಾಳಬಹುದಾಗಿದ್ದರೂ ಪಟ್ಟಣದ ಬೆಡಗಿಗೆ ಮರುಳಾಗಿ ಗಿರಣಿ ಕೂಲಿಯಾಗಿ ನಗರ ಸೇರಿದ ರಾಮಪ್ಪ, ಹೆಂಡತಿ ಚೆನ್ನಮ್ಮನನ್ನೂ ಅವಳ ಇಷ್ಟಕ್ಕೆ ವಿರೋಧವಾಗಿ ಕರೆತಂದು ಒಂದು ಕೊಳಕು ಓಣಿಯಲ್ಲಿ ವಾಸಿಸತೊಡಗುತ್ತಾನೆ. ಕ್ರಮೇಣ ಹೆಂಡತಿಗೆ ತಿಳಿಯದಂತೆ ದುಶ್ಚಟಗಳಿಗೆ ಒಳಗಾಗಿ, ವರಮಾನ ಸಾಕಾಗದೆ, ಹೆಂಡತಿಯನ್ನೂ ಒತ್ತಾಯಿಸಿ ಕೂಲಿ ಕೆಲಸಕ್ಕೆ ಗಿರಣಿಗೆ ಸೇರಿಸುತ್ತಾನೆ. ಅಲ್ಲಿನ ಸನ್ನಿವೇಶ, ಮೇಸ್ತ್ರಿಯ ಅನುಚಿತ ವರ್ತನೆ ಹಿಡಿಸದೆ ಚೆನ್ನಮ್ಮ ಕೆಲಸ ಬಿಡುತ್ತಾಳೆ. ಗಂಡನಿಗೆ ಎಷ್ಟೋ ಬಗೆಯಾಗಿ ತಿಳಿಹೇಳಿ ತಿದ್ದಲೆತ್ನಿಸುತ್ತಾಳೆ. ಅವನು ಸರಿಹೋಗುವುದಿಲ್ಲ. ಸಂಸಾರದ ಸಾಮರಸ್ಯ ಹಾಳಾಗುತ್ತದೆ. ಹಣಕ್ಕಾಗಿ ವಿಚಿತ್ರ ಪೇಚುತಂದುಕೊಂಡು, ಅದರ ತಾಪ ಚೆನ್ನಮ್ಮನಿಗೆ ಹೆಚ್ಚಾಗಿ ತಟ್ಟುತ್ತದೆ. ಅವನ ತಪ್ಪಿಗೆ ಅವಳು ಜೈಲು ಶಿಕ್ಷೆಗೆ ಗುರಿಯಾಗುತ್ತಾಳೆ. ಬದುಕಿಗೆ ರೋಸಿ ವಿಚಿತ್ರ ಮಾನಸಿಕ ತೊಳಲಾಟದಲ್ಲಿ ಮೂಕವಾಗಿ ನರಳುತ್ತಾಳೆ. ಗಂಡನೇ ಬೇಡ ಎಂಬಷ್ಟು ಮನಸ್ಸು ಕಲ್ಲಾಗುತ್ತದೆ. ಅವನನ್ನು ತ್ಯಜಿಸಿ ತಾಯಿಯೊಡನೆ ಹಳ್ಳಿಗೆ ಹೊರಟಾಗ, ಕಾರ್ಮಿಕ ಮುಷ್ಕರದಲ್ಲಿ ಮುಂದೆ ನಿಂತ ರಾಮಪ್ಪ ಗೋಲಿಬಾರಿನಲ್ಲಿ ಸತ್ತನೆಂದು ಸುದ್ದಿ ಬರುತ್ತದೆ. ನಿರ್ಭಾವದ ಶೂನ್ಯ ಮನಸ್ಸಿನಿಂದ, ಗಂಡನ ಶವವನ್ನು ನೋಡಲಿಕ್ಕಾಗಲಿ, ಅಂತ್ಯ ಸಂಸ್ಕಾರ ಮಾಡಲಿಕ್ಕಾಗಲಿ ಹೋಗದೆ ತಾಳಿಯನ್ನು ಕಿತ್ತುಹಾಕಿ ಚೆನ್ನಮ್ಮ ತನ್ನ ಹಳ್ಳಿಗೆ ಮರಳುವ ದಾರುಣ ಚಿತ್ರದೊಂದಿಗೆ ಕತೆ ಮುಗಿಯುತ್ತದೆ. ಮದುವೆಯಾದ ಹೊಸದರಲ್ಲಿ ಹಳ್ಳಿಯನ್ನು ಬಿಟ್ಟು ಗಂಡನೊಂದಿಗೆ ಪಟ್ಟಣಕ್ಕೆ ಹೋಗುವಾಗ ಅದೇನು ಪ್ರೀತಿ! ಅದೇನು ಸಂಭ್ರಮ! ಅಪರಂಜಿಯಾಗಿ ಅವರ ಒಕ್ಕತನ ಆರಂಭವಾಯಿತು. ಆದರೆ ಪಟ್ಟಣದ ಬಾಳಿಗೆ ಅವರ ಸುಖ ಬಲಿಯಾಯಿತು. ಮುಗ್ಧ ಹೆಣ್ಣು ಏನೂ ಮಾಡಲಾಗನೆ ತೊಳಲಿದಳು. ಹೆಜ್ಜೆ ಹೆಜ್ಜೆಗೂ ತಪ್ಪು ಮಾಡುತ್ತ ಕೊನೆಗೆ ಗಂಡ ದುರ್ಮರಣಕ್ಕೆ ಈಡಾದ. ಸಣ್ಣ ಮಗುವಿನೊಂದಿಗೆ ಚೆನ್ನಮ್ಮ ತೌರಿಗೆ ಹಿಂತಿರುಗಬೇಕಾಯಿತು. ಇದಕ್ಕೆ ಕಾರಣ ವಿಧಿ ಅಲ್ಲ. ಮಾಸ್ತಿಯವರು ಬೇರೆ ಏನೂ ಹೇಳದೆ ಕತೆಯನ್ನು ಮಾತ್ರ ಹೇಳಿ, ನಮ್ಮ ಕಷ್ಟಸುಖಗಳಿಗೆ, ಸಮಸ್ಯೆಗಳಿಗೆ ನಮ್ಮ ಸ್ವಭಾವ, ನಮ್ಮ ವರ್ತನೆಗಳೇ ಕಾರಣ ಎಂಬುದು ಓದುಗರಿಗೆ ತಿಳಿಯುವಂತೆ ಮಾಡುತ್ತಾರೆ.

ಶ್ರೀನಿವಾಸರ ಮೊದಲ ಸಂಕಲನದ ಮೊದಲ ಕತೆಯೇ 'ರಂಗನ ಮದುವೆ.'

ಒಂದು ಸಾಮಾನ್ಯವಾದ ಹಳ್ಳಿಯ ಒಂದು ಸಾಧಾರಣ ಸಂಗತಿ ಈ ಕತೆಯ ವಸ್ತು. ಮದುವೆ ಎಂಬುದು ಅಸಾಧಾರಣ ಸಂಗತಿ ಯೇನಲ್ಲವಲ್ಲ. ಹೊಸ ಹಳ್ಳಿಯ ಕರಣಿಕರ ಮಗ ರಂಗ. ಬೆಂಗಳೂರಲ್ಲಿ ಓದು ಮುಗಿಸಿ ಬಂದಾಗ ಎಲ್ಲಿಲ್ಲದ ಗೌರವ! ರಂಗ ಒಳ್ಳೆಯ ಹುಡುಗ. ಇಂಗ್ಲಿಷ್ ಕಲಿತರೂ ಬದಲಾಗಿರ ಲಿಲ್ಲ. ಹಳೆಯ ಸಂಸ್ಕೃತಿ–ಸಂಪ್ರದಾಯ ಬಿಟ್ಟಿರಲಿಲ್ಲ. ಹಿರಿಯರನ್ನು ಗೌರವಿಸು ತ್ತಿದ್ದ. ಹಿರಿಯರಾದ ಶಾಮಣ್ಣ, "ಯಾವಾಗಪ್ಪಾ ನಿನ್ನ ಮದುವೆ?" ಎಂದು ಕೇಳಿದರೆ, "ನಾನೀಗಲೇ ಮದುವೆಯಾಗು ವುದಿಲ್ಲ" ಎಂದ. "ಹುಡುಗಿ ಚೆನ್ನಾಗಿರ ಬೇಕು, ತನಗೆ ಸರಿಯಾಗಿರಬೇಕು. ಪ್ರೇಮದ ಮಾತಾಡಿದರೆ ಅರ್ಥಮಾಡಿ ಕೊಳ್ಳುವಷ್ಟು ಪ್ರೌಢೆಯಾಗಿರಬೇಕು", ಎಂದೆಲ್ಲ ಹೇಳಿದ. ಈ ಹುಡುಗನಿಗೆ ಹೇಗಾದರೂ ಮಾಡಿ ಮದುವೆ ಮಾಡಿಸಲೇ ಬೇಕು ಎಂದು ಶಾಮಣ್ಣ ಶಪಥ ಮಾಡಿ ದರು. ಅದೇ ಹಳ್ಳಿಯ ರಾಮರಾಯರ ಅಕ್ಕನ ಮಗಳು ರತ್ನಾನೆ ಈತನಿಗೆ ತಕ್ಕ ಹುಡುಗಿ ಎನಿಸಿತು. ರತ್ನಳಿಗೆ ೧೧ ವರ್ಷ. ಚೆಲುವೆ. ಮಧುರವಾಗಿ ಹಾಡಲು ಬರುತ್ತದೆ. ಏನೊ ನೆಪದಲ್ಲಿ ಆಕೆಯನ್ನು ಶಾಮಣ್ಣ ಮನೆಗೆ ಕರಿಸಿದರು. ಏಕೆ ಬರಹೇಳಿದರೆಂದು ತಿಳಿಯದೆ ರಂಗನೂ ಅದೇ ಸಮಯಕ್ಕೆ—ಅಂದರೆ ರತ್ನಳ ಕೈಲಿ ಹಾಡು ಹೇಳಿಸುತ್ತ ಶಾಮಣ್ಣ ಕುಳಿತಿದ್ದಾಗ— ಅಲ್ಲಿಗೆ ಬಂದ. ರಂಗನ ಮುಖ ನೋಡು ತ್ತಲೇ ಅರ್ಧಕ್ಕೆ ನಿಲ್ಲಿಸಿ ರತ್ನ ನಾಚಿ ಒಳಕ್ಕೆ ಓಡಿದಳು. ರಂಗ ಅವಳನ್ನು ನೋಡಿದ.

ನೋಡಿ ಆಗಲೆ ಮೆತ್ತಗಾದ. ಆಕೆ ಯಾರು ಎಂದು ಕೇಳಿದ. "ಆಕೆ ಯಾರಾದರೇನು, ನನಗೂ ನಿನಗೂ? ನನಗೆ ಮದುವೆ ಆಗಿದೆ. ನೀನು ಮಾಡಿಕೊಳ್ಳುವುದಿಲ್ಲ", ಎಂದರು ಶಾಮಣ್ಣ ಒಳಗೊಳಗೇ ನಗುತ್ತ, ಆಕೆಗೆ ಮದುವೆಯಾಗಿ ಒಂದು ವರ್ಷ ಆಗಿದೆ ಎಂದೂ ಸುಳ್ಳು ಸೇರಿಸಿದರು. ಅವನಲ್ಲಿ ಆಸೆ ಹುಟ್ಟಿರುವುದನ್ನು ತಿಳಿದೇ ಈ ಮಾತು ಆಡಿದ್ದರು. ಒಂದೆರಡು ದಿನ ಕಳೆದ ಮೇಲೆ ತಮ್ಮ ಪರಿಚಯದ ಜೋಯಿಸರಿಂದ ಭವಿಷ್ಯವನ್ನು ಹೇಳಿಸುವ ಸನ್ನಿವೇಶ ಬರು ವಂತೆ, ರಂಗ ಕುತೂಹಲದಿಂದ ತನ್ನ ಭವಿಷ್ಯ ವನ್ನು ತಿಳಿಯುವಂತೆ, ನಾಟಕ ಮಾಡಿಸಿ ಅವನ ಬಯಕೆಯನ್ನು ಬಯಲಿಗೆಳೆದು, ಆತನು ಮದುವೆಯಾಗುವ ಹುಡುಗಿಯ ಹೆಸರು ಸಮುದ್ರದಲ್ಲಿ ಸಿಕ್ಕುವ ಪದಾರ್ಥದ ಹೆಸರು ಎಂದು ಜೋಯಿಸರ ಬಾಯಿಂದ ಹೇಳಿಸಿದರು. ಸಮುದ್ರದಲ್ಲಿ ಸಿಕ್ಕುವ ಪದಾರ್ಥದ?! ಕಮಲ ಅಲ್ಲ ಶಂಖ ಅಲ್ಲ ರತ್ನ ಎಂದು ಊಹಿಸುವಂತೆ ಮಾಡಿ ರಂಗನ ಆಸೆಯನ್ನು ಕೆರಳಿಸಿ, ಆದರೆ ಆಕೆಗೆ ಆಗಲೆ ಮದುವೆ ಆಗಿದೆ ಎಂದು ನೆನಪು ಕೊಟ್ಟು ಆತ ಮುಖ ಸಪ್ಪಗೆ ಮಾಡುವಂತೆ ಮಾಡಿ, ನಂತರ ರಾಮರಾಯರನ್ನು ವಿಚಾರಿಸಿದ ನಾಟಕ ಮಾಡಿ, ಯಾರೋ ಹೇಳಿದ್ದು, ಸುಳ್ಳು, ಆಕೆಗಿನ್ನೂ ಮದುವೆ ಆಗಿಲ್ಲ ಎಂಬ ನಿಜಸಂಗತಿಯನ್ನು ಹೇಳಿದರು. ರಂಗನ ಮುಖ ಅರಳಿತು. ಈಗಲೆ ಮದುವೆ ಆಗೋಲ್ಲ. ಹುಡುಗಿ ಹಾಗಿರಬೇಕು ಹೀಗಿರ ಬೇಕು ಎನ್ನುತ್ತಿದ್ದವ ರತ್ನಳನ್ನು ಕೂಡಲೆ

ಮದುವೆಯಾದ. ಕತೆ ಇಲ್ಲಿಗೆ ಮುಗಿಯಬೇಕು. ಆದರೆ ಶಾಮಣ್ಣ ಇನ್ನೂ ಒಂದು ಸಂಗತಿ ಹೇಳಿ ಕತೆಗೆ ಒಪ್ಪಕೊಡುತ್ತಾರೆ. ರಂಗಪ್ಪ-ರತ್ನ ತಮ್ಮ ಮಗುವಿನ ಮೂರನೆ ಹುಟ್ಟುಹಬ್ಬಕ್ಕೆ ಶಾಮಣ್ಣನವರನ್ನು ಕರೆಯುತ್ತಾರೆ. ಮಗುವಿಗೆ ಅವರ ಹೆಸರನ್ನೇ ಇಟ್ಟಿರುವುದನ್ನು ಕೇಳಿ, "ಒಳ್ಳೆ ಚಿನ್ನದ ಕೊಳಗದಂತಿರುವ ಮಗುವಿಗೆ, ಎಲ್ಲ ಬಿಟ್ಟು, ಕಬ್ಬಿಣದ ತುಂಡಿನಂತಿರುವ ನನ್ನ ಹೆಸರನ್ನೇಕೆ ಇಟ್ಟಿರಿ? ಇದು ಸರಿಯಲ್ಲ", ಹಾಸ್ಯ ಮಾಡುತ್ತಾರೆ. ಒಳಗೊಳಗೇ ಖುಷಿ! ಸರಳ ಸಹಜ ಮಾನವೀಯ ಗುಣಗಳ–ಸಂಬಂಧಗಳ ಸೊಗಸಾದ ಕತೆಯಾಗಿದೆ ಇದು.

ರಂಗ ಮದುವೆಯಾದ ಕತೆ ಕೇಳಿದಿರಿ. ಮದುವೆಯಾದ ಮೇಲೆ ಆತ ರಂಗಪ್ಪ ಎಂಬ ಗೌರವ ಪಡೆದು, 'ರಂಗಪ್ಪನ ದೀಪಾವಳಿ', 'ರಂಗಪ್ಪನ ಕೋರ್ಟ್‌ಷಿಪ್' ಎಂಬ ಕತೆಗಳನ್ನೂ ಶಾಮಣ್ಣ ಹೇಳುತ್ತಾರೆ. ರಂಗಪ್ಪನ ದೀಪಾವಳಿ ಅಂದರೆ ಅಳಿಯನ ಮೊದಲ ದೀಪಾವಳಿ. ಅತ್ಯಂತ ಸಂಭ್ರಮ, ಉತ್ಸಾಹಗಳಿಂದ ಮಾವನ ಮನೆಗೆ ಹೋದ ರಂಗಪ್ಪ ರತ್ನಳನ್ನು ಮಾತಾಡಿಸುವ ಅವಕಾಶಕ್ಕೆ ಪಟ್ಟ ಪಾಡು, ಏನೂ ತಿಳಿಯದ ಮುಗ್ಧೆ ಎಂದುಕೊಂಡಿದ್ದರೆ, ರತ್ನ ಸೇರಿಗೆ ಸವ್ವಾಸೇರಾಗಿ ಕೊಟ್ಟ ಉತ್ತರ—ಈ ಎಲ್ಲ ಅನುಭವದ ತಮಾಷೆ ಕತೆಯ ಒಂದು ಭಾಗವಾದರೆ, ಅದರ ಇನ್ನೊಂದು ಮುಖ ಇನ್ನೂ ಹೆಚ್ಚು ಸ್ವಾರಸ್ಯವಾಗಿದೆ. ರಂಗಪ್ಪ-ರತ್ನ ನಡುವೆ ನಡೆದ ಸಂಗತಿ ಅವರಿಗಲ್ಲದೆ ಬೇರೆ ಯಾರಿಗೂ ತಿಳಿಯದ ರಹಸ್ಯ. ಅಂತಹ ವಿಷಯವನ್ನು ತಮಗೆ ಹೇಳಿದವಳು ರಂಗಪ್ಪನ ತಂಗಿ ಅಮ್ಮಯ್ಯ ಎಂದು ಆಕೆಯ ವಿಷಯವಾಗಿ ಶಾಮಣ್ಣ ಹೇಳುವ ನಾಲ್ಕು ಮಾತು ದೀಪಾವಳಿಯ ವಿನೋದಕ್ಕಿಂತಲೂ ಸ್ವಾರಸ್ಯವಾಗಿದೆ. ಅದನ್ನು ಶಾಮಣ್ಣನವರ ಮಾತುಗಳಲ್ಲಿ ಕೇಳುವುದೇ ಚೆಂದ:

"ಅಮ್ಮಯ್ಯ ರಂಗಪ್ಪನ ತಂಗಿ. ಏಳೆಂಟು ವರ್ಷದ ಹುಡುಗಿ. ಆದರೇನು ಬಹು ಬುದ್ಧಿ. ಅವಳಿಗೆ ಮದುವೆಯಾದ ಕಾಲಕ್ಕೆ ಗಂಡನಿಗೆ ಬಹು ಕೆಲಸ ಕೊಡುತ್ತಾಳೆ, ನನಗೆ ಗೊತ್ತು. ಅವನು ಮಾತಾಡಿಸಿದರೆ, ಇವಳು ಮಾತಾಡದೆ ಇರುವುದು. ಮಾತಾಡಿದರೂ ಕೊಂಕು ಕೊಂಕಾಗಿ ಮಾತಾಡುವುದು. ಅವನು ಇದ್ದೆಡೆ ಇವಳು ನಿಲ್ಲದೆ ಇರುವುದು. ಅಂತೂ ಅವನಿಗೆ ತೊಂದರೆಯೇ ಸರಿ. ದೇವರ ಸತ್ಯವಾಗಿಯೂ ನಾನು ಚಿಕ್ಕವನಾಗಿಲ್ಲದೆ ಇರುವುದು ನನಗೆ ಸಂತೋಷ. ಚಿಕ್ಕವನಾಗಿದ್ದಿದ್ದರೆ ಅವಳನ್ನು ಮದುವೆಮಾಡಿಕೊಳ್ಳುವ ಘಟನೆ ಎಲ್ಲಿ ಪ್ರಾಪ್ತವಾಗುತ್ತಿತ್ತೋ ಬಲ್ಲವರು ಯಾರು.

ಅಮ್ಮಯ್ಯನಿಗೆ ಆಗ ಮೂರು ವರ್ಷ. ಆಗಾಗ ಅವಳನ್ನು ನಮ್ಮ ಮನೆಗೆ ಕರೆದುಕೊಂಡು ಹೋಗುತ್ತಿದ್ದೆ. ಒಂದು ದಿನ ಮಧ್ಯಾಹ್ನ ಚಾಪೆ ಮೇಲೆ ಉದ್ದಕ್ಕೆ ಕಾಲು ಚಾಚಿ ಬಿದ್ದುಕೊಂಡಿದ್ದೆ. ಅಮ್ಮಯ್ಯನೂ ಅಲ್ಲೇ ಕುಳಿತಿದ್ದಳು. ನಮ್ಮಾಕೆ ಅಲ್ಲಿ ಬಂದು ತಲೆಕೂದಲನ್ನು ಸರಿಮಾಡಿಕೊಳ್ಳುತ್ತ ಕುಳಿತರು. ನಾನು ತಮಾಷೆಗೆ, "ನನ್ನ ತಲೆಯನ್ನೂ ಬಾಚಬಾರದೆ", ಎಂದು ಕೇಳಿದೆ. "ನಿಮ್ಮ ತಲೆ ಬಾಚಿ ಶೃಂಗಾರ ಮಾಡದೆ ಇದ್ದರೆ ಬಹಳ ನಿಂತು ಹೋಯಿತು," ಎಂದರು. "ನೀನು ನನ್ನ ಹೆಂಡತಿ. ನನಗೆ ವಯಸ್ಸಾದ ಹಾಗೆಲ್ಲ

ನಿನಗೂ ವಯಸ್ಸಾಯಿತು ನಿನಗೆ ನನ್ನ ಕಂಡರೆ ಆಗತ್ಯವಿಲ್ಲ. ನಾನು ಎರಡನೆಯ ಮದುವೆಯನ್ನು ಮಾಡಿಕೊಂಡಿದ್ದರೆ ಅವಳು ನನ್ನನ್ನು ಇಷ್ಟು ಅಸಡ್ಡೆ ಮಾಡುತ್ತಿರಲಿಲ್ಲ," ಎಂದೆ. "ಅವಕ್ಕೇನು ಇವತ್ತು ತಲೆ ಬಾಚಿಕೊಳ್ಳೋಣ ಎನಿಸಿತು, ನಾಳೆ ಇನ್ನೊಂದು ಮದುವೆ ಮಾಡಿಕೊಳ್ಳೋಣ ಅಂತ ತೋರಬಹುದು," ಎಂದು ಹೇಳಿ ಸ್ವಲ್ಪ ನಕ್ಕರು. ನನಗೆ ಅವರನ್ನು ನೋಡಿ ಬಹಳ ಮುದ್ದಾಯಿತು. ಆಕೆಯಲ್ಲಿ ಹಿರಿಯಳ ಗಾಂಭೀರ್ಯದ ಜೊತೆಗೆ ಹದಿನಾರರ ಹುಡುಗಿಯ ಚೆಲುವೂ ಇದೆ ಎಂದು ಕಂಡಿತು. ಆಕೆಯ ಮಾತಿಗೆ ನಾನು "ನಮ್ಮ ಮನೆಯಲ್ಲಿ ಆಗಾಗ ಕಾದಾಡುವ ಬೆಕ್ಕುಗಳ ಹೋರಾಟದ ಗದ್ದಲವನ್ನು ನಿಲ್ಲಿಸುವುದೇ ಸಾಕಾಗಿದೆ. ನಿನ್ನ ಜೊತೆಗೆ ಇನ್ನೊಬ್ಬ ಹೆಂಗಸನ್ನು ತಂದು ನೀವು ಹೋರಾಡುವುದನ್ನು ನೋಡಿ ಬದುಕಿದಹಾಗಾಯಿತು," ಎಂದು ಹೇಳಿದೆ. ಆಕೆಯನ್ನು ನೋಡಿದೆ. ಬಹುಚೆನ್ನಾಗಿದ್ದರು. ಹತ್ತಿರ ಹೋಗಿ ಒಂದು ಮುತ್ತು ಕೊಟ್ಟೆ.

ಅಮ್ಮಯ್ಯ ಅಲ್ಲೇ ಕುಳಿತ್ತಿದ್ದಳು. ನಾನು ನನ್ನಾಕೆಯ ಹತ್ತಿರ ಹೋದುದನ್ನು ನೋಡಿ ನಾನು ಅವರನ್ನು ಕಚ್ಚುವುದಕ್ಕೊ ಹೊಡೆಯುವುದಕ್ಕೊ ಹೋದೆನೆಂದು ತಿಳಿದು, "ಏ, ಏ, ಪಾಟಿಯ ತಂಟೆಗೆ ಹೋಗುತ್ತೀಯಾ?" ಎಂದು ನನ್ನನ್ನು ಅಟ್ಟುವುದಕ್ಕೆ ಕೈಯೆತ್ತಿ ಬಂದಳು. ನಾನು ಕಚ್ಚಲೂ ಇಲ್ಲ ಹೊಡೆಯಲೂ ಇಲ್ಲ ಎಂಬುದನ್ನು ನೋಡಿ ಪ್ರಾಯಶಃ ತನ್ನ ಶೌರ್ಯದ ಪ್ರಭಾವದಿಂದಲೇ 'ಪಾಟಿ' ಉಳಿದುಕೊಂಡಳು ಎಂದು ತಿಳಿದು ಸುಪ್ರೀತಳಾಗಿ ಅಲ್ಲೇ ಕುಳಿತಳು.

ನಡೆದದ್ದು ಇಷ್ಟು. ಅನಂತರ ಅಮ್ಮಯ್ಯ ನೆರೆಹೊರೆಯ ಮನೆಯವರಿಗೆಲ್ಲ ಈ ವಿಷಯವನ್ನು ತನಗೆ ತಿಳಿದಂತೆ ಬಣ್ಣ ಕಟ್ಟಿ ಹೇಳುತ್ತ ಹೋದುದು ಪಾಪ? ಶಾಮಣ್ಣನವರಿಗೆ ಗೊತ್ತಾಗುತ್ತಲೆ ಇರಲಿಲ್ಲ. ಅವರಿಗೆ ಇದು ಗೊತ್ತಾದುದು ರತ್ನ ಅವರನ್ನು ರಾಮಾಭಟ್ಟರ ಮನೆಗೆ ಕರೆದುಕೊಂಡು ಹೋದಾಗ, ಗೊತ್ತಾಗಲಿ ಎಂಬ ಉದ್ದೇಶದಿಂದಲೇ ರತ್ನ ಅವರನ್ನು ಆ ಮಧ್ಯಾಹ್ನ ಅಲ್ಲಿಗೆ ಕರೆದೊಯ್ದಳು. ಅ ಮನೆಯಲ್ಲಿ ಪ್ರತಿ ದಿನದ ವಾಡಿಕೆಯಂತೆ ಸೇರಿದ್ದ ಹುಡುಗಿಯರು ಅಮ್ಮಯ್ಯ ಅ ವೇಳೆಗೆ ಎಲ್ಲರಿಗೂ ವರದಿ ಮಾಡಿದ್ದ ವಿಚಾರವನ್ನು ಕುರಿತು ತಮ್ಮೊಳಗೆ ಜೋರಾಗಿ ಮಾತಾಡಿಕೊಳ್ಳುತ್ತಿದ್ದರು. ಶಾಮಣ್ಣನವರು ಹೊರಗೆ ನಿಂತೇ ಕೇಳ ದರು. ವಿಷಯವೇ ಅದು ಎಂದು ಗೊತ್ತಾ ಯಿತು. ಹುಡುಗಿಯರು, "ಇದೇನು ನಾಚಿಕೆ ಕೇಡಮ್ಮಾ! ಅರವತ್ತು ವರ್ಷದ ಮುದುಕ ನಿಗೆ ತಲೆಬಾಚಿಸಿಕೊಳ್ಳುವ, ಎರಡನೆ ಮದುವೆ ಮಾಡಿಕೊಳ್ಳುವ ಹುಚ್ಚು"! ಎಂದು ಆಡಿಕೊಳ್ಳುತ್ತ ಮುಸುಮುಸು ನಗುತ್ತಿದ್ದರು. ಶಾಮಣ್ಣನವರು ಒಳಗ ಕಾಲಿಟ್ಟರು. ಅವರನ್ನು ನೋಡುತ್ತಲೆ ಹುಡುಗಿಯರೆಲ್ಲ ಮತ್ತಷ್ಟು ಜೋರಾಗಿ ನಗುತ್ತ ಒಳಕ್ಕೆ ಓಡಿ ಹೋದರು.

ಈ ಅನುಭವದಿಂದ ಶಾಮಣ್ಣನವರ ಕಿರಿಯರಿಗೆ ಒಂದು ಎಚ್ಚರಿಕೆಯ ಮಾತ ಹೇಳುತ್ತಾರೆ. "ನೋಡಿ, ಅಂತಹ ಸಂದರ್ಭ ನಿಮ್ಮ ಬಾಳಿನಲ್ಲಿ ಬಂದಾಗ ಹತ್ತಿ ಯಾರಾದರೂ ಮಕ್ಕಳಿದ್ದರೆ "ಇವರಿದ್ದ ರೇನು" ಎಂದು ಮಾತ್ರ ಅಲಕ್ಷ್ಯ ಮಾ

ಬೇಡಿ. ನನ್ನ ಹಾಗೆ ವಯಸ್ಸಾದವರಂತೂ ಇನ್ನೂ ಎಚ್ಚರಿಕೆ ವಹಿಸಬೇಕು. ಯಾರಾದರೂ ಮಕ್ಕಳು ಹೇಳಿದ್ದು ಕೇಳಿದರೆ, ಪಾಪ! ಮುಗ್ಧ ಮಕ್ಕಳ ಬಾಯಿಂದ ಸುಳ್ಳು ಬರುವುದಿಲ್ಲವೆಂದೇ ತಿಳಿದು, 'ಇದೇನು, ಇಷ್ಟು ವಯಸ್ಸಾದ ಮೇಲೂ ಈ ಅವಿವೇಕವೇ?' ಎಂದು ಹೇಳುವರು. ಆಗ ನಗೆಗೇಡಿಗೆ ಗುರಿಯಾಗುವಿರಿ. ಜೋಕೆ! ಹೇಳಿದ್ದೇನೆ."

ಹೀಗೆ ರಂಗಪ್ಪನ ಕತೆಗಳು, ವೆಂಕಟರಾಯನ ಪಿಶಾಚಿ ಎಂಬ ಕತೆ, ಉಗ್ರಪ್ಪನ ಉಗಾದಿ ಎಂಬ ಕತೆಗಳಲ್ಲಿ ಕಾಣುವ ಸರಸ-ವಿನೋದ ಒಂದು ಸಂಸ್ಕೃತ ಹಾಗೂ ಪರಿಶುದ್ಧ ಮನೋಧರ್ಮದ ಗುಣ. ಇಂತಹ ಮನೋಧರ್ಮ ರೂಪುಗೊಳ್ಳಬೇಕಾದರೆ ಹಲವಾರು ಮಾನವೀಯ ಗುಣಗಳು ಮೈಗೂಡಿರಬೇಕಾಗುತ್ತದೆ.

ಇದು ಶ್ರೀನಿವಾಸರ ಕತೆಗಳ ಕೆಲವು ನಮೂನೆ ಅಷ್ಟೆ. ವೆಂಕಟಿಗನ ಹೆಂಡತಿ, ಮಸುಮತ್ತಿ, ಒಂದು ಹಳೆಯ ಕತೆ, ಬಾದಷಹನ ತೀರ್ಪು, ಕವಿಯ ಬಾಳಿನ ಕೊನೆ ದಿನ, ಹೇಮಕೂಟದಿಂದ ಬಂದ ಮೇಲೆ, ಮೊಸರಿನ ಮಂಗಮ್ಮ, ಇಂದಿರೆಯೊ ಅಲ್ಲವೊ, ಬೀದಿಯಲ್ಲಿ ಹೋಗುವ ನಾರಿ, ನಮ್ಮ ಮೇಷ್ಟರು ಎಂಬ ಬೇರೆ ಬೇರೆ ನಮೂನೆಯ ಕತೆಗಳೂ ಶ್ರೇಷ್ಠವಾದ, ಮರೆಯಲಾಗದ ಕತೆಗಳಾಗಿವೆ. ಒಂದೊಂದರಲ್ಲೂ ಒಂದೊಂದು ಬಗೆಯ ಮಾನವೀಯ ಹೃದಯದ ಮಿಡಿತವಿರುವುದು ಸಹೃದಯರಲ್ಲಿ ಪಡಿನುಡಿಯುತ್ತದೆ.



ಜೀವಮಾನ ಪೂರ್ತಿ ಶಿಶುಗಳಾಗಿಯೇ ಉಳಿದಿರಲು ನಮಗೆ ಅವಕಾಶ ಒದಗುವ ಕ್ರಿಯಾಕ್ಷೇತ್ರವೆಂದರೆ ವ್ಯಾಸಂಗ ಮತ್ತು ಸಾರ್ವತ್ರಿಕವಾಗಿ, ಋತದ ಹಾಗೂ ಸೌಂದರ್ಯದ ಅನ್ವೇಷಣೆ.

—ಐನ್‌ಸ್ಟೈನ್

ಸೂರದಾಸರ ಭ್ರಮರಗೀತ

ಡಾ|| ಎಂ. ಎನ್. ಮೃತ್ಯುಂಜಯ
೯೩೨, ೨ನೇ ಹಂತ, ೫ನೇ ಮುಖ್ಯರಸ್ತೆ
ಬೋಗಾದಿ ಉತ್ತರ ಬಡಾವಣೆ
ಮೈಸೂರು-೫೭೦ ೦೦೬

"ಸೂರ ಸೂರ, ಸಸಿ ತುಲಸೀ,
ಉಡುಗಣ ಕೇಶವದಾಸ್"

"ಹಿಂದೀ ಸಾಹಿತ್ಯದಲ್ಲಿ ಉಪಾಲಂಭ ಕಾವ್ಯದ ರೀತಿಯಲ್ಲಿ "ಭ್ರಮರ ಗೀತ" ವಿಶೇಷ ಮಹತ್ವದ್ದಾಗಿದೆ.

ಭ್ರಮರ ಗೀತ— "ಭ್ರಮರ" ಮತ್ತು "ಗೀತ" ಎಂಬ ಎರಡು ಶಬ್ದಗಳ ಜೋಡಣೆಯಿಂದ ಆಗಿದೆ. "ಭ್ರಮರ" ಶ್ಯಾಮ ವರ್ಣದ ಹಾರುವಂಥ ಒಂದು ಕೀಟವಾಗಿದೆ. ಇದಕ್ಕೆ ಮಧುಕರ್, ಮಧುಪ, ಅಲಿ, ಭೃಂಗ, ಭೌಂರ—ಇತ್ಯಾದಿ ಹೆಸರುಗಳಿವೆ. ಭ್ರಮರದ ಶ್ಯಾಮ ಶರೀರದ ಮೇಲೆ ಪೀತ ವರ್ಣದ ಒಂದು ಸೂತ್ರ ಇರುತ್ತದೆ. 'ಗೀತ' ಎಂದರೆ ಗಾನ.

ಭ್ರಮರ ಗೀತ ಎಂದರೆ "ಭ್ರಮರದ ಗಾನ" ಅಥವಾ ಭ್ರಮರವನ್ನು ಲಕ್ಷ್ಯವಾಗಿಟ್ಟುಕೊಂಡು ಹಾಡಿದ ಗಾನ—ಎಂದಾಯಿತು.

ಭ್ರಮರ ಗೀತದ ಅರ್ಥವಿಸ್ತಾರ

ಕಾವ್ಯದಲ್ಲಿ "ಭ್ರಮರ" ಶಬ್ದದ ಉಪಯೋಗ ಕೃಷ್ಣ ಮತ್ತು ಅವನ ಸ್ನೇಹಿತ ಉದ್ಧವನಿಗಾಗಿ ಮಾಡಲ್ಪಟ್ಟಿದೆ.

ಶ್ರೀಕೃಷ್ಣ ಮತ್ತು ಉದ್ಧವ ಶ್ಯಾಮ ವರ್ಣದವರಾಗಿದ್ದರು; ಪೀತಾಂಬರವನ್ನು ಉಡುತ್ತಿದ್ದರು. ಉದ್ಧವನ ವೇಷ ಮತ್ತು ಉಡುಪು ಭ್ರಮರದ ಸಮಾನವಾಗಿಯೇ ಇದ್ದುವು. ಉದ್ಧವ ಅಂತರ್ಮುಖೀ ಸಾಧನೆಯಲ್ಲಿಯೇ ತಲ್ಲೀನನಾಗಿ ಕಮಲ-ಸಂಪುಟದಲ್ಲಿ ಆವೃತವಾಗಿರುವ, ಮೌನವಾಗಿ ಸಮಾಧಿಸ್ಥ ಭ್ರಮರದ ಸಾಮ್ಯವನ್ನು ನೆನಪಿಗೆ ತರುವವನಾಗಿದ್ದನು. ಅಂದರೆ "ಭ್ರಮರ ಗೀತ"ದಲ್ಲಿ ಉದ್ಧವನನ್ನು "ಭ್ರಮರ"ದ ಪ್ರತೀಕವಾಗಿ ಗುರುತಿಸಲಾಯಿತು.

ಈ ರೀತಿಯಲ್ಲಿ "ಭ್ರಮರ ಗೀತ"ದ ಅರ್ಥ "ಭ್ರಮರವನ್ನು ಲಕ್ಷ್ಯವಾಗಿಟ್ಟುಕೊಂಡು ಬರೆದ ಹಾಡು" ಎಂದಾಯಿತು.

ಶ್ರೀಕೃಷ್ಣನ ವರ್ಣ ಭ್ರಮರದ ಸಮಾನವಾಗಿದೆ. ಶ್ರೀಕೃಷ್ಣ ಪೀತಾಂಬರ ಧಾರಣೆ ಮಾಡುತ್ತಾನೆ.

ಭ್ರಮರದ ಶರೀರದ ಮೇಲೆ ಹಳದಿಯ ಚಿಹ್ನೆ (ಗೆರೆ) ಇದೆ. ಭ್ರಮರ ಸ್ವರ-ಗುಂಜನದಿಂದ ಮನಸ್ಸನ್ನು ಮುಗ್ಧಗೊಳಿಸುತ್ತದೆ

ಕೃಷ್ಣ ಪಿಳ್ಳಂಗೋವಿಯ ಮಧುರ ಧ್ವನಿಯಿಂದ ಜನಮನವನ್ನು ಮುಗ್ಧಗೊಳಿಸುತ್ತಾನೆ. ಭ್ರಮರ ಒಂದು ಪುಷ್ಪದ ಪ್ರೇಮವನ್ನು ಮುರಿದು ಮುಂದಿನ ಪುಷ್ಪಕ್ಕೆ ಹಾರುತ್ತದೆ; ಶ್ರೀಕೃಷ್ಣನೂ ಸಹ ಗೋಪಿಯರ ಪ್ರೇಮವನ್ನು ಮುರಿದು ಹಾಕಿ ಮಥುರಾಕ್ಕೆ ಹೊರಟು ಹೋಗುತ್ತಾನೆ.

ಭ್ರಮರವು ಪುಷ್ಪದ ರಸವನ್ನು ಕದಿಯುತ್ತದೆ; ಕೃಷ್ಣ ಗೋ-ರಸವನ್ನು ಕದಿಯುತ್ತಾನೆ. ಪುಷ್ಪ-ರಸವನ್ನು ಹೀರಿ, ನಂತರ ಅದನ್ನು ಬಿಸಾಡಿ, ಭ್ರಮರ ದುಷ್ಟತೆಯನ್ನು ಪ್ರದರ್ಶಿಸುತ್ತದೆ. ಶ್ರೀಕೃಷ್ಣ ಗೋಪಿಯರನ್ನು ಪ್ರೀತಿಸಿ ಅವರನ್ನು ಬಿಟ್ಟು ಮಥುರಾಕ್ಕೆ ಹೊರಟುಹೋಗುತ್ತಾನೆ.

ಇಲ್ಲಿ "ಭ್ರಮರ" ಶಬ್ದ ಪ್ರತೀಕಾರ್ಥದಲ್ಲಿ ಉಪಯೋಗಿಸಲ್ಪಟ್ಟಿದೆ. "ಭ್ರಮರ" ಶ್ರೀಕೃಷ್ಣ ಮತ್ತು ಉದ್ಧವ—ಇಬ್ಬರಿಗೂ ಪ್ರಯುಕ್ತವಾಗಿದೆ.

ಹಿಂದೀ ಕಾವ್ಯದಲ್ಲಿ ಕೃಷ್ಣ, ರಾಧಾ ಮತ್ತು ಗೋಪಿಯರ ಪ್ರೇಮ ಪ್ರಸಂಗವನ್ನು ತೆಗೆದುಕೊಂಡು ಉದ್ಧವ ಮತ್ತು ಭ್ರಮರದ ಮಾಧ್ಯಮದಿಂದ ಬರೆದ ಕಾವ್ಯವೆಲ್ಲಾ "ಭ್ರಮರ ಗೀತ"ದ ಕ್ಷೇತ್ರಕ್ಕೆ ಬರುತ್ತದೆ.

"ಭ್ರಮರ ಗೀತ" ವಿಪ್ರಲಂಭ ಶೃಂಗಾರದ ಕಾವ್ಯ. ಕೃಷ್ಣ ಗೋಪಿಯರೊಂದಿಗೆ ಪ್ರೇಮ-ಲೀಲೆಗಳನ್ನು ನಡೆಸಿ, ಅವರನ್ನು ತನ್ನ ವಿಯೋಗದಲ್ಲಿ ಸಂಕಟ ಪಡುವ ಹಾಗೆ ಮಾಡಿ, ಮಥುರಾಕ್ಕೆ ಹೊರಟುಹೋಗುತ್ತಾನೆ. ಮಥುರಾದಲ್ಲಿ ಕಂಸನ ವಧೆ ಮಾಡಿ ರಾಜ-ಕಾರ್ಯದಲ್ಲಿ ಲೀನನಾಗುತ್ತಾನೆ. ಗೋಕುಲಕ್ಕೆ ವಾಪಸು ಬರುವ ಪ್ರಸಂಗ ಬರುವುದಿಲ್ಲ. ತನ್ನ ಜ್ಞಾನೀ—ಮಿತ್ರನಾದ ಉದ್ಧವನನ್ನು ಗೋಕುಲದಲ್ಲಿ ವಾಸಿಸುತ್ತಿರುವ ತಾಯಿ-ತಂದೆ, ಗೋಪ-ಗೋಪಿಯರನ್ನು ಸಾಂತ್ವನಗೊಳಿಸುವುದಕ್ಕೋಸ್ಕರ ಕಳುಹಿಸಿಕೊಡುತ್ತಾನೆ. ಗೋಕುಲದಲ್ಲಿ ಉದ್ಧವ-ಗೋಪಿಯರ ಮಧ್ಯೆ ವಾದ-ವಿವಾದ ನಡೆಯುತ್ತದೆ. ಉದ್ಧವ ವಾದ-ವಿವಾದದಲ್ಲಿ ಸೋಲುತ್ತಾನೆ. ಗೋಪಿಯರ ಪ್ರೇಮ-ಭಾವನೆಯಲ್ಲಿಯೇ ನಿಮಗ್ನನಾಗಿ ಅಲ್ಲಿಂದ ಮಥುರಾಕ್ಕೆ ಹಿಂದಿರುಗುತ್ತಾನೆ.

ಭ್ರಮರಗೀತದ ಕಥೆ ಇಷ್ಟು ಸಂಕ್ಷಿಪ್ತ ಹಾಗೂ ನೇರವಾಗಿದೆ.

ಭಾಗವತ ಬರೆದ ಪುಣ್ಯಾತ್ಮ ಗೋಪೀ-ಉದ್ಧವ—ಸಂವಾದದ ಮಧ್ಯೆ ಒಂದು ಭ್ರಮರವನ್ನು ತಂದಿಡುತ್ತಾನೆ. ಒಂದು ಭ್ರಮರ ಹಾರುತ್ತಾ ಹಾರುತ್ತಾ ಬಂದು ಒಬ್ಬ ಗೋಪಿಯ ಚರಣವನ್ನೇ ಕಮಲವೆಂದು ತಿಳಿದು ಕುಳಿತುಕೊಳ್ಳುತ್ತದೆ.

ಗೋಪಿಯರು ಉದ್ಧವನನ್ನು ಬಿಟ್ಟು ಭ್ರಮರದ ಬೆನ್ನಟ್ಟುತ್ತಾರೆ. ಅವರು ಭ್ರಮರವನ್ನುದ್ದೇಶಿಸಿ, ಕೃಷ್ಣ ಮತ್ತು ಉದ್ಧವರನ್ನು ನಿಂದನೆ ಮಾಡುತ್ತಾರೆ.

ಗೋಪಿಯರೆದುರಿಗೆ ಉದ್ಧವನ ಜ್ಞಾನ-ಗರ್ವ ತಗ್ಗಿ ಹೋಗುತ್ತದೆ.

ಭಾಗವತದ ಕಥಾನಕದ ಆಧಾರದ ಮೇಲೆ ಕಾವ್ಯ ರಚನೆ ಆಗುತ್ತಲೇ ನಡೆಯಿತು.

ಇದರ ಹೆಸರು "ಭ್ರಮರ ಗೀತ" ಎಂದಾಯಿತು.

ಭಾಗವತ ಮತ್ತು ಸೂರದಾಸರ ಭ್ರಮರ ಗೀತ

ಶ್ರೀಕೃಷ್ಣ ಉದ್ಧವನನ್ನು "ವ್ರಜ"ಕ್ಕೆ ಕಳುಹಿಸುತ್ತಾನೆ—"ಮಾತಾ-ಪಿತರ ಕುಶಲ ಕ್ಷೇಮ ವಿಚಾರಿಸಲು ಮತ್ತು ತಿಳುವಳಿಕೆ ಹೇಳಿ ಪ್ರಸನ್ನಗೊಳಿಸಲು ಹಾಗೂ ಸಂತುಷ್ಟಿಗೊಳಿಸುವುದಕ್ಕೋಸ್ಕರ ಅದರ ಜೊತೆಗೇನೇ ಗೋಪಿಯರಿಗೆ ತಿಳುವಳಿಕೆ ಹೇಳಿ, ಅವರ ವಿಯೋಗ-ವ್ಯಥೆಯನ್ನು ಕಡಿಮೆ ಮಾಡಿ, ಸಾಂತ್ವನಗೊಳಿಸುವುದಕ್ಕೋಸ್ಕರ."

ಸೂರದಾಸರ ಉದ್ಧವ ಜ್ಞಾನ ಮತ್ತು ಯೋಗದ ಉಪದೇಶ ಕೊಡುತ್ತಾನೆ. ಭಾಗವತದಲ್ಲಿ ಹಾಗಲ್ಲ. ಭಾಗವತದ ಉದ್ಧವನಿಗೆ ತನ್ನ ಜ್ಞಾನದ ಗರ್ವ ಇಲ್ಲ. ಅವನು ಗೋಪಿಯರ ಅನನ್ಯ ಪ್ರಶಂಸೆಗೊಳಗಾಗುತ್ತಾನೆ. ಅವನು ಗೋಪಿಯರಿಗೆ ಜ್ಞಾನ, ಯೋಗ, ನಿರ್ಗುಣದ ಉಪದೇಶವನ್ನು ನೀಡುವುದಿಲ್ಲ.

ಭಾಗವತದ ಗೋಪಿಯರು ಕೃಷ್ಣನ ಕುಶಲ ಕ್ಷೇಮವನ್ನು ವಿಚಾರಿಸುತ್ತಾರೆ. ನಂತರ ಅವನಿಗೆ ಉಪಾಲಂಭ ಕೊಡುತ್ತಾರೆ. ವಿರಹ-ವೇದನೆಯಿಂದ ವ್ಯಾಕುಲರಾಗಿ ಅಳಲು ಪ್ರಾರಂಭಿಸುತ್ತಾರೆ. ಇದೇ ಸಂದರ್ಭದಲ್ಲಿ ಎಲ್ಲಿಂದಲೋ ಒಂದು ಭ್ರಮರ ಹಾರುತ್ತಾ ಹಾರುತ್ತಾ ಬಂದು ಒಬ್ಬ ಗೋಪಿಯ ಪಾದದ ಮೇಲೆ ಕುಳಿತುಕೊಳ್ಳುತ್ತದೆ. ಆ ಭ್ರಮರವನ್ನು ಉದ್ದೇಶವಾಗಿಟ್ಟುಕೊಂಡು ಪ್ರೇಮದಲ್ಲಿ ಪುರುಷರು ಮಾಡುವ ವಿಶ್ವಾಸಘಾತವನ್ನು ಸ್ಮರಣೆ ಮಾಡಿಕೊಂಡು ಗಂಡಸರ ಭರ್ತ್ಸನೆ ಮಾಡುತ್ತಾರೆ.

ಗೋಪಿಯರ ದೃಢ 'ಪ್ರೇಮ-ಭಕ್ತಿ'ಯನ್ನು ನೋಡಿ ಉದ್ಧವನ ಹೃದಯ ಗೋಪಿಯರ ವಿಚಾರದಲ್ಲಿ ಶ್ರದ್ಧೆಯಿಂದ ತುಂಬಿ ಬರುತ್ತದೆ. ಅವರು ಜ್ಞಾನ, ಯೋಗ, ಕರ್ಮ—ಇವೆಲ್ಲವುಗಳ ತುಲನೆಯಲ್ಲಿ ಗೋಪಿಯರ ಐಕಾಂತಿಕ ಭಕ್ತಿ-ಭಾವನೆಯನ್ನು ಪ್ರಶಂಸೆ ಮಾಡುತ್ತಾನೆ.

ಭ್ರಮರ ಗೀತದ ರಚನೆಯಲ್ಲಿ ಭಾಗವತಕಾರನ ಉದ್ದೇಶ ಜ್ಞಾನ-ಭಕ್ತಿಯ ದ್ವಂದ್ವವನ್ನು ಎತ್ತಿ ತೋರಿಸುವುದಾಗಿರಲಿಲ್ಲ. ಅವನು ಜ್ಞಾನ, ಕರ್ಮ, ಭಕ್ತಿಯ ಸಾಮರಸ್ಯದ ಸ್ಥಾಪನೆ ಮಾಡಿದ್ದಾನೆ.

ಸೂರದಾಸರೂ ಸಹ ಈಶ್ವರ-ಪ್ರೇಮದ ವಿಚಾರ ಹೇಳಿದ್ದಾರೆ. ಆದರೆ ಇವರು ಈ ಪ್ರಸಂಗದಲ್ಲಿ ನಿರ್ಗುಣ, ಸಗುಣ ಹಾಗೂ ಜ್ಞಾನ-ಭಕ್ತಿಗಳ ರೋಚಕ ವಿವಾದವನ್ನು ಎತ್ತಿ ಕಾವ್ಯ-ಚಮತ್ಕಾರ ಮತ್ತು ಸರಸತೆ ಸೃಷ್ಟಿಸಿದ್ದಾರೆ.

ಈ ರೀತಿ, ಭಾಗವತಕಾರ ಮತ್ತು ಸೂರ ದಾಸರ ಉದ್ದೇಶದಲ್ಲಿ ಮೂಲತಃ ಅಂತರ ಏನೂ ಇಲ್ಲ. ಆದರೆ, ಉದ್ದೇಶ ಪ್ರಾಪ್ತಿಯ ಪದ್ಧತಿಯಲ್ಲಿ ಭಿನ್ನತೆ ಇದೆ.

ಈ ಭಿನ್ನತೆಯೇ ಸೂರದಾಸರ ಮೌಲಿಕತೆ.

ಭಾಗವತಕಾರನ ಉದ್ದೇಶ ಕೇವಲ ಧರ್ಮ ಸಾಧನೆ.

ಭಾಗವತ (ಸಂಸ್ಕೃತ)ದ ಕಥೆ ಹಿಂದಿಯ ಭ್ರಮರ ಗೀತೆಗಳ ಆಧಾರವಾಗಿದೆ. ಸೂ ದಾಸರ ಉದ್ಧವ "ವ್ರಜ"—ಭೂಮಿ ಹೋಗಲು ತಯಾರಾಗುತ್ತಾನೆ. ಆದ ಶ್ರೀಕೃಷ್ಣನ ಮೋಹಯುಕ್ತವಾದ ಮಾತನ್ನು ಕೇಳಿ ನಸುನಗುತ್ತಾನ. ಮನ

ನಲ್ಲಿ ಜ್ಞಾನ-ಗರ್ವವನ್ನು ಹೊರಸೂಸುತ್ತಾನೆ.

ಸೂರದಾಸರ ಶ್ರೀಕೃಷ್ಣ ಉದ್ಧವನಿಗೆ ಕೇವಲ ಸಾಂತ್ವನ ಕೊಡುವುದಕ್ಕೆ ಮಾತ್ರವಲ್ಲ; ನಿರ್ಗುಣದ ಉಪದೇಶದ ವಿಚಾರವನ್ನು ಹೇಳಲು ಕೂಡ ತಿಳಿಸುತ್ತಾನೆ.


ಸೂರದಾಸರ ಗೋಪಿಯರು ವಾಕ್ಚತುರರು. ಭಾಗವತಕಾರನ ಉದ್ಧವ ಗೋಪಿಯರ ಕೃಷ್ಣ-ಪ್ರೇಮವನ್ನು ಪ್ರಶಂಸಿಸುತ್ತಾನೆ. ಸೂರದಾಸರ ಉದ್ಧವ ಅವರ ಕೃಷ್ಣ-ಪ್ರೇಮದ ನಿರರ್ಥಕತೆಯನ್ನು ತಿಳಿಸಿ ಹೇಳಲು, ಜ್ಞಾನ ಮತ್ತು ಯೋಗದ ಉಪದೇಶ ಕೊಡಲು ಪ್ರಾರಂಭಿಸುತ್ತಾನೆ.

ಗೋಪಿಯರ ಸರಳ ಹೃದಯದ ನಿಷ್ಕಾಮ ಭಕ್ತಿಯ ಮುಂದೆ ಉದ್ಧವ ನಿರುತ್ತರನಾಗುತ್ತಾನೆ, ಪರಾಜಿತನಾಗುತ್ತಾನೆ.

ಇದು ನಿರ್ಗುಣ ಭಕ್ತಿಯ ಮೇಲೆ ಸಗುಣದ, ಜ್ಞಾನದ ಮೇಲೆ ಭಕ್ತಿಯ ಶ್ರೇಷ್ಠತೆ, ಸರಳತೆಯ ಮೇಲ್ಮೆಯನ್ನು ತೋರಿಸುತ್ತದೆ.

ಸೂರದಾಸರು ನಾರಿಯ ತಪಸ್ ಮತ್ತು ಯೋಗದ ಬದಲಿಗೆ ನಾರಿಯ ಸಮರ್ಪಣೆ ಮತ್ತು ಅನನ್ಯತೆಯ ಮೇಲೆ ವಿಶೇಷವಾಗಿ ಗಮನ ಹರಿಸಿದ್ದಾರೆ; ಒತ್ತಿ ಹೇಳಿದ್ದಾರೆ.

ಪುರಾಣ ಮತ್ತು ಕಾವ್ಯದಲ್ಲಿ ಏನು ವ್ಯತ್ಯಾಸ ಇರುತ್ತದೆಯೋ, ಅದೇ ವ್ಯತ್ಯಾಸ ಭಾಗವತ ಮತ್ತು ಸೂರದಾಸರ ಭ್ರಮರ ಗೀತೆಯಲ್ಲಿದೆ.



ಧ್ಯೇಯಸಾಧನೆಗೆ ತನ್ನನ್ನು ತಾನು ತ್ರಿಕರಣಪೂರ್ವಕವಾಗಿ ನಿವೇದಿಸಿಕೊಂಡವ ಮಾತ್ರ ನಿಜವಾದ ನಾಯಕನಾಗಬಲ್ಲ. ಎಂದೇ ನಾಯಕತ್ವ ವ್ಯಕ್ತಿಯ ಸರ್ವಸ್ವವನ್ನೂ ಬೇಡುತ್ತದೆ.

—ಐನ್‌ಸ್ಟೈನ್

ರಾಜೀನಾಮೆ

ಟಿ. ಎಸ್. ಲಲಿತ
೭೦೩, ಮೊದಲನೆ ಮಹಡಿ,
೧೬ನೇ ಮೇನ್, ಸರಸ್ವತಿಪುರಂ
ಮೈಸೂರು–೫೭೦೦೦೯

ಕಛೇರಿಯ ಗುಮಾಸ್ತ ಎಂದರೆ, ಸೃಷ್ಟಿಕರ್ತನ, ಒಂದು ಮೂಕ ಸೃಷ್ಟಿ. ಒಬ್ಬ ಕೆಲಸಗಾರನ ಮೇಲೆ ಜೋರು ಮಾಡಿದರೆ ಆತ ಕೆಲಸ ಮಾಡಲು ನಿರಾಕರಿಸುತ್ತಾನೆ. ಒಬ್ಬ ಕೂಲಿಯವನನ್ನು ಬೈದಿರೋ ಹೊತ್ತ ಸಾಮಾನನ್ನು ಕೆಳಗೆ ಹಾಕಿ ಹೋಗುತ್ತಾನೆ. ಒಬ್ಬ ಭಿಕ್ಷುಕನನ್ನು ಮೂದಲಿಸಿದರೋ ಆತ ತೀಕ್ಷ್ಣ ನೋಟವೊಂದನ್ನು ನಿಮ್ಮತ್ತ ಬೀರುತ್ತಾನೆ. ಒಂದು ಕತ್ತೆಯಾದರೂ, ಮೈಯ್ಯಿಗೆ ಮೈಯ್ಯಿ ತೀರಿಸಿಕೊಳ್ಳುವಂತೆ ಒದೆಯುತ್ತದೆ. ಆದರೆ ಕಛೇರಿಯ ಗುಮಾಸ್ತ ಮಾತ್ರ ಎಲ್ಲವನ್ನೂ ಮೌನವಾಗಿ ಸಹಿಸುತ್ತಾನೆ. ಇಷ್ಟಾದರೂ, ಅದೃಷ್ಟ ಮಾತ್ರ ಅವನ ಮೇಲೆ ಕೃಪೆ ತೋರದು. ಪಾಳು-ಬಿದ್ದ ಪ್ರದೇಶಗಳಾದರೂ, ತಮ್ಮ ಅದೃಷ್ಟದ ಸರದಿ ಕಾಣುತ್ತವೇನೋ. ಮಳೆಗಾಲ ಅವುಗಳಿಗೂ ಒಂದು ಹಸುರಿನ ಹೊದಿಕೆ ಹಾಕಬಹುದು. ಅಲ್ಲಲ್ಲೋ ಕಿರುಹಣತೆಗಳು ಬೆಳಗಬಹುದು. ಆದರೆ ಕಛೇರಿ ಗುಮಾಸ್ತೆಗೆ ಮಾತ್ರ ತನ್ನ ಯಾಂತ್ರಿಕ ಜೀವನಕ್ಕೊಂದು ಉಷಃಕಾಲವೆನ್ನುವುದೇ ಇಲ್ಲ. ಚಳಿಗಾಲದ ಮುಂದೊಂದು ವಸಂತವಿಲ್ಲ. ಅವನ ಕತ್ತಲ ಪ್ರಪಂಚದಲ್ಲಿ, ಬೆಳಕಿನ ಕಿರಣ ಇಣುಕುವುದೇ ಇಲ್ಲ. ಮುದುಡಿದ ಮುಖಕ್ಕೊಂದು ನಗೆಯ ಲೇಪವೂ ಇಲ್ಲ. ಲಾಲಾ ಫತೇಚಂದ್ ಕೂಡ ಇಂಥ ಗುಂಪಿಗೆ ಸೇರಿದವನಾಗಿದ್ದ.

ಕೆಲವೊಮ್ಮೆ ಹೆಸರು ಮನುಷ್ಯನ ನಡವಳಿಕೆಯನ್ನು ಪ್ರತಿಬಿಂಬಿಸುತ್ತದೆನ್ನುತ್ತಾರೆ. ಫತೆಚಂದ್ ಎಂದರೆ 'ವಿಜಯದ ಚಂದ್ರ' ಎಂದರ್ಥ. ಈ ಹೆಸರು ಫತೇಚಂದನಿಗೆ ಸ್ವಲ್ಪವೂ ಹೊಂದುವಂತಿರಲಿಲ್ಲ. ಅವನ ಸ್ವಭಾವಕ್ಕನುಗುಣವಾಗಿ ಅವನನ್ನು 'ಹಾರ್ ಚಂದ್' (ಸೋಲು) ಎಂದು ಕರೆಯುವುದೇ ಸರಿ ಹೊಂದುತ್ತಿತ್ತೇನೋ, ಕಾರಣ ಜೀವನದ ಎಲ್ಲ ಕ್ಷೇತ್ರಗಳಲ್ಲೂ ಫತೇಚಂದ್ ಸೋಲನ್ನನುಭವಿಸಿದ್ದ, ಅ ಸೋಲು ಅವನ ಎಲ್ಲ ಚಟುವಟಿಕೆಗಳ ಮೇಲೂ ತನ್ನ ಛಾಪು ಒತ್ತಿತ್ತು.

ಒಂದು ದಿನ ಫತೇಚಂದ್, ಸಂಜೆ ೫-೩೦ಕ್ಕೆ ಆಫೀಸಿನಿಂದ ಮನೆಗೆ ಹಿಂತಿರು ಗಿದ. ಅದೊಂದು ಚಳಿಗಾಲದ ದಿನ ವಾಗಿದ್ದು, ಆಗಲೇ ಕತ್ತಲಾಗುತ್ತಿತ್ತು. ಮಾಮೂಲಿನಂತೆ, ಸ್ವಲ್ಪ ಸುಧಾರಿಸಿ ಕೊಳ್ಳಲೆಂದು ಮಲಗಿದ್ದ. ಹೊರಗಿನಿಂದ ಯಾರೋ ಅವನನ್ನು ಕರೆದಂತಾಯಿತು

ಮೂಲ: ಪ್ರೇಮಚಂದ್‌ರವರ ಹಿಂದಿ ಸಣ್ಣ ಕಥೆ.

ಹೊರಗೆ ಹೋಗಿ ಯಾರೆಂದು ನೋಡಿ ಬಂದ ಅವನ ಮಗಳು, ಆಫೀಸಿನ ಜವಾನ ಬಂದಿದ್ದಾನೆಂದು ಹೇಳಿದಳು. ಪಾತ್ರೆ ತೊಳೆಯುತ್ತಿದ್ದ ಅವನ ಹೆಂಡತಿ ಶಾರದ, ಅವನೇಕೆ ಬಂದಿದ್ದಾನೆಂದು ತಿಳಿಯುವಂತೆ ಮಗಳಿಗೆ ಹೇಳಿದಳು.

"ಸಾಹೇಬ್ರು ಕರೀತಿದ್ದಾರೆ. ಈಗ್ಲೇ ಆಫೀಸ್ಗೆ ಬರ್ಬೇಕಂತೆ" ಎಂದ ಜವಾನ. ಫತೇಚಂದನ ತೂಕಡಿಕೆ ಹಾರಿತು. ವಿಷಯ ವೇನೆಂದು ತಿಳಿಯಲು ಗಡಬಡಿಸಿ ಎದ್ದ.

"ಆ ನಿಮ್ಮ ಸಾಹೇಬ ಅದೆಂಥಾ ಮನುಷ್ಯ? ಹೇಳಿ ಕಳಿಸೋಕೂ ಹೊತ್ತು ಗೊತ್ತು ಇಲ್ವ? ಇಡೀ ದಿನ ಸಾಕಷ್ಟು ದುಡಿಸಿಕೊಂಡಿರಲ್ಲ? ನೀವ್ಯಾಕೆ ಆಗಲ್ಲಾಂತ ಹೇಳ್ಬಾರ್ದು?"

ಫತೇಚಂದ ತನ್ನಷ್ಟಕ್ಕೇ ಗೊಣಗಿದ. "ಆಶ್ಚರ್ಯ, ಈ ಹೊತ್ತಿನಲ್ಲಿ ನಾನೇಕೆ ಬೇಕಾಗಿರಬಹುದು? ಆಫೀಸು ಬಿಡುವ ಮೊದಲೇ ಎಲ್ಲಾ ಕೆಲ್ಸಾನೂ ಮುಗ್ಸಿದೀನಲ್ಲ", ಎಂದುಕೊಳ್ಳುತ್ತಲೇ, "ತಡಿ ಬಂದೆ" ಎಂದು ಹೊರಗಿದ್ದ ಜವಾನನಿಗೆ ಕೂಗಿ ಹೇಳಿದ.

"ಹೊರಗೆ ಹೋಗುವ ಮೊದಲು ತಿಂಡಿ ತಿಂದು ಹೋಗಿ" ಎನ್ನುತ್ತ, ತಿಂಡಿ ತಟ್ಟೆ ಹಿಡಿದು ಬಂದಳು ಶಾರದ. ಫತೇಚಂದ ತಿಂಡಿ ತಿನ್ನುತ್ತಾ, "ಮಕ್ಕಳು ತಿಂದಾಯ್ತೇ?" ಎಂದು ಕೇಳಿದ.

"ಆಯ್ತು, ಆಯ್ತು" ಶಾರದ ಅಸಹನೆ ಯಿಂದ ಉತ್ತರಿಸಿದಳು. ಅಷ್ಟರಲ್ಲಿ ಮನೆ ಯೊಳಗೆ ಓಡಿ ಬಂದ ಕಿರಿ ಮಗಳು ತಟ್ಟೆ ಯತ್ತ, ಹಸಿದ ಕಣ್ಣಿನಿಂದ ನೋಡಿತು.

"ಇಲ್ಲೇನು ಮಾಡ್ತಿದ್ದೀ, ಹೊರಗೆ ಹೋಗಿ ಆಡಿಕೋ" ಶಾರದೆ ಕೂಗಿದಳು.

"ಮಗೂನೇಕೆ ಬಯ್ತಿ"? ಎನ್ನುತ್ತ ಫತೇಚಂದ, ತನ್ನ ಮಗಳನ್ನು ತನ್ನೊಂದಿಗೆ ತಿಂಡಿ ತಿನ್ನುವಂತೆ ಕರೆದ. ಮಗಳು ಚುನ್ನಿ ತಾಯಿಗೆ ಹೆದರಿ ರೂಮಿನಾಚೆ ಓಡಿತು.

"ಮಗುವನ್ನು ಹೆದರಿಸಿ ಕಳಿಸಬಾರ ದಿತ್ತು. ನನ್ನ ತಟ್ಟೆಯಲ್ಲಿ ಸ್ವಲ್ಪ ತಿಂಡಿ ತಿಂದಿದ್ದರೆ ಏನಾಗುತ್ತಿತ್ತು?"

ಅಲ್ಲಿ ನಿಮಗೇ ತಿನ್ನಲು ಸಾಕಷ್ಟಿಲ್ಲ. ಇನ್ನು ಅದ್ರಲ್ಲೂ ಹಂಚಿದ್ರೆ?"

ಹೊತ್ತಾಗ್ತಿದೆ, ಬೇಗ ಬನ್ನಿ ಬಾಬೂಜಿ. ಹೊರಗಿನಿಂದ ಕೂಗಿದ ಜವಾನ. ಬರಕ್ಕಾಗಲ್ಲ ಅಂತ ಯಾಕೆ ಹೇಳಿ ಕಳ್ಸೋದಿಲ್ಲ?"

"ಅದ್ಹೇಗೆ ಸಾಧ್ಯ? ಇದು ನಮ್ಮ ಭವಿಷ್ಯದ ಪ್ರಶ್ನೆ."

"ಹೀಗೆ ಕೆಲ್ಸ ಮಾಡಿ ನಿಮ್ಮನ್ನೇ ನೀವು ಕೊಂದ್ಕೋತೀರಿ. ನಿಮ್ಮ ಮುಖ ನೋಡಿದ್ರೆ ಎಷ್ಟೋ ತಿಂಗ್ಳಿಂದ ಖಾಯಿಲೆ ಮಲ್ಗಿರೋರ ಹಾಗಿದೀರಿ." ಫತೇಚಂದ್ ಅವಸರವಸರವಾಗಿ ತಿಂಡಿ ನುಂಗಿ, ಲೋಟದ ನೀರು ಕುಡಿದು ಹೊರ ನಡೆದ.

"ನೀವು ತುಂಬಾ ತಡಮಾಡಿದಿರಿ, ಸಾಹೇಬರು ಸಿಟ್ಟಾಗುತ್ತಾರೆ", ಎನ್ನುತ್ತ ಬೇಗ ಬೇಗ ನಡೆಯತೊಡಗಿದ ಜವಾನ. ಫತೇಚಂದನಿಗೆ ನಿಧಾನವಾಗಿ ನಡೆದು ಅಭ್ಯಾಸ. ಬಲುಬೇಗ, ಏದುಸಿರುಬಿಡ ತೊಡಗಿದ.

"ಬೇಗ ಬೇಗ ಬನ್ನಿ ಬಾಬೂಜಿ. ಈಗಾಗ್ಲೇ ಬಹಳ ತಡವಾಗಿದೆ. ಸಾಹೇಬರು ಕೋಪಗೊಳ್ಳುತ್ತಾರೆ" ಎಂದು ಮಧ್ಯೆ ಮಧ್ಯೆ ಕೂಗುತ್ತ ನಡೆದ. ಫತೇಚಂದನಿಗೆ

ಉಸಿರುಕಟ್ಟಿ, ಮುಂದೆ ನಡೆಯಲಾಗಲಿಲ್ಲ. ಕೀಲುಗಳೆಲ್ಲ ನೋವಾಗಿ ಸುಸ್ತಾಗಿತ್ತು.

"ಇನ್ನೊಂದು ನಿಮಿಷದಲ್ಲಿ ನಾನಲ್ಲಿರುತ್ತೇನೆ", ಎಂದು ಕೂಗಿ ಹೇಳಿದ ಫತೇಚಂದನಿಗೆ ಈ ಜವಾನ ಹೋಗಿ, ಏನೇನೋ ಕಥೆ ಕಟ್ಟಿ ಹೇಳುತ್ತಾನೆಂದು ತಿಳಿದಿದ್ದರೂ, ಎದ್ದು ನಿಂತು ಸಾಹೇಬರ ಬಂಗಲೆಯತ್ತ ನಡೆಯತೊಡಗಿದ. ಫತೇಚಂದನಿಗಾಗಿ ಅಸಹನೆಯಿಂದ ಕಾಯುತ್ತ, ತನ್ನ ಮನೆಯ ಪಡಸಾಲೆಯಲ್ಲಿ ಶತಪಥ ಹಾಕುತ್ತಿದ್ದ ಸಾಹೇಬ ಜವಾನನನ್ನು ಕಂಡೊಡನೆ ಇಷ್ಟು ಹೊತ್ತು ನೀನೆಲ್ಲಿ ಹೋಗಿದ್ದೆ? ಬಾಬು ಎಲ್ಲಿ?" ಎಂದು ಕೂಗಿದ.

"ಅವರು ಬರುತ್ತಿದ್ದಾರೆ ಹುಜೂರ್" ಎಂದು ಹೊರಾಂಗಣದ ಮೆಟ್ಟಿಲಿಂದಲೇ ಉತ್ತರಿಸಿದ ಜವಾನ. "ಅವರು ಮನೆಯಿಂದ ಹೊರ ಬರುವುದಕ್ಕೇ ಒಂದು ಯುಗವಾಯ್ತು. ನೀವೇ ನೋಡಿದಂತೆ, ನಾನು ಅಲ್ಲಿಂದಲೂ ಓಡುತ್ತಲೇ ಬಂದೆ" ಎಂದ. ಅಷ್ಟು ಹೊತ್ತಿಗೆ ಒಳಗೆ ಬಂದ ಫತೇಚಂದ್ ಸಾಹೇಬರಿಗೆ ಬಾಗಿ ನಮಸ್ಕರಿಸಿ ನಿಂತ.

"ಬರಲು ಇಷ್ಟು ತಡವೇಕಾಯ್ತು?" ಸಾಹೇಬ ಸಿಟ್ಟಿನಿಂದ ಕೂಗಿದ.

ಸಾಹೇಬನ ಮನಃಸ್ಥಿತಿ ನೋಡಿ ಫತೇಚಂದನ ರಕ್ತ ಹೆಪ್ಪುಗಟ್ಟಿತು. ತಲೆ ತಗ್ಗಿಸಿ ಉರಿಯುಂತೆ ಹೇಳಿದ. "ಹುಜೂರ್, ನಾನು ಆಫೀಸಿನಿಂದ ಅದೇ ತಾನೇ ಮನೆಗೆ ಹೋಗಿದ್ದೆ. ಜವಾನ ಬಂದು ಕರೆದ ಕೂಡಲೇ ಹೊರಟು ಬಂದೆ."

"ನೀನು ಸುಳ್ಳು ಹೇಳುತ್ತಿ. ನಾನು ನಿನಗಾಗಿ ಒಂದು ತಾಸಿನಿಂದ ಕಾಯುತ್ತಿದ್ದೇನೆ."

"ನಾನು ಸುಳ್ಳು ಹೇಳ್ತಿಲ್ಲ. ಜವಾನ ಬಂದ ಕೂಡಲೇ ನಾನು ಮನೆಯಿಂದ ಹೊರಟೆ."

ಚನ್ನಾಗಿ ಕುಡಿದಿದ್ದ ಸಾಹೇಬ, ಕೈಲಿದ್ದ ಛಡಿ ಝಳಪಿಸಿದ.

"ಬಾಯ್ಮುಚ್ಚು ಹಂದಿ" ಎಂದು ಅವಾಚ್ಯ ಶಬ್ದಗಳಿಂದ ಬಯ್ಯುತ್ತಾ ನಾನು ಒಂದು ತಾಸಿನ ಮೇಲಿಂದ ನಿನಗಾಗಿ ಕಾಯುತ್ತಿದ್ದೇನೆ. ನಿನ್ನ ಕಿವಿ ಹಿಡಿದು ಕ್ಷಮಾಪಣೆ ಕೇಳು."

ಎಷ್ಟೇ ಸಾಧುವಾದರೂ ಫತೇಚಂದನಿಗೆ ಈ ಅವಮಾನ ತಾಳಿಕೊಳ್ಳುವುದು ಕಷ್ಟವೆನಿಸಿತು. ಆದರೂ ತನ್ನನ್ನೇ ಹೇಗೋ ನಿಯಂತ್ರಿಸಿಕೊಳ್ಳುತ್ತಾ ಹೇಳಿದ. "ನಾನೇನು ತಪ್ಪು ಮಾಡಿಲ್ಲ ಸಾರ್."

ಫತೇಚಂದನ ಉತ್ತರದಿಂದ ಕೆರಳಿ, "ಬಾಯ್ಮುಚ್ಚು ಹಂದಿ", ಮತ್ತೆ ಬೈದ ಸಾಹೇಬ. ಅವನ ಕಿವಿ ಹಿಂಡುವಂತೆ ಜವಾನನಿಗೆ ಅಪ್ಪಣೆ ಮಾಡಿದ. ಜವಾನ ನಮ್ರತೆಯಿಂದ, ಅಷ್ಟೇ ದೃಢತೆಯಿಂದ, ತನಗೆ ಸಂಬಂಧಪಟ್ಟಂತೆ ಫತೇಚಂದ್ ಕೂಡ ತನಗೆ ಹಿರಿಯ ಅಧಿಕಾರಿ ಎನ್ನುತ್ತಾ, ಆತನ ಕಿವಿ ಹಿಂಡಲು ನಿರಾಕರಿಸಿದ. ಮೊದಲೇ ಕುಡಿದಿದ್ದ ಸಾಹೇಬ, ಅಸಂಬದ್ಧವಾದ ತನ್ನ ಅಪ್ಪಣೆಯನ್ನು, ಜವಾನ ತನ್ನ ಅವಿಧೇಯತೆಯ ಉತ್ತರದಿಂದ ನಿರಾಕರಿಸಿದ್ದು ಕೇಳಿ ಬೆಂಕಿಯಾದ.

"ಗುಮಾಸ್ತೆಯ ಕಿವಿ ಹಿಂಡು ಇಲ್ಲವಾದಲ್ಲಿ ನಿನಗೆ ಛಡಿಏಟು ಹಾಕುತ್ತೇನೆಂದ." ಜವಾನ ದೃಢವಾಗಿ ಹೇಳಿದ, "ನಾನು ಮರ್ಯಾದಸ್ತ. ನಿಮ್ಮ ಸೇವೆ ಮಾಡಬೇಕಾದಲ್ಲಿ, ನಿಮ್ಮ ಅಸಂಬಂದ್ಧ ಅಪ್ಪಣೆ

ಗಳನ್ನು ಪಾಲಿಸಬೇಕೆಂದಾಗಲೀ ಅಥವಾ ನಿಮ್ಮಿಂದ ಹೊಡೆಸಿಕೊಳ್ಳಬೇಕಾದ ಪ್ರಸಂಗ ಬಂದಲ್ಲಿ, ನಿಮ್ಮ ಕೆಲಸ ನೀವೇ ಇಟ್ಟುಕೊಳ್ಳಿ. ಇಂಥ ಜುಜುಬಿ ವಿಷಯಕ್ಕಾಗಿ, ನಾನು ಒಬ್ಬ ಗೌರವಸ್ಥ ಮನುಷ್ಯನನ್ನು ಅಪಮಾನ ಪಡಿಸಲಾರೆ."

ಜವಾನನ ನೇರವಾದ ಮಾತುಗಳು ಮತ್ತಿನಲ್ಲಿದ್ದ ಸಾಹೇಬನನ್ನು ಇನ್ನೂ ರೊಚ್ಚಿಗೆಬ್ಬಿಸಿತು. ಛಡಿ ಹಿಡಿದು ಆತ ಜವಾನನ ಹಿಂದೆ ಓಡಿದ. ಇನ್ನು ತಾನಿಲ್ಲಿರುವುದು ಕ್ಷೇಮವಲ್ಲವೆಂದರಿತ ಆತ, ಸಾಹೇಬ ಸಮೀಪ ಬರುವಷ್ಟರಲ್ಲಿ, ತಪ್ಪಿಸಿಕೊಂಡು ಓಡಿದ.

ಜವಾನನನ್ನು ಹಿಡಿಯಲು ಆಗದ ಸಾಹೇಬನ ಕೋಪವೀಗ ಫತೇಚಂದನತ್ತ ತಿರುಗಿತು. ಅವನ ಕಿವಿಗಳನ್ನು ಗಟ್ಟಿಯಾಗಿ ಹಿಂಡುತ್ತ, ನೀನು ಅವಿಧೇಯ ಹಂದಿ, ಹೋಗಿ ಫೈಲು ತಾ" ಎಂದ.

'ಯಾವ ಫೈಲು?' ಕಿವಿಗಳನ್ನು ಸವರಿಕೊಳ್ಳುತ್ತಾ ಕೇಳಿದ ಫತೇಚಂದ.

"ಯಾವ ಫೈಲು?....ನಿನಗೆ ಗೊತ್ತಿಲ್ಲವಾ ಯಾವ ಫೈಲ್ ಎಂದು....' ನನಗೆ ಫೈಲ್ ಬೇಕು....ನೀನೇನು ಕಿವುಡನಾ?.... ಬೇಗ ಹೋಗಿ ತಾ ಎಂದು ಬಡಬಡಿಸಿದ ಸಾಹೇಬ.

ಫತೇಚಂದ ದಿಗ್ಮೂಢನಾಗಿದ್ದ. ಸಾಹೇಬನೊಂದಿಗೆ ವಾದಿಸುವುದು ವ್ಯರ್ಥ ಎಂದು ಅವನಿಗೆ ಗೊತ್ತು. ಎಷ್ಟಾದರೂ ನಮ್ಮನ್ನು ದಬ್ಬಾಳಿಕೆಯಿಂದ ಆಳುವ ಗುಂಪಿಗೆ ಸೇರಿದವ ಸಾಹೇಬ. ಮೇಲಾಗಿ ಕುಡಿದಿದ್ದ. ಮುಂದೇನು ಮಾಡುತ್ತಾನೆಂದು ಹೇಳುವುದು ಕಷ್ಟ. ಮತ್ತೇನು ಪ್ರಶ್ನಿಸದೆ ಆತ ನೇರವಾಗಿ ಆಫೀಸಿನತ್ತ ನಡೆದ.

'ಓಡು,' ಹಿಂದಿನಿಂದ ಅರಚಿದ ಸಾಹೇಬ.

"ಇಲ್ಲ, ನನ್ನಿಂದ ಓಡಲು ಸಾಧ್ಯವಿಲ್ಲ", ಜಿಗುಪ್ಸೆಯೊಂದಿಗೆ ಹೇಳಿದ. ಫತೇಚಂದ.

"ಸೋಮಾರಿ, ನಿನ್ನಿಂದ ಓಡಕ್ಕಾಗಲ್ವಾ? ಒಂದು ನಿಮಿಷ ತಡಿ. ಹೇಗೆ ಓಡುವುದೆಂದು ನಾನು ನಿನಗೆ ಕಲಿಸುತ್ತೇನೆ" ಎಂದು ಕೂಗಿದ.

ವರ್ಷಗಳಿಂದಲೂ ಮೌನವಾಗಿ, ನಮ್ರತೆಯನ್ನು ಮೈಗೂಡಿಸಿಕೊಂಡು, ಆಫೀಸುಗುಮಾಸ್ತನಾಗಿ ಕೆಲಸ ಮಾಡಿದ ಫತೇಚಂದನಿಗೂ ಸಾಹೇಬನಿಂದಾದ ಅಪಮಾನವನ್ನು ತಡೆದುಕೊಳ್ಳಲಾಗಲಿಲ್ಲ. ಅವನ ತಾಳ್ಮೆಯು ಬಟ್ಟಲು ತುಂಬಿ ಬಂದಿತ್ತು. ಶಾರೀರಿಕ ಶಕ್ತಿ ಇದ್ದಿದ್ದರೆ ಆತ ಸಾಹೇಬನನ್ನು ಹೊಡೆದು ಬಿಡಬಹುದಿತ್ತು. ಆಯುಧವೇನಾದರೂ ಇದ್ದಿದ್ದರೆ ಉಪಯೋಗಿಸಬಹುದಿತ್ತು. ತನಗೆ ಯಾವುದೇ ರಕ್ಷಣೆ ಇಲ್ಲದಿರುವುದರಿಂದ, ತಾನು ಸಾಹೇಬನಿಂದ ಹೊಡೆತ ತಪ್ಪಿಸಿಕೊಂಡು, ಅವನ ದೃಷ್ಟಿಗೆ ಬೀಳದಂತೆ ತಪ್ಪಿಸಿಕೊಂಡು ಹೋದರೆ ಸಾಕೆಂದುಕೊಂಡ.

ಫತೇಚಂದ ಆಫೀಸಿಗೆ ಹೋಗಲಿಲ್ಲ. ಹಾಗೆ ಮಾಡುವುದರಲ್ಲಿ ಅರ್ಥವೂ ಇರಲಿಲ್ಲ. ಕಾರಣ ತನಗೆ ಯಾವ ಫೈಲು ಬೇಕೆಂದು ಸಾಹೇಬ ಹೇಳಿಯೇ ಇರಲಿಲ್ಲ. ಆದ್ದರಿಂದ ಹಿಂತಿರುಗಿ ಮನೆಯತ್ತ ಹೆಜ್ಜೆ ಹಾಕಿದ. ಸಂಜೆ ನಡೆದ ಘಟನೆ ಮನದಲ್ಲೇ ಉಳಿದು, ಅವನ ಸ್ವಾಭಿಮಾನವನ್ನು ಕೆಣಕಿತ್ತು. ತಾನು ಹೇಡಿಯಂತೆ ನಡೆದುಕೊಂಡೆನೆಂದು ಮನ ಚುಚ್ಚುತ್ತಿತ್ತು. ಶಾರೀರಿಕವಾಗಿ ಅಶಕ್ತನಾಗಿದ್ದರೂ, ಅಷ್ಟು ಅಪಮಾನವನ್ನು ತಾನೇಕೆ ತಾಳಿಕೊಂಡೆ? ಏಕೆ ತನ

ಬೂಟು ಕಳಚಿ ಆ ಕುಡುಕನತ್ತ ಎಸೆಯುದಾಡೆ? ತನ್ನೊಳಗಿದ್ದ ಹೇಡಿತನ ಉತ್ತರವಿತ್ತಿತು. ತಾನು ಪ್ರತಿಭಟಿಸಿದ್ದರೆ ಸಾಹೇಬ ತನ್ನನ್ನು ಗುಂಡುಹಾಕಿ ಕೊಲ್ಲಬಹುದಿತ್ತು. ಆಗ ತನ್ನ ಸಂಸಾರ ಹಾಳಾಗುತ್ತಿತ್ತು. ಅವರನ್ನು ನೋಡಿಕೊಳ್ಳುವವರು ಈ ಪ್ರಪಂಚದಲ್ಲಿ ಮತ್ತಾರೂ ಇಲ್ಲ. ಆರ್ಥಿಕವಾಗಿ ಸುಸ್ಥಿತಿಯಲ್ಲಿದ್ದಿದ್ದರೆ ತಾನು ಈ ಅಪಾಯವನ್ನೆದುರಿಸಬಹುದಿತ್ತು. ಮುಂದೆ ಏನಾಗುವುದೆಂದು ತಿಳಿದೂ ಈ ಆಪತ್ತಿಗೆ ಸಿಲುಕಿಕೊಳ್ಳುವುದಕ್ಕಿಂತ, ಮೌನವಾಗಿ ಬಂದಿದ್ದನ್ನು ಸಹಿಸುವುದು ಬಿಟ್ಟು ಬೇರೆ ಮಾರ್ಗವಿಲ್ಲ. ಹೃದಯ ತನಗೆ ಬೇಕಾದ ಕಾರಣಗಳನ್ನು ಹುಡುಕಿಕೊಳ್ಳುತ್ತದೆ. ಒಮ್ಮೆ ತನಗೆ ತಾನೇ ಸಮಾಧಾನ ಹೇಳಿಕೊಳ್ಳುತ್ತ, ಮತ್ತೊಮ್ಮೆ, ತನ್ನ ಮೇಲೆ ತಾನೇ ಸಿಟ್ಟಿಗೇಳುತ್ತ ಮನೆ ತಲುಪಿದ ಫತೇಚಂದ್.

ಮನೆ ತಲುಪಿದಾಗ ಹೆಂಡತಿ ಶಾರದ, ಅವನನ್ನು ಆಫೀಸಿಗೆ ಕರೆಸಿದ್ದೇಕೆಂದು ಕೇಳಿದಳು. ಹಾಸಿಗೆಯಲ್ಲಿ ಮಲಗಿ, "ಆ ದುಷ್ಟ ಹುಡುಗ ನನ್ನನ್ನು ಅಪಮಾನಗೊಳಿಸಿದ. ನಾನು ಹೊತ್ತಾಗಿ ಬಂದೆನೆಂದು ಹೇಳುತ್ತಿದ್ದ. ನನ್ನ ಕಿವಿ ಹಿಂಡುವಂತೆ ಜವಾನನಿಗೆ ಹೇಳಿದ.

"ನೀವವನನ್ನು ಬೂಟಿನಿಂದ ಹೊಡೆಯಲಿಲ್ಲವೆ?" ಕೋಪದಿಂದ ಕೇಳಿದಳು ಶಾರದ.

"ಜವಾನ ಒಳ್ಳೆಯವನು. ಆತ ಸಾಹೇಬ ಹೇಳಿದಂತೆ ಮಾಡಲು ನಿರಾಕರಿಸಿ, ಗೌರವಸ್ಥ ವ್ಯಕ್ತಿಯೊಬ್ಬನನ್ನು ಅಪಮಾನಪಡಿಸಲು ತಾನು ಸಿದ್ಧವಿಲ್ಲವೆಂದು ಹೇಳಿದ.

"ಆತ ನಿಜಕ್ಕೂ ಧೈರ್ಯಶಾಲಿ. ಆದರೆ ನೀವೇಕೆ ನಿಮ್ಮ ಮನಸ್ಸಿನಲ್ಲಿದ್ದುದನ್ನು ಸಾಹೇಬನಿಗೆ ಹೇಳಲಿಲ್ಲ"?

"ಹೇಳಿದೆ. ಆತ ನನ್ನನ್ನು ಕೋಲಿನಿಂದ ಹೊಡೆದ. ನಾನವನಿಗೆ ಬೂಟಿನಿಂದ ಹೊಡೆದೆ!"

"ಅದು ಅವನಿಗೆ ಸರಿಯಾದ ಪಾಠ ಕಲಿಸಿರಬೇಕು. ನೀವು ಸರಿಯಾದ್ದನ್ನೇ ಮಾಡಿದಿರಿ. ಭಲೆ, ನಾನೇನಾದರೂ ಅಲ್ಲಿದ್ದಿದ್ದರೆ ಅವನನ್ನು ಜೀವಂತ ಬಿಡುತ್ತಿರಲಿಲ್ಲ ಎಂದಳು ಶಾರದೆ" ಉತ್ಸಾಹದಿಂದ.

"ಅಲ್ಲಿಗೆ ಈ ವಿಷಯ ಕೊನೆಗಾಣಲ್ಲ. ಇದಕ್ಕಾಗಿ ನಾನು ಕೆಲ್ಸಾನೂ ಕಳ್ಕೋಬಹುದು ಅಥವಾ ಜೈಲು ವಾಸಾನೂ ಆಗಬಹುದು?

"ಯಾಕೆ? ಪ್ರಪಂಚದಲ್ಲಿ ನ್ಯಾಯ ಅನ್ನೋದೇ ಇಲ್ವ?" ಅಲ್ದೆ ಅವ್ನು ತಾನೇ ಮೊದಲು ನಿಮ್ಮನ್ನು ಹೊಡೆದಿದ್ದು" ಎಂದಳು ಶಾರದ ಆಶ್ಚರ್ಯದಿಂದ.

"ಆದ್ರೆ ಯಾರೂ ಅದನ್ನ ನಂಬೋಲ್ಲ. ಶಕ್ತೀನೇ ಹಕ್ಕು. ನ್ಯಾಯಾನೂ ಶಕ್ತಿ ಇದ್ದವನ ಕಡೆಗೇ ಇರುತ್ತೆ."

'ಆದ್ರೇನಂತೆ?' ನಿರ್ವಿಕಾರವಾಗಿ ಉತ್ತರಿಸಿದಳು ಶಾರದೆ. ಮುಂದೆ ಯಾವ ಸಾಹೇಬನೂ ಗುಮಾಸ್ತೆಯ ಬಗ್ಗೆ ಇಷ್ಟು ತುಚ್ಛವಾಗಿ ನಡೆದುಕೊಳ್ಳುವುದು ಸಾಧ್ಯವಿಲ್ಲ ಎಂಬ ಪಾಠ ಕಲಿತಂತಾಯಿತು. ನಿಮ್ಮನ್ನು ಬೈದ ಕೂಡಲೇ ಆತನನ್ನು ಹೊಡೆಯಬೇಕಿತ್ತು ನೀವು.'

ಹಾಗೆ ಮಾಡಿದ್ದರೆ ಆತ ನನ್ನನ್ನು ಕೊಂದೇ ಹಾಕುತ್ತಿದ್ದ. ಆಗ ನಿಮ್ಮೆಲ್ಲರ

ಗತಿ ಏನಾಗುತ್ತಿತ್ತು' ಎಂದ ಫತೇಚಂದ್ ನಗುತ್ತ.

"ದೇವರು ತಾನು ಸೃಷ್ಟಿಸಿದವರನ್ನೆಲ್ಲ ರಕ್ಷಿಸುತ್ತಾನೆ. ಪ್ರಪಂಚದಲ್ಲಿ ಎಲ್ಲಕ್ಕಿಂತ ಮುಖ್ಯವಾದದ್ದೆಂದರೆ ಮರ್ಯಾದೆ. ಅದನ್ನು ಕಳೆದುಕೊಂಡಾತ, ತನ್ನ ಸಂಸಾರವನ್ನು ನೋಡಿಕೊಳ್ಳುವ ಅಧಿಕಾರವನ್ನು ಕಳೆದುಕೊಳ್ಳುತ್ತಾನೆ. ನೀವೇನಾದರೂ ಅವನಿಗೆ ಪ್ರತೀಕಾರ ಮಾಡಿಲ್ಲದಿದ್ದಲ್ಲಿ, ನಾನು ಬಾಯಿಬಿಟ್ಟು ಹೇಳದಿದ್ದರೂ, ನಾನು ನಿಮ್ಮ ಬಗ್ಗೆ ಅಪಮಾನಿತಳಾಗುತ್ತಿದ್ದೆ. ನನಗೀಗ ನಿಮ್ಮ ಬಗ್ಗೆ ಹೆಮ್ಮೆ ಎನಿಸಿದೆ ಪರಿಣಾಮ ಏನೇ ಇರಲಿ, ಅದನ್ನು ನಾನು ಸಂತೋಷವಾಗಿ ಎದುರಿಸುತ್ತೇನೆ ಎಂದು ಹೇಳುತ್ತಿದ್ದ ಶಾರದಳ ಕೂಗನ್ನು ಕಿವಿಯ ಮೇಲೆ ಹಾಕಿಕೊಳ್ಳದೆ ಹುಚ್ಚನಂತೆ ಮನೆಯಿಂದಾಚೆ ಓಡಿದ ಫತೇಚಂದ. ಅವನ ಮನಸ್ಸು, ಏನೋ ದೃಢನಿರ್ಧಾರವನ್ನು ತೆಗೆದುಕೊಂಡಿತ್ತು. ಈಗವನಿಗೆ ಅಳುಕು, ಅಂಜಿಕೆ, ಏನೂ ಇಲ್ಲ. ಇದುವರೆಗೂ ಬಿಳುಚಿಕೊಂಡು, ತೆಳ್ಳಗೆ, ನಿಶ್ಯಕ್ತನಾಗಿದ್ದ ಫತೇಚಂದನಲ್ಲೀಗ ಹೊಸ ಶಕ್ತಿಯು ಸಂಚಾರವಾಗಿತ್ತು. ತನ್ನ ಸ್ನೇಹಿತನೊಬ್ಬನಿಂದ ಕೋಲೊಂದನ್ನು ಎರವಲು ಪಡೆದು ನೇರವಾಗಿ ಸಾಹೇಬನ ಬಂಗಲೆಯತ್ತ ನಡೆದ.

ಒಂಬತ್ತು ತಾಸಾಗಿತ್ತು, ಸಾಹೇಬ ಊಟ ಮಾಡುತ್ತಿದ್ದ. ಅವನು ಊಟ ಮುಗಿಸುವುದಕ್ಕು ಕಾಯದೆ, ಫತೇಚಂದ ನೇರವಾಗಿ, ಅವನ ರೂಮಿನೊಳಗೆ ನುಗ್ಗಿದ ಅವನನ್ನು ಕಂಡ ಸಾಹೇಬ ಕಿಡಿಕಿಡಿಯಾದ.

"ನಡಿಯಾಚೆ. ಅಪ್ಪಣೆ ಇಲ್ಲದೆ ಒಳಗೇಕೆ ಬಂದೆ?" ಎಂದು ಕೂಗಿದ. ಫತೇಚಂದ ಕೋಲನ್ನು ಎತ್ತಿ ಹಿಡಿದು ಹೇಳಿದ. ನೀನು ಫೈಲ್ ಬೇಕೆಂದು ಕೇಳಿದ್ದೆ ಅಲ್ಲವೆ? ಅದನ್ನೀಗ ತಂದಿದ್ದೇನೆ. ಊಟ ಮುಗಿಸು. ನಂತರ ನಿನಗದನ್ನು ಕೊಡುತ್ತೇನೆ. ಅಲ್ಲಿಯವರೆಗೂ, ನಾನಿಲ್ಲಿ ಕಾಯುತ್ತೇನೆ. ಚೆನ್ನಾಗಿ ಊಟ ಮಾಡು. ಇದೇ ನಿನ್ನ ಕೊನೆಯ ಊಟವೂ ಆಗಬಹುದು."

ದಿಗ್ಭ್ರಾಂತನಾದ ಸಾಹೇಬ. ಅರ್ಧ ಹೆದರಿಕೆ ಹಾಗೂ ಅರ್ಧ ಕೋಪ ತುಂಬಿದ ದೃಷ್ಟಿಯಿಂದ ಫತೇಚಂದನತ್ತ ನೋಡಿದ. ಫತೇಚಂದನ ಮುಖದ ಮೇಲೆ ದೃಢ ನಿರ್ಧಾರ ನೆಲೆಸಿತ್ತು. ಆತ ಮುಯ್ಯಿಗೆ ಮುಯ್ಯಿ ತೀರಿಸಿಕೊಳ್ಳಲೆಂದು ಬಂದಿದ್ದಾನೆಂಬುದು ಎದ್ದು ಕಾಣುತ್ತಿತ್ತು. ಸಾಹೇಬ ಅಧೀರನಾಗಿದ್ದ. ಎಲ್ಲಿಯವರೆಗೆ ನಾಯಿ ಗುರುಗುಟ್ಟುವುದಿಲ್ಲವೊ? ಅಲ್ಲಿಯವರೆಗೂ ಅದನ್ನು ಹೊಡೆಯುವುದು ಸುಲಭ. ಆದರೆ ಅದು ಒಮ್ಮೆ ಹಿಂತಿರುಗಿ ಹೆದರಿಸಿತೆಂದರೆ, ನಿರ್ಧಾರ ಬದಲಾಗುತ್ತದೆ. ಸಾಹೇಬನ ಸ್ಥಿತಿಯೂ ಇದೇ ಆಗಿತ್ತು. ಫತೇಚಂದನಿಗೆ ಎದುರುತ್ತರಿಸದೆ ಎಲ್ಲ ನೋವು ಅಪಮಾನವನ್ನು, ಎಲ್ಲಿಯವರೆಗೆ ಸಹಿಸುತ್ತಾನೆಂದು ತಿಳಿದಿದ್ದನೋ, ಅಲ್ಲಿಯವರೆಗೆ ಆತ ಒರಟಾಗಿದ್ದ. ಈಗವನ ಧೈರ್ಯ ಕುಸಿಯತೊಡಗಿತು. ಶಾರೀರಿಕವಾಗಿ ಆತ, ಬಲಶಾಲಿಯಾಗಿದ್ದರೂ, ಅಶಕ್ತನಾದ ಫತೇಚಂದ್, ಈಗ ಒಂದಕ್ಕೆರಡಾಗಿ, ಸೇಡುತೀರಿಸಿಕೊಳ್ಳುವ ನಿರ್ಧಾರ ಮಾಡಿದ್ದು ಚೆನ್ನಾಗೇ ಅರ್ಥವಾಗಿತ್ತು. ತಾನವನನ್ನು ಕೆಲಸದಿಂದ ವಜಾಮಾಡಬಹುದು. ತನ್ನ ಹಿರಿಯ ಅಧಿಕಾರಿಯ ಮೇಲೆ ಕೈಮಾಡಿದ ಅಪಾದನೆಗಾಗಿ ಅವನಿಗೆ ಶಿಕ್ಷೆ ಮಾಡಿಸಲೂ ಬಹುದು.

ಆದರೆ ಇದರಿಂದ ಹುಟ್ಟುವ ವದಂತಿಗಳನ್ನು ಯಾರೂ ತಡೆಯಲಾರರು. ಆದ್ದರಿಂದ ಆತ ಯುಕ್ತಿಯಿಂದ ಕೆಲಸ ಮಾಡಲು ಯೋಚಿಸಿ, ಫತೇಚಂದ್ "ನೀನೇಕೋ ನನ್ನ ಬಗ್ಗೆ ಕೋಪಗೊಂಡಂತೆ ಕಾಣುತ್ತದೆ. ನಿನ್ನನ್ನು ಬೇಸರ ಪಡಿಸುವಂತೇನಾದರೂ ನಾನು ನಡೆದುಕೊಂಡಿದ್ದೀನ?"

ಫತೇಚಂದ್ ಒತ್ತಿ ಹೇಳಿದ. "ಅರ್ಧ ತಾಸಿಗೆ ಮೊದಲು ನೀನು ನನ್ನ ಕಿವಿ ಹಿಂಡಿ ನನ್ನನ್ನು ಬೈದೆ, ಆಗಲೇ ಮರೆತು ಬಿಟ್ಟೆಯಾ?"

"ನಾನು ನಿನ್ನ ಕಿವಿ ಹಿಂಡಿದೆನೆ?" ಅಚ್ಚರಿ ನಟಿಸುತ್ತ ಕೇಳಿದ ಸಾಹೇಬ. "ನೀನೆಲ್ಲೋ ತಮಾಷೆ ಮಾಡುತ್ತಿರಬೇಕು. ನಾನೇನು ಹುಚ್ಚನೆಂದು ತಿಳಿದಿದ್ದೀಯ?"

"ಹಾಗಾದರೆ ನಾನು ಸುಳ್ಳು ಹೇಳುತ್ತಿದ್ದೀನಾ? ಇದಕ್ಕೆ ಜವಾನನೇ ಸಾಕ್ಷಿ. ನಿನ್ನ ಆಳುಗಳೂ ಅದನ್ನು ನೋಡುತ್ತಿದ್ದರು."

"ಇದನ್ನೆಲ್ಲ ನಾನು ಯಾವಾಗ ಮಾಡಿದೆ?" ತಾನು ನಿರಪರಾಧಿ ಎಂದು ನಟಿಸುತ್ತ ಹೇಳಿದ ಸಾಹೇಬ.

"ಕೇವಲ ಅರ್ಧ ತಾಸಿನ ಹಿಂದೆ."

"ನಿಜವಾಗಲೂ? ನಾನು ಸ್ವಲ್ಪ ಶರಾಬು ಕುಡಿದಿದ್ದೆನೆಂದು ತಪ್ಪೊಪ್ಪಿಕೊಳ್ಳಲೇಬೇಕು. ಬೇರರ್ ನನಗೆ ಸ್ವಲ್ಪ ಜಾಸ್ತಿಯೇ ಶರಾಬು ಕೊಟ್ಟಿದ್ದಾನೆ. ಅಯ್ಯೋ ದೇವರೆ ನಾನು ನಿಜಕ್ಕೂ ಹಾಗೆ ಮಾಡಿದೆನೆ?"

"ಶರಾಬಿನ ಮತ್ತಿನಲ್ಲಿ ನೀನು ನನ್ನನ್ನು ಕೊಂದಿದ್ದರೆ ನಾನು ಸತ್ತೇ ಹೋಗುತ್ತಿದ್ದೆನಲ್ಲಾ, ನಶೆಯ ಮತ್ತಿನಲ್ಲಿ ಮಾಡಿದ್ದೆಲ್ಲವೂ ಕ್ಷಮಾರ್ಹ ಎಂದರೆ ನಾನೀಗ ಕುಡಿದು ಮತ್ತಿನಲ್ಲಿದ್ದೇನೆಂದೇ ತಿಳಿ. ನಿನ್ನ ಕಿವಿ ಹಿಡಿದು ನನ್ನಲ್ಲಿ ಕ್ಷಮೆ ಕೇಳಬೇಕು. ಇನ್ನೆಂದೂ ನಿನ್ನ ಕೈಕೆಳಗಿನವರ ಬಗ್ಗೆ ಇಂಥ ಕೀಳು ವರ್ತನೆ ತೋರಿಸುವುದಿಲ್ಲೆಂದೂ ಮಾತೂ ಕೊಡಬೇಕು. ಹೇಳಿದಂತೆ ಮಾಡು ಇಲ್ಲವೇ ನಾನೇ ನಿನ್ನ ಕಿವಿ ಹಿಂಡುತ್ತೇನೆ. ನಿನ್ನ ಜಾಗದಿಂದ ಕದಲಬೇಡ. ಇಲ್ಲವಾದಲ್ಲಿ ಈ ಕೋಲು ನಿನ್ನ ಬುರುಡೆಯನ್ನು ಒಡೆಯುತ್ತದೆ. ಈಗ ನಿನ್ನ ಕಿವಿ ಹಿಡಿದುಕೋ!"

"ಖಂಡಿತಾ ನೀನು ಹಾಸ್ಯ ಮಾಡುತ್ತಿದ್ದೀ" ಎಂದು ಗಲಿಬಿಲಿಗೊಂಡ ಸಾಹೇಬ. ನಿನಗೆ ಬೇಸರಪಡಿಸುವಂತೆ ನಾನೇನಾದರೂ ನಡೆದುಕೊಂಡಿದ್ದರೆ, ಅದಕ್ಕಾಗಿ ಕ್ಷಮೆ ಕೇಳುತ್ತೇನೆ."

"ನಿನ್ನ ಕಿವಿ ಹಿಡಿದುಕೋ", ಫತೇಚಂದ ಕಟುವಾಗಿ ನುಡಿದ.

ಸಾಹೇಬ, ಗುಮಾಸ್ತೆಯನ್ನು ಸಮಾಧಾನ ಪಡಿಸಲು ತಯಾರಿದ್ದನೇ ಹೊರತು, ತನಗೆ ಅಪಮಾನಕರವಾದ ಕೆಲಸ ಮಾಡಲು ತಯಾರಿರಲಿಲ್ಲ. ತನ್ನ ಜಾಗದಿಂದ ಹಾರಿ, ಫತೇಚಂದನ ಕೈಲಿದ್ದ ಕೋಲನ್ನು ಕಸಿದುಕೊಳ್ಳಲು ಯತ್ನಿಸಿದ. ಇದನ್ನು ಮೊದಲೇ ನಿರೀಕ್ಷಿಸಿದ್ದ ಫತೇಚಂದ, ಸಾಹೇಬನ ಬರಿದಾದ ತಲೆಯಮೇಲೆ ಬಲವಾಗಿ ಹೊಡೆದ. ಚಕ್ಕರ ಬಂದಂತೆ ಆದ ಸಾಹೇಬ ಕೈಯ್ಯಿಂದ ತನ್ನ ತಲೆ ಹಿಡಿದು, "ನಿನ್ನನ್ನು ಕೆಲಸದಿಂದ ವಜಾ ಮಾಡುತ್ತೇನೆಂದು ಕೂಗಿದ.

'ನನಗದರ ಬಗ್ಗೆ ಯೋಚನೆಯಿಲ್ಲ. ಆದರೆ, ನೀನು ಕಿವಿ ಹಿಡಿದುಕೊಳ್ಳುವರೆಗೂ ನಾನು ನಿನ್ನನ್ನು ಬಿಡುವುದಿಲ್ಲ. ನೀನು ಬೇಗ ಹಾಗೆ ಮಾಡದಿದ್ದಲ್ಲಿ ಮತ್ತೊಂದು


ಏಟು ತಿನ್ನಬೇಕಾಗುವುದು' ಎನ್ನುತ್ತ ಕೋಲನ್ನು ಮೇಲೆತ್ತಿದ, ಪತೀಚಂದ. ಇಷ್ಟವಿಲ್ಲದೆ ಕೈಗಳನ್ನು ಮೇಲೆತ್ತುತ್ತ ತನ್ನ ಕಿವಿ ಹಿಡಿದು "ಈಗ ನಿನಗೆ ತೃಪ್ತಿಯಾಯಿತೆ? ಎಂದ ಸಾಹೇಬ.

"ಬೇರೆಯವರನ್ನು, ಮುಂದೆಯೂ ಹೀಯಾಳಿಸುವುದಿಲ್ಲವೆಂದು ಹೇಳು."

"ಎಂದಿಗೂ ಹೀಯಾಳಿಸುವುದಿಲ್ಲ" ಎಂದ ಸಾಹೇಬ.

"ನೀನೇನಾದರೂ ಹಾಗೆ ಮಾಡಿದರೆ, ನಾನೆಲ್ಲೂ ದೂರ ಹೋಗಿಲ್ಲವೆಂದು ನೆನಪಿಡು. ಈಗ ನಾನು ನನ್ನ ಕೆಲಸಕ್ಕೆ ರಾಜೀನಾಮೆ ಇತ್ತಿದ್ದೇನೆ. ನಾನೇಕೆ ರಾಜೀನಾಮೆ ಕೊಡುತ್ತಿದ್ದೇನೆಂದು ಸಕಾರಣವಾಗಿ ನನ್ನ ರಾಜೀನಾಮೆ ಪತ್ರ, ನಾಳೆ ಕಛೇರಿಯನ್ನು ತಲುಪುತ್ತದೆ."

ಹೀಗೆ ಹೇಳುತ್ತ, ತನ್ನೊಳಗೂ ಹಾಗೂ ಇಡೀ ಪ್ರಪಂಚದಲ್ಲೇ ಶಾಂತಿ, ತುಂಬಿದವನಂತೆ ಕೊಠಡಿಯಾಚೆ ನಡೆದ. ಹಿಂದೆಂದೂ ಆತ, ಇಂಥ ಸಂತೋಷವನ್ನನುಭವಿಸಿರಲಿಲ್ಲ. ಅದು, ಅವನ ಜೀವನದ ಮೊದಲ ವಿಜಯವಾಗಿತ್ತು.



ಸತ್ಯಶೋಧನೆಯನ್ನು ಕುರಿತು ಹೇಳುವುದಾದರೆ, ಹಲವಾರು ಕುರುಡು ಗಲ್ಲಿಗಳಿಂದ ಕೂಡಿರುವ ಈ ಪ್ರದೇಶದಲ್ಲಿ ನಿಜಕ್ಕೂ ಅರ್ಥವತ್ತಾದುದನ್ನು ಅರಿಯುವತ್ತ ಎಷ್ಟೇ ಚಿಕ್ಕದಾದದ್ದಾದರೂ ವಿಶ್ವಾಸಾರ್ಹವಾದ ಒಂದು ಹೆಜ್ಜೆ ಇಡುವುದು ಎಷ್ಟು ಕಷ್ಟ ಕಾರ್ಯವೆಂಬುದು ಸ್ವಂತ ಕಠಿಣ ಪರಿಶೋಧನೆಯಿಂದ ನನಗೆ ವೇದ್ಯವಾಗಿದೆ.

—ಐನ್‌ಸ್ಟೈನ್

ಖಾನಾವಳಿ ಗಂಗಪ್ಪ

ಡಾ|| ಸ. ಜ. ನಾಗಲೋಟಿಮಠ
೨೫, "ಶಾಂತಾ" ಬಸವ ಕಾಲನಿ
ಬೆಳಗಾವಿ-೫೯೦ ೦೧೦

ನೊಬೆಲ್ ಪ್ರಶಸ್ತಿ ವಿಜೇತ ಪೀಟರ್ ಮೆಡಾವರ್ ತಮ್ಮ ಒಂದು ಪ್ರಬಂಧದಲ್ಲಿ ಬರೆದಿದ್ದಾರೆ:
ಅಡುಗೆಮನೆಯಲ್ಲಿ ಒಲವು ಹರಿಯದಿದ್ದರೆ ಊಟದ ತಾಟಿನಲ್ಲಿ ರುಚಿಮೂಡದು. ಪುರಂದರದಾಸರು "ಪ್ರೇಮವಿಲ್ಲದ ಗಾನಾ ಕೇಳನೋ ಹರಿ ತಾಳನೋ" ಎಂದು ಹಾಡಿದ್ದಾರೆ. ಬಸವಣ್ಣ ಹೇಳಿದ್ದಾರೆ "ಅಯ್ಯಾ ಎಂದರೆ ಸ್ವರ್ಗ ಎಲವೋ ಎಂದರೆ ನರಕ." ಇಂಥ ಒಲವಿನ ಗಣಿ, ಪ್ರೇಮದ ಖನಿ ಮತ್ತು ವಿನಯದ ವಾಣಿ ಖಾನಾವಳಿ ಗಂಗಪ್ಪ.

ನಾವು ಕಾಲೇಜು ಕಲಿಯಲು ಬೇರೆ ಊರಿಗೆ ಹೋಗಬೇಕಾಗುತ್ತಿತ್ತು. ಧಾರವಾಡದ ಕರ್ನಾಟಕ ಕಾಲೇಜು, ಬೆಳಗಾವಿಯ ಲಿಂಗರಾಜ ಕಾಲೇಜು ಅಂದು ಪ್ರಸಿದ್ಧಿ ಪಡೆದ ಕಾಲೇಜುಗಳು. ಇವುಗಳೊಡನೆ ಸೆಣಸಾಡಲು ಇನ್ನೊಂದು ಹೊಸ ಕಾಲೇಜು ಪ್ರಾರಂಭವಾಯಿತು. ಅದು ಹುಬ್ಬಳ್ಳಿಯ ಪಿ. ಸಿ. ಜಾಬಿನ ಸೈನ್ಸ್ ಕಾಲೇಜು, ಅಲ್ಲಿಯ ಪ್ರಿನ್ಸಿಪಾಲರು ಆಗ ಶ್ರೀ ಬೊಮ್ಮಣ್ಣನವರ ಎಂಬ ಹೆಸರಿನವರು. ಅವರು ಹಲವಾರು ಒಳ್ಳೆಯ ಶಿಕ್ಷಕರನ್ನು ಕೂಡಿಸಿಕೊಂಡು ಜಾಬಿನ ಕಾಲೇಜಿಗೆ ಒಳ್ಳೆಯ ಹೆಸರನ್ನು ತಂದಿದ್ದರು. ಅವರ ವರ್ಣನೆಯನ್ನು ಕೇಳಿ ನಮ್ಮ ಊರಿನಿಂದ ಆರು ಜನ ವಿದ್ಯಾರ್ಥಿಗಳು ಅದೇ ಕಾಲೇಜನ್ನು ಸೇರಿದೆವು. ಆಗ ವಿದ್ಯಾರ್ಥಿ ನಿಲಯ ಬಹಳ ಸಣ್ಣದಿತ್ತು. ಅದಕ್ಕೆಂದೇ ಒಂದು ಊಟದ ಮನೆ ಇದ್ದಿಲ್ಲ. ನಮ್ಮನ್ನು ಇಂಜಿನಿಯರಿಂಗ್ ಕಾಲೇಜಿಗೆಂದು ನಡೆಸುತ್ತಿದ್ದ ಊಟದ ಮನೆಗೆ ಸೇರಿಸುತ್ತಿದ್ದರು. ಅದನ್ನು ನಡೆಸುತ್ತಿದ್ದ ವ್ಯಕ್ತಿಯೇ ಗಂಗಪ್ಪ.

ಗಂಗಪ್ಪನ ಅಡ್ಡ ಹೆಸರು ನನಗೆ ಗೊತ್ತಿಲ್ಲ. ಬಹುಶಃ ಅವನು ಸಂಪಗಾವಿಯವನಿರಬಹುದೆಂದು ನೆನಪು. ಅವನು ಬಹಳ ಸೀದಾಸಾದಾ ವ್ಯಕ್ತಿ. ಧೋತರ, ಅರ್ಧ ತೋಳಿನ ಅಂಗಿ, ತಲೆಯ ಮೇಲೆ ಟೊಪ್ಪಿಗೆ, ರುಮಾಲು ಇಂಥವು ಇದ್ದಿಲ್ಲ. ಕಾಲಿಗೆ ಚಪ್ಪಲಿಗಳನ್ನೂ ತೊಡುತ್ತಿರಲಿಲ್ಲ. ಬರಿಗಾಲಿನಿಂದಲೇ ಅಡ್ಡಾಡುವ ರೂಢಿ ಅವನಿಗೆ. ವಾರಕ್ಕೆ ಒಂದು ದಿನ ಗಡ್ಡ ಬೋಳಿಸುತ್ತಿದ್ದ. ಹೀಗಾಗಿ ಅವನ ಮುಖದ ಮೇಲೆ ಯಾವಾಗಲೂ ಅರ್ಧ ಸೆಂಟಿಮೀಟರದಷ್ಟು ಉದ್ದನೆಯ ಗಡ್ಡ ಇರುತ್ತಿದ್ದವು. ತಲೆಯ

ಮೇಲಿನ ಕೂದಲು ದಟ್ಟವಾಗಿದ್ದು. ಎಣ್ಣೆ ಲೇಪಿತವಾಗಿರುತ್ತಿದ್ದವು. ಕೂದಲುಗಳನ್ನು ಓರಣವಾಗಿ ಬಾಚಿಕೊಳ್ಳುವದೆಂದರೆ ಅದು ವಿದ್ಯಾವಂತರ ಲಕ್ಷಣ ಎಂಬ ತಿಳುವಳಿಕೆ ಆಗಿನ ಕಾಲಕ್ಕೆ ಇತ್ತು. ಕಾರಣ ಅವರೆಲ್ಲ ತಲೆಕೂದಲನ್ನು ಎಂದೂ ಬಾಚುತ್ತಿರಲಿಲ್ಲ. ಅವನು ಸ್ವಲ್ಪಸ್ಥೂಲ ದೇಹಿ. ಯಾವಾಗಲೂ ನಗುತ್ತ ಇರುತ್ತಿದ್ದ.

ಅವನು ನಡೆಸುತ್ತಿದ್ದ ಊಟದ ಮನೆ ಇಂದಿನ ದಿನದಲ್ಲಿ ನೋಡಲೂ ಸಹ ಸಿಗಲಿಕ್ಕಿಲ್ಲ ಎಂದೇ ನನ್ನ ಅನಿಸಿಕೆ. ಅಲ್ಲಿ ಒಳ್ಳೆಯ ಖುರ್ಚಿ,ಮೇಜುಗಳು ಇದ್ದಿಲ್ಲ. ಬಣ್ಣ ಬಣ್ಣದ ದೀಪಗಳೂ ಇರಲಿಲ್ಲ. ಊಟಕ್ಕೆ ಕುಳಿತರೆ ಮೊದಲು ದೊಡ್ಡ ಸ್ಟೇನಲೆಸ್‌ಸ್ಟೀಲದ ತಟ್ಟೆ ಬರುತ್ತಿತ್ತು. ಅದರೊಡನೆ ಎರಡು ಸಣ್ಣ ಬಟ್ಟಲು ಹಾಗೂ ಒಂದು ನೀರಿನ ವಾಟಿ. ಒಂದು ಬಟ್ಟಲಿನ ತುಂಬ ಗಟ್ಟಿ ಮೊಸರು. ಇನ್ನೊಂದರಲ್ಲಿ ಘಮಘಮಿಸುವ ಸಾರು. ತಟ್ಟೆಯಲ್ಲಿ ಉಪ್ಪು, ನಿಂಬೇ ಹಣ್ಣಿನ ತುಂಡು, ಉಳ್ಳಾಗಡ್ಡಿಯ ತುಣುಕು, ಒಂದು ತರದ ಚಟ್ನಿ ಪುಡಿ. ಸಾಲಾಗಿ ತಾಟಿನ ದಂಡೆಗುಂಟ ಕುಳ್ಳಿರುತ್ತಿದ್ದವು. ಅನಂತರ ಒಂದು ಕಾಳಿನ ಪಲ್ಯೆ, ಇನ್ನೊಂದು ತರಕಾರಿ. ಇವೆಲ್ಲವನ್ನು ನೋಡುತ್ತ ಕೂಡ್ರುವದು ಆಗುತ್ತಿರಲಿಲ್ಲ. ಅಷ್ಟು ಆಸೆ ಆಗುತ್ತಿತ್ತು. ಅಷ್ಟರಲ್ಲಿ ಬಿಸಿ ಬಿಸಿ ಚಪಾತಿ ಬರುತ್ತಿದ್ದವು. ಚಪಾತಿ ನೀಡುವವನು ಅದರಲ್ಲಿ ಬಹಳ ನಿಷ್ಣಾತ. ಹೊಟ್ಟೆ ಉಬ್ಬಿದ ಚಪಾತಿಗಳನ್ನು ಹಿಡಿಯಾಗಿ ಹಿಡಿದುಕೊಂಡು ಬರುತ್ತಿದ್ದ. ಚಪಾತಿಯ ಒಂದೊಂದು ಪದರುಗಳನ್ನು ಹಿಡಿದು ಜಗ್ಗಿದರೆ ಸರಿಯಾಗಿ ಎರಡು ಪದರುಗಳು ಬೇರೆ ಬೇರೆ ಆಗುತ್ತಿದ್ದವು. ಅವುಗಳ ಹೊಟ್ಟೆಯಿಂದ ಬಿಸಿ ಉಗಿಯು ಜಿಗಿದು ಹೊರಬರುತ್ತಿತ್ತು. ಅವನ ಚಪಾತಿಗಳು ಒಳ್ಳೆಯ ಗೋದಿಯ ಹಿಟ್ಟಿನಿಂದ ಮಾಡಿದವು. "ಎನ್ರಿ ಸಾಹೇಬ್ರ ಈ ಗೋದಿ ನಮ್ಮ ಊರಿನಿಂದ ಬಂದಾದ್ರಿ. ತಿಂದ ರುಚಿ ನೋಡ್ರಿ" ಎಂದು ಹೆಮ್ಮೆಯಿಂದ—ಹೇಳುತ್ತಿದ್ದ. ನಿಜವಾಗಿಯೂ ಅವು ಬಹಳ ರುಚಿಕಟ್ಟಾಗಿರುತ್ತಿದ್ದವು. ಒಂದೊಂದು ಸಲ ನಾವು ಚಪಾತಿಗೆ ಏನನ್ನೂ ಹಚ್ಚಿಕೊಳ್ಳದೆ ತಿಂದು ಮುಗಿಸುತ್ತಿದ್ದೆವು. ಮುಂದೆ ಪಲ್ಯ, ಚಟ್ನಿ, ಮೊಸರುಗಳ ಗೊಂದಲಕ್ಕೆ ಹೋಗುತ್ತಿದ್ದೆವು. ಒಳ್ಳೆಯ ಗೋದಿಯ ಸುಡು ಸುಡು ಚಪಾತಿಯ ರುಚಿ ತಿಂದೇ ಹೇಳಬೇಕು. ಅಂಥಿಂಥ ಅರಬರೆ ಬೆಂದ ಚಪಾತಿ ಮಾಡಿ ಅವುಗಳನ್ನು ಒಂದರಲ್ಲಿ ನಾಲ್ಕೊ ಎಂಟೋ ತುಂಡುಮಾಡಿ ಬಡಿಸುವ ವ್ಯಕ್ತಿ ಅವನಾಗಿದ್ದಿಲ್ಲ. ಎಲ್ಲ ಚಪಾತಿಗಳೂ ಪೂರಿಯಂತೆ ಉಬ್ಬಬೇಕು. ಉಬ್ಬಿದ ಚಪಾತಿಯ ಹೊಟ್ಟೆಯಿಂದ ಉಗಿ ಚಿಲಕಳಿಯಂತೆ ಜಿಗಿಯಬೇಕು. ಆಗ ಪದರುಗಳನ್ನು ಬೇರ್ಪಡಿಸಿ ಒಂದು ಪದರು ನೀಡುವದು ಅವನ ರೀತಿ. ಕೈಗೆ ಉಗಿಬಡಿದು ಬಡಿದು ಅವು ಕಪ್ಪಾದಂತೆ ಕಾಣುತ್ತಿದ್ದವು. ಚಪಾತಿಯನ್ನು ತಿಂದ ಮೇಲೆ ಉಗಿ ಹಾಯುವ ಅನ್ನ ಸಾರು. ಅಂಥ ಊಟಮಾಡಿ ಇನ್ನೇನು ಓದುವದು. ಹೊಟ್ಟೆಭಾರವಾಗುತ್ತಿತ್ತು. ತಲೆಗೆ ಸುಂದು ಬರುತ್ತಿತ್ತು. ತೊಟ್ಟ ಪ್ಯಾಂಟು ಬಿಗಿ ಆಗುತ್ತಿದ್ದವು. ಅವನ ವಿಶೇಷ ಗುಣವೆಂದರೆ ಜೋರೀಮಾಡಿ ನಮಗೆಲ್ಲ ಉಣ್ಣಿಸುವದು. "ಎನ್ರಿ ಸಾಹೇಬ್ರ, ಈ ವಯಸ್ಸಿಗೆ ನೀವು ಜಾಸ್ತಿ ಉಣ್ಣಬೇಕು. ಇಷ್ಟು ಕಡಿಮೆ ಉಂಡರೆ

ಏನು ಗತಿ” ಎಂದು ಹುರಿದುಂಬಿಸುತ್ತಿದ್ದ. ಜಾಸ್ತಿ ಮೊಸರು ಬಡಿಸುತ್ತಿದ್ದ. ಏನಾದರೂ ನೆಪ ಹೇಳಿ ಹೆಚ್ಚು ತಿನ್ನುವಂತೆ ಮಾಡುತ್ತಿದ್ದ. ನಮ್ಮ ಮನೆಯಲ್ಲಿಯೇ ನಮಗೆ ಅಷ್ಟೊಂದು ಕಾಳಜಿ ಮಾಡುತ್ತಿರಲಿಲ್ಲವೆಂದರೂ ನಡದೀತು. ಅಷ್ಟರಮಟ್ಟಿಗೆ ಅವನ ಉಪಚಾರ ನಮಗೆಲ್ಲ ಅಂದರೆ ಎಲ್ಲ ವಿದ್ಯಾರ್ಥಿಗಳಿಗೂ. ಓದುವದು ಆಗುವದಿಲ್ಲ, ನಿದ್ದೆ ಬರುತ್ತದೆ ಎಂದು ಅಂಗಲಾಚಿದರೂ. “ಒಂದು ತಾಸು ಆರಾಮ ನಿದ್ರೆ ಮಾಡಿರಿ ಆಮೇಲೆ ಎದ್ದು ಸಾಕಷ್ಟು ಓದಿರಿ. ಓದುವವರು ಚೆನ್ನಾಗಿ ಊಟಮಾಡಬೇಕು” ಎಂದು ಅವನ ಉಪದೇಶ.

ತಿಂಗಳಿಗೊಂದು ಸಲ ಅವನು ದೊಡ್ಡ ಊಟವನ್ನು ಕೊಡುತ್ತಿದ್ದ. ಅಂದು ಬೇರೆ ಬೇರೆ ಸಿಹಿ ತಿನಿಸು ತಯಾರಿಸುತ್ತಿದ್ದರು. ಸಿಹಿ ಎಂದರೆ, ಜಾಮೂನ್, ಬೂಂದಿ, ಜಿಲೇಬಿ, ಹೋಳಿಗೆ, ಖೀರು ಇತ್ಯಾದಿ. ಪ್ರತಿ ತಿಂಗಳು ಒಂದನ್ನು ಮಾಡುವದು. ಹುಡುಗರಿಗೆ ಎಷ್ಟುಬೇಕೋ ಅಷ್ಟು ತಿನಿಸುವದು. ಕೆಲವು ಹುಡುಗರಂತೂ ೬೦–೯೦ ಜಾಮೂನ, ೫೦–೬೦ ಜಿಲೇಬಿ, ೧೦–೧೨ ಹೋಳಿಗೆ ತಿನ್ನುತ್ತಿದ್ದರು. ಜಾಸ್ತಿ ತಿಂದವರಿಗೆ ಬಹುಮಾನ ಬೇರೆ. ಅವನ ಹತ್ತಿರ ಊಟಮಾಡುವವರಿಗೆ ಮಾತ್ರ ಎಂದೇನೂ ಇಲ್ಲ. ಒಂದು ವಾರದಿಂದಲೇ ಪುಕಾರು ಚಾಲೂ ಆಗುತ್ತಿತ್ತು. “ಸಾಹೇಬ್ರ, ಬರುವ ಇಂಥಾದಿನ ಮೇಜರ್ ಫೀಸ್ಟ್ ಇಟ್ಟಿರುವೆ. ನಿಮ್ಮ ಸ್ನೇಹಿತರನ್ನು ಆಮಂತ್ರಿಸಿರಿ. ಇಂಥಿಂಥ ಸಿಹಿಯನ್ನು ತಯಾರಿಸುತ್ತೇನೆ. ಯಾವದಕ್ಕೂ ಮಿತಿ ಇಲ್ಲ. ಜಾಸ್ತಿ ತಿಂದವರಿಗೆ ಹಣವಿಲ್ಲ” ಎಂದು ಹೇಳುತ್ತಿದ್ದ. ನಾವೂ ಸಹ ಕಾಲೇಜಿನಲ್ಲಿಯ ನಮ್ಮ ಗೆಳೆಯರನ್ನು ಜೋರುಮಾಡಿ ಆಮಂತ್ರಿಸಿ ಅವರ ಹೊಟ್ಟೆ ಹರಿಯುವಂತೆ ಉಣ್ಣಿಸಿ ಕಳುಹಿಸುತ್ತಿದ್ದೆವು. ಊಟವಾದ ಮೇಲೆ ಅವನು ನಮ್ಮನ್ನು ನಿಲ್ಲಿಸಿ “ಸಾಹೇಬ್ರ ಊಟ ಬರಾಬರಿ ಆತನ್ರಿ” ಎಂದು ಕೇಳುತ್ತಿದ್ದ. ನಾವು ಖುಷಿಯಿಂದ ಹೇಳಿದರೆ ಅವನ ಹೊಟ್ಟೆ ತುಂಬುತ್ತಿತ್ತು. ಇಲ್ಲವಾದರೆ ತನ್ನ ಅಡುಗೆಯವರನ್ನು ಹಿಗ್ಗಾಮುಗ್ಗಾ ಬೈಯ್ಯುತ್ತಿದ್ದ. “ಇವರೆಲ್ಲ ದೊಡ್ಡ ದೊಡ್ಡ ಸಾಹೇಬ್ರ ಆಗುವವರು. ಬೆಳೆಯುತ್ತಿರುವ ತರುಣರು. ಅವರು ನಮ್ಮನ್ನು ಶಪಿಸಬಾರದು” ಎಂದು ಎಚ್ಚರಿಸುತ್ತಿದ್ದ.

ಒಂದು ಸಲ ನನ್ನ ಗೆಳೆಯನ ಆರೋಗ್ಯ ಅಷ್ಟು ಚೆನ್ನಾಗಿ ಇರಲಿಲ್ಲ. ಅವನು ನಮ್ಮೊಡನೆ ಊಟಕ್ಕೆ ಬಂದು ಕುಳಿತ. ತಾಟು ಹಚ್ಚಿದರು. ಊಟ ಪ್ರಾರಂಭವಾಯಿತು. ಒಂದೆರಡು ತುತ್ತು ತಿಂದು ಊಟ ಸೇರದು ಎಂದು ತನ್ನ ರೂಮಿಗೆ ಹೋಗಿ ಮಲಗಿದ. ನಾವೆಲ್ಲ ಎಂದಿನಂತೆ ಊಟ ಮಾಡುತ್ತಿದ್ದೆವು. ಚಪಾತಿ ನೀಡುವ ವ್ಯಕ್ತಿ ಗಂಗಪ್ಪನಿಗೆ ಹೋಗಿ ಸುದ್ದಿ ಮುಟ್ಟಿಸಿದ. ಅಡುಗೆಯ ಮನೆಯಲ್ಲಿ ಇದ್ದ ಗಂಗಪ್ಪ ಲಗುಬಗೆಯಿಂದ ನಮ್ಮ ಟೇಬಲ್ಲಿಗೆ ಬಂದ. ನಮ್ಮನ್ನು ವಿಚಾರಿಸಿದ, ಅಡುಗೆ ಸರಿಯಾಗಿದೆಯೋ ಇಲ್ಲವೋ ಎಂದು ಕೇಳಿದ. ಇನ್ನೂ ನಾಲ್ಕಾರು ಜನರನ್ನೂ ಕೇಳಿದ ನಾವೆಲ್ಲ ರುಚಿಯಾಗಿದೆ ಎಂದು ಹೇಳಿದೆವು. ಆದರೂ ಅವನು ಮುಖ ಸಣ್ಣದುಮಾಡಿದ. ಅಡುಗೆ ಮನೆಗೆ ಹೋದ. ನಾವು ಅವನಿಗೆ ಹೇಳಿದೆವು. ಆ ವಿದ್ಯಾರ್ಥಿಯ ಆರೋಗ್ಯ ಅಷ್ಟು ಸರಿ ಇರಲಿಲ್ಲ. ಅದಕ್ಕೆ ಅವನು

ಊಟ ಮಾಡಲಿಲ್ಲ ಎಂದೆವು. ಅದು ಅಷ್ಟಕ್ಕೆ ಮುಗಿಯಿತೆಂದು ಹರಟೆ ಹೊಡೆಯುತ್ತ ರೂಮಿನ ಕಡೆಗೆ ನಡೆದೆವು ರೂಮಿಗೆ ತಲುಪಿ ಉಣ್ಣದೇ ಬಂದ ಸ್ನೇಹಿತನನ್ನು ಕಂಡು ಹೋಗೋಣವೆಂದು ಅವನ ರೂಮಿಗೆ ಹೋಗಿ ಮಾತನಾಡುತ್ತ ಕುಳಿತೆವು. ಅಷ್ಟರಲ್ಲಿ ಗಂಗಪ್ಪನ ಸವಾರಿ ಅಲ್ಲಿಗೇ ಬಂದಿತು. ಒಂದು ಕೈಯಲ್ಲಿ ಹಾಳೆಯಲ್ಲಿ ಸುತ್ತಿದ ಪುಡಿಕೆ. ಇನ್ನೊಂದು ಕೈಯಲ್ಲಿ ಚಿಕ್ಕದಾದ ಗಿಂಡಿ. ಇನ್ನೊಬ್ಬನ ಕೈಯಲ್ಲಿ ಒಂದು ಚರಿಗೆತುಂಬ ಹಾಲು ಹಾಗೂ ಒಂದು ತಾಟು. ಇದೇನಿದು? ಎಂದು ನಮಗೆಲ್ಲ ಆಶ್ಚರ್ಯ. "ಏನು ಗಂಗಪ್ಪ?" ಎಂದೆವು. "ಸಾಹೇಬ್ರು ಬಾಯಿ ಕೆಟ್ಟು ಉಣ್ಣದೇ ಬಂದಿದ್ದಾರೆ. ಅವರು ಖಾಲಿ ಹೊಟ್ಟೆಯಿಂದ ಮಲಗಿದರೆ ದೇವರು ನನ್ನನ್ನು ಕ್ಷಮಿಸಲಾರನು. ಅದಕ್ಕೆಂದೇ ಹಾಲಿನಲ್ಲಿ ಮಾಡಿದ ಬಿಸಿ ಚಪಾತಿ, ಒಳ್ಳೆಯ ಬೆಲ್ಲ, ಈಗ ಕಾಸಿದ ತುಪ್ಪ ಕಾಸಿದ ಹಾಲು ತಂದಿರುವೆನು. ಅವರಿಗೆ ಉಣಿಸಿ ಹೋಗಲು ಬಂದೆನು" ಎಂದ. ನೇರವಾಗಿ ರೂಮಿಗೆ ಬಂದು ವಿದ್ಯಾರ್ಥಿಯನ್ನು ಕರೆದುಕೊಂಡು ಹೋಗಿ ಮುಖ ಕೈಕಾಲು ತೊಳೆಸಿ ಅವನ ಮುಂದೆ ತಾಟು ಇಟ್ಟು ಒಂದು ಚಪಾತಿ ನೀಡಿ. ಅದರಲ್ಲಿ ಬೆಲ್ಲದ ಮುದ್ದೆ ಇಟ್ಟು, ಅದಕ್ಕೆ ಬಿಸಿ ತುಪ್ಪದ ಅಭಿಷೇಕಮಾಡಿಸಿದ. "ಸಾಹೇಬ್ರು ಒಂದು ಚಪಾತಿ ತಿನ್ನಿರಿ. ಆ ಮ್ಯಾಲ ಬಿಸಿಹಾಲ ಕುಡಿರಿ" ಎಂದ ಚಪಾತಿ ತಿನ್ನಿಸಿ, ಹಾಲು ಕುಡಿಸಿ, ತನ್ನ ಹೊಟ್ಟೆ ತುಂಬಿದವನಂತೆ ಸಂತೋಷದಿಂದ ಹೋದ. ನಾವು ಮೂಕರಂತೆ ನಿಂತಿದ್ದೆವು. ತನ್ನ ಖಾನಾವಳಿಯಲ್ಲಿ ಉಣ್ಣುವ ಒಬ್ಬ ಹುಡುಗ ಒಂದು ಸಲ ಉಣ್ಣುವದನ್ನು ಬಿಟ್ಟರೆ ತನಗೆ ಪಾಪ ತಗುಲೀತು ಎನ್ನುವ ಗಂಗಪ್ಪನೆಲ್ಲಿ. ಇಂದಿನ ಹೊಟೇಲಿನವರು ಸಿಕ್ಕಾಪಟ್ಟೆ ಹಣ ತೆಗೆದುಕೊಂಡು, ಸೋಡಾ ಹಾಕಿದ ಅನ್ನ, ಕಲಬೆರಿಕೆಮಾಡಿದ ಗೋದಿಹಿಟ್ಟಿನ ಚಪಾತಿ, ಹಿಟ್ಟು ಕೂಡಿಸಿದ ಮೊಸರು, ಹೊಳೆಯ ನೀರಿನಂತಿರುವ ಸಾರು ಮುಂತಾದವನ್ನು ನೆನಪಿಸಿಕೊಂಡರೆ ಗಂಗಪ್ಪನಂಥವರು ನಿಜವಾಗಿ ಬದುಕಿದ್ದರೋ ಅನಿಸುತ್ತದೆ.

ಗಂಗಪ್ಪನನ್ನು ನಾನು ವೈದ್ಯನಾದ ಮೇಲೆ ಒಮ್ಮೆ ಕಂಡಿದ್ದೆ. ಆಗಲೂ ಅವನು ನನ್ನನ್ನು ಅದೇ ರೀತಿ ಕಂಡ ತನ್ನ ಖಾನಾವಳಿಗೆ ಕರೆದುಕೊಂಡು ಹೋಗಿ ಊಟ ಮಾಡಿಸಿ ತನ್ನ ಹೊಟ್ಟೆ ತುಂಬಿದಂತೆ ಸಂತೋಷಪಟ್ಟ.

ಇಂದು ಗಂಗಪ್ಪ ಬದುಕಿಲ್ಲ. ಅವನು ಬದುಕಿದ್ದರೂ ಇಂದಿನ ಊಟದ ಮನೆಗಳನ್ನು ಕಂಡು ಸಾಯುತ್ತಿದ್ದ ಎಂದೇ ನನ್ನ ಅನಿಸಿಕೆ.

ಪೋಲಿಯೊ ಪೀಡಿತರಿಗೆ ಆಶಾಜ್ಯೋತಿ : ಪುನರ್ವಸತಿ ತರಬೇತಿ

ಡಾ|| ಕರವೀರಪ್ರಭು ಕ್ಯಾಲಕೊಂಡ
ಆರೋಗ್ಯಾಧಿಕಾರಿಗಳು
ಸಮುದಾಯ ಆರೋಗ್ಯ ಕೇಂದ್ರ
ಬಾದಾಮಿ-೫೮೭ ೨೦೧

ಮಕ್ಕಳ ಪಾಲಿಗೆ ಭೀಕರ ಶತ್ರುವಾಗಿರುವ ಪೋಲಿಯೊ 'ಎಂಟರೊವೈರಸ್' ನಿಂದ ಬರುವ ತೀವ್ರ ಸ್ವರೂಪದ ಸಾಂಕ್ರಾಮಿಕ ರೋಗ. ಇದು ವಯಸ್ಕರನ್ನೂ ಪೀಡಿಸದೆ ಇರುವುದಿಲ್ಲ. ಪೋಲಿಯೊ ಪೀಡಿತನಾದ ವ್ಯಕ್ತಿ ಜೀವನ ಪರ್ಯಂತ ಅಂಗವಿಕಲನಾಗಿರಬೇಕಾಗುತ್ತದೆ. ರೋಗ ಬಂದಮೇಲೆ ಔಷಧೋಪಚಾರದಿಂದಾಗುವ ಪ್ರಯೋಜನ ಹೇಳಿಕೊಳ್ಳುವಷ್ಟೇನೂ ಇಲ್ಲ. ಆದರೆ ಈ ರೋಗವನ್ನು ನಿವಾರಿಸಲು ವಿಜ್ಞಾನಿಗಳು ಹಲವು ವರ್ಷಗಳ ಪರಿಶ್ರಮದಿಂದ ಲಸಿಕೆಯನ್ನು ಶೋಧಿಸಿದ್ದಾರೆ. ಎಳೆಯರಿರುವಾಗಲೇ ಪೋಲಿಯೊ ಲಸಿಕೆ ನೀಡಿ ಮಕ್ಕಳ ದೇಹದಲ್ಲಿ ರೋಗ ನಿರೋಧಕ ಶಕ್ತಿಯನ್ನು ಉಂಟುಮಾಡುವುದೇ ಈ ರೋಗಕ್ಕೆ ನೀಡಬಹುದಾದ ಪರಿಣಾಮಕಾರಿ ಚಿಕಿತ್ಸೆ. ಇಂಥ ಕ್ರಮದಿಂದ ಹಲವು ದೇಶಗಳಲ್ಲಿ ಪೋಲಿಯೊ ನಿರ್ಮೂಲವಾಗಿದೆ.

ಜಾಗತಿಕ ಆರೋಗ್ಯ ಸಂಸ್ಥೆ ಈ ಶತಮಾನದ ಕೊನೆಗೆ ಪ್ರಪಂಚದಿಂದ ಪೋಲಿಯೊ ಪಲಾಯನಕ್ಕೆ ಪಣ ತೊಟ್ಟಿದೆ. ಇದಕ್ಕೆ ಭಾರತವೂ ಸೇರಿದಂತೆ ಪ್ರಪಂಚದ ಎಲ್ಲ ರಾಷ್ಟ್ರಗಳೂ ಒಪ್ಪಿಕೊಂಡು, ಜಾಗತಿಕ ಆರೋಗ್ಯ ಸಂಸ್ಥೆಯ ನೆರವಿನಿಂದ ನಿರ್ಮೂಲನಕ್ಕೆ ಬೇಕಾದ ನೀಲಿ ನಕ್ಷೆ ಗಳನ್ನು ತಯಾರಿಸಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಇದರಿಂದ ಭವಿಷ್ಯದಲ್ಲಿ ಪೋಲಿಯೊ ರೋಗ ಸಿಗಲಿಕ್ಕಿಲ್ಲ; ನಿಜ. ಆದರೆ, ಈಗಿರುವ ಪೋಲಿಯೊ ಪೀಡಿತರಿಗೆ ಏನೂ ಮಾಡಬೇಕು ಎಂಬ ಪ್ರಶ್ನೆ ಬುದ್ಧಿ ಜೀವಿಗಳನ್ನು, ವಿಜ್ಞಾನಿಗಳನ್ನು, ವೈದ್ಯ ರನ್ನು ಸಮಾಜ ಸೇವಕರನ್ನು, ರಾಷ್ಟ್ರ ನಾಯಕರನ್ನು ಕಾಡಹತ್ತಿತು. ನಿದ್ದೆಗೆ ಭಂಗ ತಂದಿತ್ತು. ವಿಚಾರ ಗೋಷ್ಠಿಗಳು, ಚರ್ಚೆಗಳು ಏರ್ಪಟ್ಟವು ಹಲವಾರು ಕೇಂದ್ರ ಗಳಲ್ಲಿ ಪ್ರಾಯೋಗಿಕ ಪುನರ್ವಸತಿ ತರಬೇತಿ ಗಳು ಪ್ರಾರಂಭವಾದವು. ಪರಿಣಾಮಗಳು ಉತ್ತೇಜನಕಾರಿಯಾಗಿದ್ದವು. ಪೋಲಿಯೊ ಪೀಡಿತರ ಬದುಕಿನಲ್ಲಿ ಪುನರ್ವಸತಿ ತರಬೇತಿ ಆಶಾಜ್ಯೋತಿಯಾಗಿದೆ. ಅವರ ಬಾಳಲ್ಲಿ ಬೆಳಕನ್ನು ಚೆಲ್ಲಿವೆ. ಯಾರಿಗೂ ಭಾರವಾಗದ ಬಾಳನ್ನು ಸಾಗಿಸಲು ಸಹಾಯಕವಾಗಿದೆ.

ಪೋಲಿಯೊ ರೋಗಿಯನ್ನು ವಿಕಲಾಂಗಿ ಎಂದು ಪರಿಗಣಿಸದೇ, ಮೂಲಭೂತವಾಗಿ ಮಾನವಜೀವಿ ಎಂಬುದನ್ನು ಮರೆಯ ಬಾರದು. ಚಿಕಿತ್ಸೆ ಪ್ರಾರಂಭದಲ್ಲಿಯೇ ಅವನನ್ನು ಉತ್ಪಾದಕ ಪ್ರಜೆಯಾಗಿ ರೂಪಿಸಲು ರೂಪರೇಷೆಗಳನ್ನು ತಯಾರಿಸ ಬೇಕು. ಅಪರೂಪಕ್ಕೆ ತೀವ್ರ ಸ್ವರೂಪದ ಅಂಗವಿಕಲತೆ ಅಪ್ಪಿಕೊಳ್ಳಬಹುದು. ಆಗ ದೈಹಿಕ ಸ್ವಾಸ್ಥ್ಯದ ಜೊತೆಗೆ ಮಾನಸಿಕ ಸ್ವಾಸ್ಥ್ಯವು ಅಸ್ತವ್ಯಸ್ಥಗೊಳ್ಳಬಹುದು. ಅಂಥ ಪ್ರಸಂಗಗಳಲ್ಲಿ ಪೋಲಿಯೊ ರೋಗಿ ಗಳಿಗೆ ಆಸ್ಪತ್ರೆಯ ಆವರಣದಲ್ಲಿಯೇ ಉಸಿರಾಡುವಂತೆ ಇಲ್ಲವೇ ಪುನರ್ವಸತಿ ಕೇಂದ್ರಗಳಲ್ಲಿ ಕಾಲಕಳೆಯಲು ಅವಕಾಶ ಕಲ್ಪಿಸಬೇಕು. ಇಂಥ ರೋಗಿಗಳೂ ಸಮಾಜಕ್ಕೆ ಹೊರೆಯಾಗಬಾರದು. ಆದರೆ ಅವರು ಆಶಾಜೀವಿಗಳಾಗಲು ಬಂಧು ಬಗಿನಿಯರು ಸಹಾಯ ಸಹಕಾರ ನೀಡ ಬೇಕು.

ಪೋಲಿಯೊ ರೋಗಿ ಎಷ್ಟೇ ತೀವ್ರತರದ ತೊಡಕು ತೊಂದರೆಗಳಿಗೆ ತುತ್ತಾಗಿದ್ದರೂ, ಅವರಿಗೆ ತರಬೇತಿ ನೀಡಿ ಪರಾವಲಂಬಿ ಗಳಾಗುವುದನ್ನು ತಪ್ಪಿಸಬೇಕು. ನಿತ್ಯದ ಆಗುಹೋಗುಗಳನ್ನು ನಿಭಾಯಿಸಿಕೊಂಡು ಹೋಗುವಂತೆ ಮಾಡಬೇಕು. ಅವರಿಗೆ ತೊಳೆಯಲು, ತಿನ್ನಲು ಕಲಿಸುವುದರ ಜೊತೆಗೆ ನೈಸರ್ಗಿಕ ಕರೆಗಳನ್ನು ಕಾಲ ಕಾಲಕ್ಕೆ ಪೂರೈಸುವಂತೆ ತಿಳುವಳಿಕೆ ನೀಡ ಬೇಕು. ಅವರಿಗೆ ಸಂಚಾರಕ್ಕೆ ವಿಶೇಷ ವಾಹನಗಳನ್ನು ತಯಾರಿಸಬೇಕು. ಅಶಕ್ತ ಟೊಂಕ ಮತ್ತು ಕಾಲುಗಳಿಂದ ಹಾಸಿಗೆ ಹಿಡಿದ ರೋಗಿಗಳಿಗೆ, ಎಬ್ಬಿಸುವ ಆಸರೆಯ ಪರಿಕರಗಳು ಇಂದು ಲಭ್ಯ ಇವೆ. ಅವುಗಳ ಬಳಕೆಯಿಂದ ಅವರ ಬದುಕು ಸಹ್ಯವಾಗು ವಂತೆ ಮಾಡಬೇಕು. ಕೈ ಲಕ್ವಪೀಡಿತ ವಾದಲ್ಲಿ, ಊಟ ಮಾಡಲು ಸಹಾಯವಾಗು ವಂಥ ಬದಲಾವಣೆ ಮಾಡಿದ ವಿಶಿಷ್ಟ ಚಮಚೆ, ಫೋರ್ಕ್ ಬಳಸುವುದನ್ನು ಕಲಿಸ ಬೇಕು.

ಬೇರೆ ಬೇರೆ ರಾಷ್ಟ್ರೀಯತೆ, ಧರ್ಮ, ಹಣಕಾಸಿನ ಹಿನ್ನೆಲೆ ಹೊಂದಿದವರು ಅಷ್ಟೇ ವಿಭಿನ್ನ ಪದ್ಧತಿಗಳನ್ನು ಅನುಸರಿಸುತ್ತಿರು ತ್ತಾರೆ. ಅವರಿಗೆಲ್ಲಾ ಒಂದೇ ರೀತಿಯ ತರಬೇತಿ ನೀಡುವುದು ಅರ್ಥಹೀನ. ಅವರು ಬದುಕುತ್ತಿರುವ ಪರಿಸರಕ್ಕೆ ಹೊಂದಿಕೊಳ್ಳು ವಂಥ ತರಬೇತಿ ಅತ್ಯಂತ ಮೌಲಿಕವಾ ದದ್ದು. ಉದಾಹರಣೆಗೆ ವಿದ್ಯುತ್ ಅಥವಾ ಅನಿಲ ಬಳಸಿ ಒಲೆಹೊತ್ತಿಸಲು ಕಲಿತ ಪೋಲಿಯೊ ರೋಗಿ ವಾಸ್ತವದಲ್ಲಿ ಇದ್ದಲು, ಕಟ್ಟಿಗೆ, ಕುಳ್ಳು ಬಳಸಿ ಒಲೆಯಲ್ಲಿ ಅಡಿಗೆ ಮಾಡುವುದಾದರೆ, ನೀಡಿದ ತರಬೇತಿ ನಿಷ್ಪ್ರಯೋಜನವಾಗುವುದು. ಈ ನಿಟ್ಟಿನಲ್ಲಿ ಸಮಾಜ ಕಾರ್ಯಕರ್ತರು ಕೈಪಿಡಿಗಳಂತೆ ಕೆಲಸ ಮಾಡಿ ಸಹಕರಿಸಬೇಕು. ಆಗ ಇವುಗಳನ್ನು ತಪ್ಪಿಸಬಹುದು.

ಪೋಲಿಯೊ ರೋಗಿ ಸಾಧ್ಯವಿದ್ದಷ್ಟು ಸ್ವತಂತ್ರವಾಗಿಯೂ ಬದುಕಬೇಕು. ಇದಕ್ಕೆ ರೋಗಿಗಳೂ ಮಾನಸಿಕವಾಗಿ ಸಿದ್ಧಗೊಂಡಿರ ಬೇಕು. ಸಮಾಜವೂ ಸಹಕರಿಸಬೇಕು. ಸಂಚಾರಕ್ಕೆ ಚಕ್ರದ ಚೇರು (ವೀಲ್ ಚೇರ್) ಗಳನ್ನು ಬಳಸಬೇಕು. ಕನಿಷ್ಠ ತೂಕದ ಮಡಚುವ ಕುರ್ಚಿ, ಟೇಬಲ್ ಅವರ ಉಪಯೋಗಕ್ಕೆ ನಿರ್ಮಿಸಬೇಕು. ಶ್ರೀಮಂತ ರೋಗಿಗಳಿಗೆ ವಿದ್ಯುತ್ ಚಾಲಿತ

ಅಥವಾ ಇಂಧನಚಾಲಿತ ತ್ರಿಚಕ್ರ ವಾಹನಗಳನ್ನು ನೀಡಬಹುದು. ರೋಗಿಗೆ ಹಣಕಾಸಿನ ಹಿನ್ನೆಲೆ ನೋಡಿಕೊಂಡು ಅವರ ಸಂಚಾರಕ್ಕೆ ಸಾಧನ ಸಲಕರಣೆಗಳನ್ನು ನೀಡಬೇಕು. ಇವು ಅವರ ಕೈಗೆಟುಕುವಂತಿರಬೇಕು. ಇಲ್ಲದಿದ್ದಲ್ಲಿ ಹೊಟ್ಟೆಗೆ ಹಿಟ್ಟಿಲ್ಲದಾಗ ಜುಟ್ಟಿಗೆ ಮಲ್ಲಿಗೆ ಮುಡಿಯಲು ಹೇಳಿದಂತಾಗುವುದು.

ಹಿಂದುಳಿದ ರಾಷ್ಟ್ರಗಳಲ್ಲಿ ಅವಿಭಕ್ತ ಕುಟುಂಬಗಳು ಇನ್ನೂ ಅಸ್ತಿತ್ವದಲ್ಲಿವೆ. ಹಣಕಾಸಿನ ಮುಗ್ಗಟ್ಟು ಹೆಡೆಮುರಿಗೆ ಹಾಕಿರುತ್ತದೆ. ಶಿಕ್ಷಣ ಸೌಲಭ್ಯಗಳು ಸಾಕಷ್ಟಿರುವುದಿಲ್ಲ. ಅಲ್ಲಿ ಸದೃಢ ಮಕ್ಕಳಿಗಷ್ಟೇ ಶಾಲೆಗೆ ಕಳಿಸುತ್ತಾರೆ. ಪೋಲಿಯಾಕ್ಕೆ ತುತ್ತಾದ ಅಂಗವಿಕಲರು ಇದರಿಂದ ವಂಚಿತರಾಗುತ್ತಾರೆ. ದೈಹಿಕ ದೌರ್ಬಲ್ಯದವರಲ್ಲಿ, ಬುದ್ಧಿ ಬೆಳವಣಿಗೆಯೂ ಕುಂಠಿತವಾಗಿರುತ್ತದೆ ಎಂಬ ಗಾಢ ನಂಬಿಕೆ ಜನರಲ್ಲಿ ಬೀಡು ಬಿಟ್ಟಿರುವುದರಿಂದ ಪೋಲಿಯೊ ರೋಗಿಗಳು ಶಿಕ್ಷಣದಿಂದ ವಂಚಿತರಾಗುವಂತೆ ಮಾಡುವಲ್ಲಿ ಸಹಕರಿಸುತ್ತದೆ. ಅಂಗವಿಕಲರು ಆಟದ ಮೈದಾನದಲ್ಲಿ ಕಾಲ ಕಳೆಯುವುದಿಲ್ಲವಾದ್ದರಿಂದ, ಓದುವುದರಲ್ಲಿ ಹೆಚ್ಚು ಒಲವು ಹೊಂದಿರುವರೆಂಬ ವಿಷಯ ಇತ್ತೀಚಿನ ಅಧ್ಯಯನಗಳಿಂದ ಬೆಳಕಿಗೆ ಬಂದಿದೆ. ವಿಕಲಾಂಗಿಗಳು ಕಚೇರಿಗಳಲ್ಲಿ ಮಾಡುವಷ್ಟು ಕೆಲಸವನ್ನು ಸಾಮಾನ್ಯರು ಮಾಡುವುದಿಲ್ಲ ಎಂಬುದು ಸತ್ಯ. ಆದ್ದರಿಂದ ಪಾಲಕರು ಪೋಲಿಯೊ ರೋಗಿಗಳು ಮಾನಸಿಕವಾಗಿ ಸದೃಢರಾಗಿರುತ್ತಾರೆ ಎಂಬುದನ್ನು ಅರಿತು, ಅವರನ್ನು ಶಾಲೆಗೆ ತಪ್ಪದೇ ಕಳಿಸಬೇಕು. ತಾರತಮ್ಯ ತೋರುವುದನ್ನು ತೊರೆಯಬೇಕು.

ದೇಶದ ಸ್ಥಿತಿಗತಿಗಳು ಚೆನ್ನಾಗಿದ್ದಲ್ಲಿ, ಅವರಿಗಾಗಿಯೇ ಪ್ರತ್ಯೇಕ ಶಾಲೆ, ಆಸ್ಪತ್ರೆ, ಪ್ರಾರಂಭಿಸುವತ್ತ ದೇಶದ ಸೂತ್ರಧಾರಿಗಳು ಆಸಕ್ತಿ ವಹಿಸಬೇಕು. ಪುನರ್ವಸತಿ ಕೇಂದ್ರಗಳನ್ನು ದೊಡ್ಡ ದೊಡ್ಡ ಪಟ್ಟಣ ಪ್ರದೇಶಗಳಲ್ಲಿ ತೆರೆಯುತ್ತಿರುವುದು ಒಂದು ದುರಂತ. ಸೌಲಭ್ಯಗಳಿಂದ ವಂಚಿತವಾಗಿರುವ ಹಳ್ಳಿಗಳಲ್ಲಿಯ ಪೋಲಿಯೊ ಪೀಡಿತ ಅಂಗವಿಕಲರಿಗೆ ಇದು ಪ್ರಯೋಜನವಾಗುವುದಿಲ್ಲ. ಆದ್ದರಿಂದ ಮೊದಲು ಈ ಜನರ ಜನಗಣತಿಯಾಗಬೇಕು. ಅವರಿಗೆ ಅನುಕೂಲವಾಗುವಂತೆ ಸರಕಾರ ಹಳ್ಳಿಗಳಲ್ಲಿಯೇ ಈ ಪುನರ್ವಸತಿ ಕೇಂದ್ರಗಳನ್ನು ತೆರೆಯಬೇಕು. ಇದರಿಂದ ಭಿಕ್ಷಾವೃತ್ತಿಗಿಳಿದ ಅನೇಕ ಅಂಗವಿಕಲರಿಗೆ ಅನುಕೂಲವಾಗುತ್ತದೆ.

ಸರಕಾರ ಅವರಿಗಾಗಿ ಮೀಸಲಾತಿಗಳನ್ನು ನೀಡುತ್ತಿರುವುದು ಅವರಿಗೆ ಉದ್ಯೋಗಾವಕಾಶಗಳನ್ನು ಹೆಚ್ಚಿಸಿದೆ. ಕಾಲು ಊನವಾದವರು ಕಚೇರಿಗಳಲ್ಲಿ ಟೈಪು ಮಾಡುವಲ್ಲಿ ಫೈಲುಗಳನ್ನು ನಿರ್ವಹಿಸುವುದರಲ್ಲಿ ಹೆಚ್ಚು ಸಮರ್ಥರಾಗಿರುವರು. ಒಕ್ಕಲುತನ ಮಾಡುವಲ್ಲೂ ಅವರಿಗೆ ತರಬೇತಿ ನೀಡಬಹುದು. ತರಕಾರಿ, ಹಣ್ಣು, ಹಂಪಲು ಬೆಳೆಸುವ ತರಬೇತಿಯಿಂದ ಅವರು ಅವನ್ನು ಮಾಡಿಕೊಂಡು ಸ್ವಂತ ಕಾಲಮೇಲೆ ನಿಲ್ಲಲು ಸಮರ್ಥರಾಗುವುದರಲ್ಲದೇ, ಕುಟುಂಬಕ್ಕೂ ಪ್ರಯೋಜನಕಾರಿಯಾಗುವರು. ಒಟ್ಟಿನಲ್ಲಿ ಅಂಗವಿಕಲರ ಅಭಿರುಚಿಗಳಿಗೆ ತಕ್ಕಂತೆ ತರಬೇತಿ ನೀಡಿ, ಅವರಲ್ಲಿ ಸುಪ್ತವಾಗಿರುವ ಆಸಕ್ತಿಗಳು ಅರಳುವಂತೆ ಅವಕಾಶ ನೀಡಬೇಕು. ಇದು ಸಮಾಜದ ಆದ್ಯ ಕರ್ತವ್ಯ. ಸ್ವತಂತ್ರ್ಯ ಜೀವನ ನಡೆಸುವ ಮನೋ

...ಾವವನ್ನು ಪೋಲಿಯೊ ರೋಗಿಗಳೂ ...ಳೆಸಿಕೊಳ್ಳಬೇಕು.

ದೊಡ್ಡವರಿಗೆ ಲಕ್ವದ ಪೋಲಿಯೊ ...ಂದಾಗ ಅವರ ಸಾಮಾಜಿಕ ಮತ್ತು ...ರ್ಥಿಕ ಪರಿಸ್ಥಿತಿಯ ಮೇಲೆ ಉಗ್ರವಾದ ...ರಿಣಾಮಗಳುಂಟಾಗುತ್ತವೆ. ಆದುದರಿಂದ ...ಂಥ ರೋಗಿಗಳಿಗೆ ಸಾಮಾಜಿಕ ಸೇವಾ ...ಸ್ಥೆಗಳ ನೆರವು ಅತ್ಯಗತ್ಯವಾಗಿರುತ್ತದೆ. ಅನೇಕ ರೋಗಿಗಳಿಗೆ ಔದ್ಯೋಗಿಕ ಮರುವಸತಿ ಅವಶ್ಯಕವಾಗಿರುತ್ತದೆ. ದೇಹದಲ್ಲಿ ನ್ಯೂನತೆ ಕಂಡುಬರುವ ಮುನ್ನ ಅವರು ಮಾಡುತ್ತಿದ್ದ ಕೆಲಸವನ್ನು ಈಗ ಮಾಡಲು ಸಾಧ್ಯವಾಗದೇ ಹೋಗುವುದರಿಂದ, ಅವರ ಕೈಯಲ್ಲಿ ಮಾಡಬಹುದಾದ ಕೆಲಸಗಳನ್ನು ಅವರಿಗೆ ಜೀವ ನಿರ್ವಹಣೆಗಾದರೂ ಕೊಡಬೇಕು. ಉಳಿದವರಿಗೆ ಶಸ್ತ್ರಚಿಕಿತ್ಸೆ ಸಾಧ್ಯವಿಲ್ಲದಾಗ ಅಥವಾ ಪ್ರಯೋಜನವಾಗಲಿಕ್ಕಿಲ್ಲ ಎಂದು ತೀರ್ಮಾನಿಸಿದಾಗ ಅವರು ಮರುವಸತಿಗೆ ಚಲಿಸುವ ಗಡಕುಪಟ್ಟಿ(ಸ್ಪ್ಲಿಂಟ್) ಕೊಕ್ಕೆ ಇತ್ಯಾದಿ ಸಲಕರಣೆಗಳನ್ನು ಒದಗಿಸಿದರೆ ತುಂಬಾ ಸಹಾಯಕವಾಗುತ್ತದೆ, ಕಸೂತಿ ಹಾಕುವ ಕಲೆ, ಕರಕುಶಲ ಕಲೆಯನ್ನು ಸ್ಥಳೀಯವಾಗಿ ಸಿಗುವ ಸಾಧನ ಸಲಕರಣೆಗಳನ್ನು ಬಳಸಿ ಮಾಡುವುದನ್ನು, ಚಪ್ಪಲಿ, ಬೂಟು, ಹ್ಯಾಟು, ಬೆಲ್ಟುಗಳನ್ನು ತಯಾರಿಸುವುದನ್ನು ಕಲಿಕಾ ಕೇಂದ್ರಗಳಲ್ಲಿ ಕಲಿಸಬೇಕು.

ಅಂಗವಿಕಲರಿಗಾಗಿ ಅಂತಾರಾಷ್ಟ್ರೀಯ ಕ್ರೀಡೆಗಳು ನಡೆಯುತ್ತಿರುವುದು ಒಂದು ಆರೋಗ್ಯಕರ ಬೆಳವಣಿಗೆ. ಇದರಿಂದ ಅದರಲ್ಲೂ ಮನೋಬಲ ಬೆಳೆಯುತ್ತದೆ. ಬರ್ಜಿ ಎಸೆತ, ಜಾವೆಲಿನ್ ಥ್ರೋ, ಈಜುವುದು, ವಾಟರ್ ಪೋಲೊ, ನೆಟ್ ಬಾಲ್ ಅವರಿಗಾಗಿ ಇರುವ ಕ್ರೀಡೆಗಳು. ಪುನರ್ವಸತಿಯ ಗುರಿಯೆಂದರೆ ರೋಗಿಗಳು ಅಡ್ಡಾಡುವಂತೆ ಮಾಡುವುದಷ್ಟೇ ಅಲ್ಲ. ಅವರು ತಮ್ಮ ಬಟ್ಟೆ ಬರೆಗಳನ್ನು ತೊಡುವುದರಲ್ಲಿ, ಊಟ ಮಾಡುವುದರಲ್ಲಿ, ನೈಸರ್ಗಿಕ ಕರೆಗಳನ್ನು ನಿಭಾಯಿಸುವಲ್ಲಿ ಸಮರ್ಥರಾಗುವುದರ ಜೊತೆಗೆ ಸಂಪೂರ್ಣ ಸ್ವತಂತ್ರ ಜೀವನ ನಡೆಸಲು ಸಜ್ಜಾಗುವಂತೆ ಮಾಡುವುದೂ ಆಗಿರುತ್ತದೆ. ಪೋಲಿಯೊ ರೋಗಿಗಳಿಗೆ ಸಾಮಾಜಿಕ ಚಟುವಟಿಕೆಗಳಲ್ಲಿ ಆಟ ಪಾಠಗಳಲ್ಲಿ ಭಾಗವಹಿಸುವಂತೆ ಪ್ರೋತ್ಸಾಹಿಸಬೇಕು. ಫೋಟೋಗ್ರಫಿಯಂತಹ ಹವ್ಯಾಸ ಬೆಳೆಸಿಕೊಳ್ಳಲು ಹುರಿದುಂಬಿಸಬೇಕು. ಸಾಮಾಜಿಕ, ಸಾಂಸ್ಕೃತಿಕ ಬದುಕಿಗೆ ಹೊಂದಿಕೊಂಡು ಉತ್ಪಾದಕ ಪ್ರಜೆಯಾಗಿ ಕುಟುಂಬಕ್ಕೆ, ಸಮಾಜಕ್ಕೆ, ದೇಶಕ್ಕೆ ಹೊರೆಯಾಗದಂತೆ ಬದುಕುವಂತೆ ಮಾಡುವುದು ಪುನರ್ವಸತಿಯ ಅಂತಿಮ ಗುರಿಯಾಗಿರುತ್ತದೆ. ಈ ಕಾರ್ಯಕ್ಕೆ ಎಲ್ಲರೂ ಸಹಕರಿಸಬೇಕು. ಆಗ ಯಶಸ್ಸು ನಮ್ಮದಾಗುತ್ತದೆ. ನೆಮ್ಮದಿ ಪೋಲಿಯೊ ಪೀಡಿತರಿಗೆ ಸಿಗುತ್ತದೆ.

ಮಕ್ಕಳಲ್ಲಿ ಭಾಷೆಯ ಆರಂಭ ಮತ್ತು ಬೆಳವಣಿಗೆ

ಎನ್. ಸುಬ್ರಹ್ಮಣ್ಯಂ
೧೬೧೪/೧, ೬ನೇ ಕ್ರಾಸ್, ಕೃಷ್ಣಮೂರ್ತಿಪುರಂ
ಮೈಸೂರು-೫೭೦೦೦೪

(ಬ್ರಾಹ್ಮೀತು ಭಾರತೀ ಗೀರ್ವಾಗ್ವಾಣೀ ಸರಸ್ವತೀ)

ದಾಂಪತ್ಯ ಜೀವನದಲ್ಲಿ ತಮ್ಮ ಪ್ರೀತಿಯ ಮಗು ಮೊದಲು "ಅಮ್ಮ" "ಅಪ್ಪ" ಎಂದು ಕರೆದಾಗ ಆ ತಂದೆತಾಯಿಗಳಿಗೆ ಸ್ವರ್ಗವೇ ಸಿಕ್ಕಿದಂತಾಗುತ್ತದೆ. ಅದರ ತೊದಲು ನುಡಿಗಳನ್ನು ಕೇಳುವುದೇ ಅವರಿಗೆ ಅಮಿತಾನಂದ. ಆದರೆ ಆ ಮಗುವು ಅರ್ಥಗರ್ಭಿತ ಮಾತುಗಳನ್ನಾಡುವ ಸ್ಥಿತಿಗೆ ಬರುವ ಮೊದಲು ಅನೇಕ ಹಂತಗಳನ್ನು ದಾಟಿ ಹೋಗಬೇಕು.

ಹುಟ್ಟಿದ ಮಗುವಿಗೆ ಶಬ್ದೋಚ್ಚಾರಣೆಗೆ ಬೇಕಾದ ಸಕಲ ಅಂಗಗಳನ್ನು ದೇವರು ಕಲ್ಪಿಸಿರುತ್ತಾನೆ. ಈ ಅಂಗಗಳ ಪ್ರಯೋಜನವು ಪ್ರಾರಂಭದಲ್ಲಿ ದೊರಕುವುದಿಲ್ಲ. ಕೆಲವು ಕಾಲಾನಂತರ ಅವು ಅರ್ಥವುಳ್ಳ ಮಾತುಗಳನ್ನಾಡಲು ಸಹಕಾರಿಯಾಗುತ್ತವೆ. ಈ ಸ್ಥಿತಿಗೆ ಬರಬೇಕಾದರೆ ನರಗಳು ಮತ್ತು ಸ್ನಾಯುಗಳು ವಿಶೇಷ ಪಾತ್ರವನ್ನು ವಹಿಸುತ್ತವೆ.

ಮಗುವು ಹುಟ್ಟಿದ ಕ್ಷಣದಲ್ಲಿ ಅಳುವುದು ಸಹಜ. ಅದು ಅಳುವುದರಿಂದಲೇ ಅದು ಬದುಕಿರುವುದು ವೇದ್ಯವಾಗುವುದು. ಮೊದಲಬಾರಿಗೆ ಶ್ವಾಸಕೋಶ ಕೆಲಸವನ್ನು ಪ್ರಾರಂಭಿಸುವುವು. ಹೊರಗಿನ ಗಾಳಿಯು ಶ್ವಾಸಕೋಶಗಳಿಗೆ ನುಗ್ಗಿ ಹೊರಗೆ ಬರುವಾಗ ಗಂಟಲ ಕುಹರದ (ಧ್ವನಿಪೆಟ್ಟಿಗೆ) ಮುಖಾಂತರ ಹಾದು ಬರುವುದು. ಆಗ ಧ್ವನಿ ತಂತುಗಳು ಕಂಪಿಸುವುವು. ಈ ಕಂಪನದಿಂದ ಶಬ್ದೋಚ್ಚಾರಣೆ ಆಗುವುದು. ಇದನ್ನು ನಾವು ಅಳು ಎಂದು ಕರೆಯುತ್ತೇವೆ. ಮಗುವಿನ ದೇಹದಲ್ಲೇ ಉಂಟಾದ ಪ್ರಚೋದನೆಗೆ ಮೊದಲಿನ ಪ್ರತಿಕ್ರಿಯೆಯೇ ಅಳು.

ಮುಖದ ಮೇಲೆ ಹೆಚ್ಚು ಬೆಳಕು ಬಿದ್ದಾಗ ಜೋರಾಗಿ ಶಬ್ದ ಮಾಡಿದಾಗ ಮಗು ಬೆಚ್ಚಿ ಬೀಳುತ್ತದೆ. ಈ ತೊಂದರೆಯನ್ನುಂಟುಮಾಡುವ ಪರಿಸರದಿಂದ ಬೇರೆ ಕಡೆ ಹೋಗಲು ಸಾಧ್ಯವಿಲ್ಲದ್ದರಿಂದ ಮಗುವು ಅಳುತ್ತದೆ. ಆದುದರಿಂದ ಅಳು ಒಂದು ಅನೈಚ್ಛಿಕ ಪ್ರತಿಕ್ರಿಯೆ. ಹಸಿವು, ಬಾಯಾರಿಕೆ, ನೋವು, ಛಳಿ, ತಾಯಿಯು ಹತ್ತಿರ ಇಲ್ಲದಿರುವುದು; ತನ್ನ ಕೈಕಾಲುಗಳನ್ನು ಆಡಿಸಲು ಅಡ್ಡಿಯಾಗಿರುವುದು— ಇಂಥವುಗಳಿಂದ ಆದ ಅಸಮಾಧಾನವನ್ನು ವ್ಯಕ್ತಪಡಿಸಬೇಕಾದರೆ ಅಳುವುದೊಂದೇ ಮಾರ್ಗ.

ತೊದಲುವಿಕೆ ಮಗುವಿನ ಎರಡನೇ ...ತಿಂಗಳ ಅಂತ್ಯದಲ್ಲಿ ಪ್ರಾರಂಭವಾಗುತ್ತದೆ. ಈ ಹಂತದಲ್ಲಿ ವಿಧವಿಧವಾದ ಶಬ್ದೋ ...ಚ್ಚಾರಣೆಯೇ ಮುಖ್ಯ ಗುರಿಯಾಗಿರು ...ವುದು. ಮಗುವು ಉಚ್ಛರಿಸಿದ ಯಾವ ...ಬ್ದಕ್ಕೂ ಅರ್ಥವಿರುವುದಿಲ್ಲ. ಮುಂದಿನ ...ಜೀವನದಲ್ಲಿ ಅರ್ಥವುಳ್ಳ ಮಾತುಗಳ ...ನ್ನಾಡಲು ಈ ಹಂತವೇ ಭದ್ರ ತಳಹದಿ. ...ಸ್ವರಾಕ್ಷರ ಉಚ್ಚಾರಣೆಯೇ ಅತಿಯಾಗಿರು ...ವುದು. ಅದರಲ್ಲೂ 'ಅ' ಕಾರವೇ ಪ್ರಧಾನ. ...ಒಂದು ಬಾರಿ ಉಚ್ಛರಿಸಲು ಪ್ರಾರಂಭಿಸಿದರೆ ...ದೇ ಸ್ವರವನ್ನು ಬಹಳ ಹೊತ್ತು ...ಳೆಯುತ್ತಾ ಧ್ವನಿಮಾಡುತ್ತದೆ. ಈ ...ಧ್ವನಿಯು ಮಗುವಿನ ಕಿವಿಗೆ ಬಹಳ ...ಇಂಪಾಗಿರುತ್ತದೆ ಮತ್ತು ಮನಸ್ಸಿಗೆ ...ಉಲ್ಲಾಸವನ್ನು ಉಂಟುಮಾಡುತ್ತದೆ. ...ದನ್ನು ಮಗುವಿನ ಜೀವನದಲ್ಲಿ ಹರ್ಷ ...ದಾಯಕವಾದ ಘಟ್ಟವೆಂದು ಪರಿಗಣಿಸ ...ಬಹುದು. ಮಗುವಿನ ಗಮನಕ್ಕೆ ...ಬರದೆಯೇ ಅದು ತೊದಲುವುದು. ಈ ...ಅಭ್ಯಾಸ ಸತತವಾಗಿ ಐದನೇ ತಿಂಗಳ ಅಂತ್ಯ ...ವರಿವಿಗೂ ನಡೆಯುವುದು ಆರನೇ ತಿಂಗಳ ...ಪ್ರಾರಂಭದಲ್ಲಿ ಎಲ್ಲಾ ಅಂಗಗಳೂ ಮತ್ತು ...ಬಲ್ಯಗಳೂ ಬೆಳೆದು ಸ್ವಲ್ಪ ಶಕ್ತಿ ...ಯನ್ನೂ ಹೊಂದುತ್ತದೆ. ಈಗ ಇದರ ...ಧ್ವನಿಯು ಸ್ವಲ್ಪ ಮಟ್ಟಿಗೆ ಗಾನ ವೈವಿಧ್ಯತೆ ...ಯಿಂದ ಕೂಡಿರುತ್ತದೆ.

...ಮೂರು ಮತ್ತು ನಾಲ್ಕನೇ ತಿಂಗಳಲ್ಲಿ ...ಗುವು ಖಚಿತವಾದ ಧ್ವನಿಯನ್ನು ...ಚ್ಛರಿಸುತ್ತದೆ. ತನ್ನ ಧ್ವನಿಯನ್ನು ಕೇಳಿ ...ಸುಖದಲ್ಲಿ ಮುಗುಳ್ನಗೆಯಿಂದ ಆನಂದ ...ವ್ಯಕ್ತಪಡಿಸಿ, ಅದೇ ಧ್ವನಿಯನ್ನು ಪದೇ ಪದೇ ಅನುಕರಿಸುತ್ತದೆ. ಈ ಅನುಕರಣ ದಲ್ಲಿಯೇ ಆ ಮಗುವಿಗೆ ಒಂದು ವಿಧವಾದ ಸಂತೋಷವು ಲಭಿಸುವುದು. ಈ ಘಟ್ಟದಲ್ಲಿ ಅನುಕರಣೆಯು ವಿಶೇಷವಾದ ಪಾತ್ರವನ್ನು ವಹಿಸುತ್ತದೆ. ಈ ಅಭ್ಯಾಸವೇ ಆಟವಾಗಿ ಪರಿಣಮಿಸುತ್ತದೆ. ಇದು ಒಂಭತ್ತನೇ ತಿಂಗಳ ಅಂತ್ಯದವರೆಗೂ ಸಾಗುತ್ತದೆ. ಕಿವಿ ಕೇಳಿಸದ ಮಗುವಿಗೆ ಇದೇ ಕೊನೆಯ ಹಂತ. ತಾನೇ ಉಚ್ಛರಿಸಿದ ಧ್ವನಿಯನ್ನು ಕೇಳುವ ಸುಯೋಗ ಆ ಮಗುವಿಗೆ ಇಲ್ಲ. ಇದರಿಂದಾಗಿ ಅನುಕರಣೆಯ ಪ್ರಶ್ನೆಯೇ ಏಳುವುದಿಲ್ಲ. ಅಂತಹ ಮಗುವು ತನ್ನ ಜೀವಮಾನವೆಲ್ಲವನ್ನು ಮೂಕಪ್ರಾಣಿಯಂತೆ ಕಳೆಯಬೇಕು. ಇದೇ ಪ್ರಮುಖವಾಗಿ ತಳಹದಿಯ ಘಟ್ಟ. ಇಲ್ಲೇ ಮಗವಿಗೆ ನ್ಯೂನತೆ ಇರುವುದರಿಂದ ಅದು ಮುಂದಿನ ಘಟ್ಟಕ್ಕೆ ಹೋಗಲು ಸಾಧ್ಯವೇ ಇಲ್ಲ. ಆದ್ದರಿಂದ ಕಿವುಡು ಮಗುವು ಸ್ವಾಭಾವಿಕವಾಗಿ ಮೂಗಿಯಾಗೇ ಇರುತ್ತದೆ.

ಈ ಹಂತದಲ್ಲಿ ಪ, ಬ, ಮ, ಎಂಬ ವ್ಯಂಜನಾಕ್ಷರ ಉಚ್ಚಾರಣೆಯೇ ಪ್ರಧಾನ. ಅದಲ್ಲದೆ ಹೇಳಿದ್ದನ್ನೇ ಹೇಳುತ್ತಿರುವುದು ಒಂದು ವಿಶೇಷ. ಮಗುವು ಹತ್ತನೇ ತಿಂಗಳಲ್ಲಿ ಮತ್ತೊಬ್ಬರ ಧ್ವನಿಯನ್ನು ಅನುಸರಿಸಲು ಪ್ರಾರಂಭಿಸುತ್ತದೆ. ಅವರು ಮಾತನಾಡಿದ ಪದಗಳ ಅರ್ಥವೇನೆಂಬುದು ಮಗುವಿಗೆ ಅರ್ಥವಾಗುವುದಿಲ್ಲ. ಆದರೆ ಆ ಮಾತಿನ ಧ್ವನಿಯು ಇಂಪಾಗಿರುತ್ತದೆ. ಆದುದರಿಂದ ಅದು ಅದೇ ಧ್ವನಿಯನ್ನು ಉಚ್ಛರಿಸಲು ಪ್ರಯತ್ನಿಸುತ್ತದೆ. ಒಂದು ವರ್ಷ ಮುಗಿಯುವುದರೊಳಗೆ ಧ್ವನಿಯ ಅನುಕರಣೆ ವಿಶೇಷವಾಗಿ ಮುಂದುವರೆದು ಮಗು ಸ್ಪಷ್ಟ

ವಾಗಿ ಮಾತನಾಡಲು ಬೇಕಾದ ಎಲ್ಲಾ ಸೌಲಭ್ಯಗಳನ್ನು ಪಡೆಯುತ್ತದೆ.

ಎರಡನೇ ವರ್ಷದ ಪ್ರಾರಂಭದಲ್ಲಿ ಇನ್ನೊಬ್ಬರು ಆಡಿದ ಮಾತುಗಳನ್ನು ಅರ್ಥ ಮಾಡಿಕೊಳ್ಳುತ್ತದೆ. ತನ್ನ ಮನೋಭಿಪ್ರಾಯಗಳನ್ನು ಮಾತುಗಳ ಮೂಲಕವಾಗಿ ತಿಳಿಸಲು ಸಾಧ್ಯವಿರುವುದಿಲ್ಲ. ಆದರೂ ಕೈಸನ್ನೆ ಅಥವಾ ತಲೆ ಅಲ್ಲಾಡಿಸುವುದು ಇಂಥಾ ಸಂಜ್ಞೆಗಳಿಂದ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತದೆ. ವಿಶ್ವಾಸ ಮತ್ತು ಪ್ರೀತಿಗಳಿಂದ ಆಡಿದ ಮಾತುಗಳ ಮತ್ತು ಕೋಪ ಮತ್ತು ಕಾಠಿಣ್ಯವಾಗಿ ಆಡಿದ ಮಾತುಗಳ ಭಾವವನ್ನು ಬಹಳ ಬೇಗ ಗ್ರಹಿಸುತ್ತದೆ. ಮುಖ ಸಿಂಡರಿಸುವುದು ಅಥವಾ ಮುಗುಳ್ನಗುವುದು ಇಂಥ ಪ್ರತಿಕ್ರಿಯೆಯನ್ನು ತೋರಿಸುತ್ತದೆ. ತನಗೆ ಚೆಂಡು ಅಥವಾ ಬೊಂಬೆ ಬೇಕಾದಾಗ ಅದರ ಕಡೆ ಕೈ ತೋರಿಸಿ ಬೆರಳುಗಳನ್ನು ಆಡಿಸುತ್ತದೆ.

ಮಗುವು ತನ್ನ ಧ್ವನಿ ಅನುಕರಣೆಯ ಸಂದರ್ಭದಲ್ಲಿ "ಪ, ಬ, ಮ" ವ್ಯಂಜನಾಕ್ಷರಗಳನ್ನು ಪದೇ ಪದೇ ಉಚ್ಚರಿಸುತ್ತದೆ. ತನ್ನ ಕಿವಿಗೆ ಬಹಳ ಇಂಪಾಗಿರುವುದರಿಂದ ಅದನ್ನೇ ಹೇಳುತ್ತಿರುತ್ತದೆ. ಈ ಉಚ್ಚಾರಣೆಗಳು ಮಾತುಗಳಲ್ಲಿ ಮತ್ತು ಅವುಗಳಿಗೆ ಯಾವ ಅರ್ಥವೂ ಇರುವುದಿಲ್ಲ. ಅದು "ಮ,ಮ,ಮ" ಎಂದು ಉಚ್ಚರಿಸುವಾಗ ಆ ಮಗುವಿನ ತಾಯಿಯು ಆಕಸ್ಮಾತ್ತಾಗಿ ಅದನ್ನು ಕೇಳಿದಾಗ ತನ್ನ ಮಗುವು ತನ್ನನ್ನು ಅಮ್ಮ ಎಂದು ಕರೆಯುತ್ತಿದೆ. ಎಂದು ಭಾವಿಸಿ ಆ ಮಗುವನ್ನು ಅಪ್ಪಿ ಮುದ್ದಿಸುತ್ತಾಳೆ. ಈ ಸಂದರ್ಭದಲ್ಲಿ ತಾಯಿಯೂ ಸಹ ಮಗುವಿನ ಮುಖದ ಹತ್ತಿರ "ಅಮ್ಮ" ಎಂದು ಉಚ್ಚರಿಸುತ್ತಾಳೆ. ಆ ಮಗುವಿನ ಕಿವಿಗೆ ಈ ಶಬ್ದೋಚ್ಚಾರಣೆಯು ವಿಶೇಷವಾದ ಇಂಪನ್ನು ಕೊಡುತ್ತದೆ. ಇನ್ನೊಬ್ಬರ ಧ್ವನಿಯನ್ನು ಅನುಕರಿಸುವ ಘಟ್ಟದಲ್ಲಿರುವುದರಿಂದ ಆ ಮಗುವು ಪುನಃ "ಮ, ಮ" ಎಂದು ಉಚ್ಚರಿಸುತ್ತದೆ. ಆಗ ತಾಯಿಗೆ ಸ್ವರ್ಗ ಸೌಖ್ಯವೇ ಲಭಿಸಿದಂತಾಗುತ್ತದೆ. ಅವಳು "ಅಮ್ಮಾ, ಅಮ್ಮಾ" ಎಂದು ಉಚ್ಚರಿಸಲು ಪ್ರಾರಂಭಿಸುತ್ತಾಳೆ. ಅನೇಕ ಸಂದರ್ಭಗಳಲ್ಲಿ ಮಗುವಿನ "ಮ, ಮ" ಎಂಬ ಉಚ್ಚಾರಣೆಯು ತಾಯಿಯ ಗಮನಕ್ಕೆ ಬಾರದೇ ಹೋಗಬಹುದು. ಆದರೆ ಯಾವಾಗಲಾದರೂ ಈ ಘಟನೆ ಬರಲೇಬೇಕು. ಈ ಸಂದರ್ಭದಲ್ಲಿ ತಾಯಿಯ ಪಾತ್ರ ಬಹಳ ಹಿರಿದು. "ಮ, ಮ" ಎಂಬ ಅರ್ಥವಿಲ್ಲದ ಶಬ್ದೋಚ್ಚಾರಣೆ "ಅಮ್ಮ" ಎಂಬ ಅರ್ಥವನ್ನು ಕಲ್ಪಿಸುವಳು ತಾಯಿ ಈ ಆಕರ್ಷಕ ಪ್ರಸಂಗ ಅನೇಕ ಬಾರಿ ನಡೆದ ಮೇಲೆ ಮಗುವಿಗೆ "ಮಾ" ಎಂದರೆ ಅಮ್ಮಾ ಎಂದು ಅರ್ಥವಾಗುತ್ತದೆ. "ಮಾ" ಎಂದು ಉಚ್ಚರಿಸಿದರೆ, ತಾಯಿಯು ಬಂದು ತನ್ನನ್ನು ಮುದ್ದಾಡುತ್ತಾಳೆಂದು ಮಗುವು ಗ್ರಹಿಸುತ್ತದೆ.

ಈಗ "ಮಾ" ಎಂಬುದು ಕೇವಲ ಶಬ್ದೋಚ್ಚಾರಣೆಯಲ್ಲ. ಅರ್ಥಪೂರ್ಣವಾದ ಶಬ್ದ ಅಂದರೆ ಈಗ ಮಗುವು ಮಾತನಾಡಲು ಪ್ರಾರಂಭಿಸಿದೆ ಎಂದು ಹೇಳಬಹುದು. ಸಾಧಾರಣವಾಗಿ ಪ್ರತಿ ಮಗುವು ಒಂಬತ್ತನೆಯ ತಿಂಗಳಲ್ಲಿ "ಅಮ್ಮಾ" ಎಂಬ ಮಾತಿನ ಅರ್ಥವನ್ನು ಗ್ರಹಿಸಿ, ತನ್ನ ತಾಯಿಯು ಎದುರಿಗೆ ಕಾಣದೆ ಇದ್ದಾಗ "ಅಮ್ಮಾ"

ಎಂದು ಕರೆಯಲು ಉಪಕ್ರಮಿಸುತ್ತದೆ. ಮಗುವಿನ ಸ್ವಯಂಪ್ರೇರಿತ ಉಚ್ಚಾರಣೆ ಮತ್ತು ಆ ತಾಯಿಯ ಅರ್ಥಕಲ್ಪನೆ, ಇವುಗಳ ಸಂಯೋಜನೆಯಿಂದ ಮಗುವು ಅರ್ಥಪೂರಿತ ಮಾತುಗಳನ್ನಾಡಲು ಪ್ರಾರಂಭಿಸುತ್ತದೆ. ಅನೈಚ್ಛಿಕ ಪ್ರತಿಕ್ರಿಯೆಯಾದ "ಮಾ" ಎಂಬುದು "ಅಮ್ಮಾ" ಎಂದು ಐಚ್ಛಿಕ ಪ್ರತಿಕ್ರಿಯೆಯಾಗಿ ಮಾರ್ಪಾಡಾಗುತ್ತದೆ.

ಹೀಗೆ ಕ್ರಮೇಣ ಮಗುವು ಪದಗಳ ಭಾವಅರ್ಥಗಳನ್ನು ಗ್ರಹಿಸಿ: ಮಾತನಾಡಲು ಪ್ರಾರಂಭಿಸುತ್ತದೆ. ಆದರೂ ಪದಗಳನ್ನು ಪೂರ್ಣವಾಗಿ ಉಚ್ಚರಿಸಲು ಸಾಧ್ಯವಾಗುವುದಿಲ್ಲ. ಪದಗಳ ಮೊದಲನೆಯ ಅಥವಾ 'ಮೊದಲೆರಡು ಅಕ್ಷರಗಳನ್ನು ತಪ್ಪು ತಪ್ಪಾಗಿ ಉಚ್ಚರಿಸುತ್ತದೆ. ಈ ರೀತಿಯಲ್ಲಿ ಮಗುವು ಹುಟ್ಟಿದಂದಿನಿಂದ ಎರಡನೇ ವರುಷದ ಪ್ರಾರಂಭದವರೆಗೆ ಮಾತುಗಳನ್ನು ಕಲಿಯಲು ಎಲ್ಲಾ ಹಂತಗಳನ್ನು ದಾಟಬೇಕು.

ಮಗುವು ಹೊಸ ಪದವನ್ನು ಯಾವ ರೀತಿ ಕಲಿಯುತ್ತದೆಂಬುದು ಬಹಳ ಸ್ವಾರಸ್ಯಕರವಾದ ವಿಷಯ. 'ಪ' ಎಂಬ ಒಂದು ಅಕ್ಷರವನ್ನು ತೆಗೆದುಕೊಳ್ಳೋಣ. ಮಗುವು ತನ್ನಷ್ಟಕ್ಕೆ ತಾನೇ ಪ, ಪ, ಪ:ಪ,—ಎಂಬ ಧ್ವನಿಯನ್ನು ಮಾಡುತ್ತಾ ತನ್ನ ಧ್ವನಿಯನ್ನು ಕೇಳಿ ಸಂತೋಷಿಸುತ್ತದೆ. ಇದಕ್ಕೆ ಯಾವ ಅರ್ಥವೂ ಇರುವುದಿಲ್ಲ. ಇದೇ ಸಂದರ್ಭದಲ್ಲಿ ಯಾರಾದರೂ (ತಂದೆ, ತಾಯಿ ಅಥವಾ ಹೊರಗಿನವರು) ಬಂದು 'ಪ' ಎಂಬ ಅಕ್ಷರದಿಂದ ಪ್ರಾರಂಭವಾಗುವ ಪದವನ್ನು ಉಪಯೋಗಿಸಬಹುದು. ಉದಾಹರಣೆಗೆ, ಬಂದವರು ಪಾತು (ಪಾರ್ವತಿ ಎಂಬುವಳ ಅಡ್ಡ ಹೆಸರು) ಎಲ್ಲಿ ಎಂದು ಕೇಳುತ್ತಾರೆಂದು ಭಾವಿಸೋಣ. ಆಗ ಮಗುವು "ಪಾತು' ಎಂಬ ಮೊದಲನೇ ಅಕ್ಷರವಾದ 'ಪ' ಎಂಬುದನ್ನು ಕೇಳಿ, ಹಿಂದಿನಂತೆಯೇ "ಪ, ಪ, ಪ—" ಎಂಬ ಧ್ವನಿಯನ್ನು ಮಾಡಲು ಪ್ರಾರಂಭಿಸುತ್ತದೆ. ಇನ್ನೊಬ್ಬರ ಧ್ವನಿಯನ್ನು ಕೇಳಿ ಅದೇ ರೀತಿ ಅನುಕರಣೆ ಮಾಡಲು ಮಗುವಿಗೆ ಸಾಮರ್ಥ್ಯವಿದೆ. ಆಗ ಪಾತು ಎಲ್ಲಿ ಎಂದು ಕೇಳಿದವರು. ಆ ಮಗುವಿನ "ಪ, ಪ, ಪ—" ಎಂಬ ಧ್ವನಿಯನ್ನು ಕೇಳಿ ಅವರದೇ ಆದ ಅರ್ಥವನ್ನು ಕಲ್ಪಿಸಿ, "ಆ ಮಗುವಿಗೆ ಪಾಪ ಬೇಕು" ಎಂದು ವಿಮರ್ಶಿಸಿ, ಅಲ್ಲೇ ಇರುವ ಒಂದು ಬೊಂಬೆಯನ್ನು ಅದರ ಮುಂದಿಟ್ಟು "ಇದೇ ಪಾಪ ತೊಗೋ" ಎಂದು ಹೇಳುತ್ತಾರೆ. ಆ ಮಗುವು "ಪ, —" ಎಂದು ಹೇಳುವುದರ ಜೊತೆಗೆ ಆ ಬೊಂಬೆಯನ್ನೇ ನೋಡುತ್ತದೆ. ವಸ್ತು ಮತ್ತು ವಸ್ತುವಿನ ಹೆಸರು, ಮಗುವು ಗ್ರಹಿಸುತ್ತದೆ. ಸ್ವಲ್ಪ ಕಾಲಾನಂತರ ಬೊಂಬೆಯನ್ನು ನೋಡಿದಾಗಲೆಲ್ಲಾ "ಪಾಪಾ" ಎಂದು ಕಲಿಯಲು ಪ್ರಾರಂಭಿಸುತ್ತದೆ. "ಪ, ಪ" ಎಂಬ ಕೇವಲ ಅರ್ಥವಿಲ್ಲದ ಧ್ವನಿಯ ಉಚ್ಚಾರಣೆಯು ಈಗ ಅರ್ಥಪೂರಿತ ಶಬ್ದವಾಗುತ್ತದೆ. ಅಂದರೆ ಬೊಂಬೆ ಎಂದರೆ ಪಾಪಾ ಮತ್ತು ಬೊಂಬೆಯನ್ನು ಪಾಪಾ ಎಂದು ಕರೆಯಬೇಕು ಎಂಬುದು ಮಗುವಿಗೆ ಪೂರ್ಣವಾಗಿ ಅರ್ಥವಾಗುತ್ತದೆ. ಮಗುವು "ಪಾಪಾ" ಎಂಬ ಹೊಸ ಪದವನ್ನು ಕಲಿತಹಾಗಾಯಿತು. ಕಾಲಕ್ರಮೇಣ ಇದೇ ರೀತಿ, ವಿಧವಿಧ ಸಂದರ್ಭಗಳ ಸಂಯೋಗದಿಂದ

ಮಗುವು ಅನೇಕ ಅರ್ಥಪೂರ್ಣ ಪದಗಳನ್ನು ಕಲಿಯುತ್ತದೆ.

ಒಂದೂವರೆ ವರ್ಷದ ನಂತರ ಮಕ್ಕಳು ವಿಶೇಷವಾಗಿ ಅನೇಕ ಪದಗಳನ್ನು ಸಂದರ್ಭಕ್ಕೆ ತಕ್ಕಂತೆ ಕಲಿಯುತ್ತಾರೆ. ಪದ ಸಂಪತ್ತು ಬೆಳೆಯುತ್ತಿದ್ದರೂ ಯಾವ ಯಾವ ಪದಗಳನ್ನು ಉಪಯೋಗಿಸ ಬೇಕೆಂದು ಅರ್ಥವಾಗಿರುವುದಿಲ್ಲ. ಪದಗಳ ಅರ್ಥವನ್ನು ಪೂರ್ಣವಾಗಿ ಗ್ರಹಿಸಿ, ಸಂದರ್ಭೋಚಿತವಾಗಿ ಉಪಯೋಗಿಸಿದರೆ ಮಾತ್ರ ಆ ಪದಗಳನ್ನು ಭಾಷಾ ಸಂಪತ್ತಿನ ಗುಂಪಿಗೆ ಸೇರಿಸಬಹುದು.



ಸಂಗೀತ ಸಂಶೋಧನ ಕಾರ್ಯವನ್ನು ಪ್ರಭಾವಿಸದು. ಆದರೆ ಎರಡು ಪೋಷಿತ ವಾಗವುದು ಹಂಬಲಿಕೆಯ ಅದೇ ಸೆಲೆಯಿಂದ. ಇವು ಒದಗಿಸುವ ವಿಮೋಚನ ಸುಖದ ಕಾರಣವಾಗಿ ಒಂದು ಇನ್ನೊಂದಕ್ಕೆ ಪೂರಕವಾಗಿದೆ.

ನಿಮ್ಮ ಹೆಚ್ಚಿನ ವೇಳೆಯನ್ನು ಯಾವುದೇ ಪ್ರಾಯೋಗಿಕ ಕಾರ್ಯಕ್ಕೆ—ಉಪಾಧ್ಯಾಯರಾಗಿ ಅಥವಾ ನಿಮ್ಮ ಸ್ವಭಾವಕ್ಕೆ ಒಗ್ಗುವ ಇನ್ನೊಂದು ಕ್ಷೇತ್ರದಲ್ಲಿ ದುಡಿಮೆಗಾರರಾಗಿ—ಮೀಸಲಿಟ್ಟು ಉಳಿಕೆ ಕಾಲವನ್ನು ಅಧ್ಯಯನದಲ್ಲಿ ವಿನಿಯೋಗಿಸಿ.

—ಐನ್‌ಸ್ಟೈನ್

*'ಪರೋಕ್ಷ ಧೂಮಪಾನ'ದ ಬಗ್ಗೆ ನಿಮಗೆ ಗೊತ್ತಿಲ್ಲದಿರುವುದು

ಜಿ. ವೈದೇಹಿ

೩೫೮, 'ಪುನರ್ವಸು'
ನವಿಲು ಮುಖ್ಯ ರಸ್ತೆ,
ಕುವೆಂಪುನಗರ, ಮೈಸೂರು-೨೩

ಸಾಮಂತ ಬೊವೆನ್ ಮೃತ್ಯುದವಡೆ ಯಲ್ಲಿದ್ದಾಗ ಅವಳಿಗಿನ್ನೂ ಐದು ವರ್ಷವೂ ಆಗಿರಲಿಲ್ಲ. ಉಸಿರಾಡಲು ಕಷ್ಟಪಡುತ್ತಿ ದ್ದಾಗ ಅವಳನ್ನು ಹೆಲಿಕಾಪ್ಟರ್‌ನಲ್ಲಿ ಆಸ್ಪತ್ರೆಗೆ ಸಾಗಿಸಲಾಯಿತು. ಅಲ್ಲಿ ವೈದ್ಯರೂ ನರ್ಸ್‌ಗಳೂ ತುರ್ತು ಚಿಕಿತ್ಸೆಗೆ ತೊಡಗಿ ಔಷಧೋಪಚಾರ ನೀಡಿ ಜೀವದಾನ ಮಾಡುವ ಆಕ್ಸಿಜನ್‌ಅನ್ನು ಪಂಪ್ ಮಾಡ ತೊಡಗಿದರು.

ಬೊವೆನ್ ಅಪಾಯ ಸ್ಥಿತಿಯಿಂದ ಪಾರಾ ದಳು. ವೈದ್ಯಕೀಯ ತಂಡದ ಬಿರುಸಿನ ಓಡಾಟ, ಮಾತುಕತೆ ಮತ್ತು ಪುಟ್ಟ ಹುಡುಗಿಯ ಉಬ್ಬಸದ ಭಯಾನಕ ಏಳಿತ ಇವು ತೀವ್ರ ಎಚ್ಚರಿಕಾ ಘಟಕದಲ್ಲಿ ಯಂತ್ರಗಳ ಮೃದುವಾದ ಬೀಪ್ ಶಬ್ದ ದಿಂದ ಸ್ಥಳಾಂತರಿಸಲ್ಪಟ್ಟವು.

ಡಾ|| ಜೊಸೆಫ್ ಡಿ ಫ್ರಾನ್ಸ್, ಸಾಮಂತಳ ವೈದ್ಯಕೀಯ ಚರಿತ್ರೆಯನ್ನು ಓದಿದಾಗ ಗಾಬರಿ ಹುಟ್ಟಿಸುವ ಒಂದು ಅಂಶ ಅವನಿಗೆ ತಿಳಿದುಬಂತು. ಆಸ್ಪತ್ರೆಯನ್ನು ಬಿಟ್ಟಕೂಡಲೇ ಮತ್ತೆ ಅವಳಿಗೆ ಅಪಾಯದ ಸ್ಥಿತಿ ಬರುತ್ತದೆ. ಏಕೆ? ಅವಳ ತಾಯಿ ತಂದೆಯರಿಬ್ಬರೂ ಧೂಮಪಾನಿಗಳು.

ಪರೋಕ್ಷ ಧೂಮಪಾನವು ಪ್ರಾಣಾಂತಿಕ ವಾದ ಉಬ್ಬಸವನ್ನು ಅವಳಲ್ಲಿ ಉಂಟು ಮಾಡುತ್ತದೆಂದು ಸಾಮಂತಳ ತಾಯಿತಂದೆ ಯರಿಗೆ ವೈದ್ಯರು ಅನೇಕ ಬಾರಿ ಎಚ್ಚರಿಸಿ ದ್ದರು. ಪಶ್ಚಾತ್ತಾಪದಿಂದ ಬೊವೆನ್ ದಂಪತಿ ಗಳು ಮನೆಯಲ್ಲಿ ಧೂಮಪಾನ ಮಾಡು ವುದನ್ನು ನಿಲ್ಲಿಸುವೆವೆಂದು ಒಪ್ಪಿಕೊಳ್ಳು ತ್ತಿದ್ದರು. ಆದರೆ ಸಾಮಂತಳಿಗೆ ಆರೋಗ್ಯದ ಲಕ್ಷಣಗಳು ಕಾಣಿಸಿಕೊಳ್ಳುತ್ತಿದ್ದಂತೆಯೇ ಮತ್ತೆ ಅವಳ ಬಳಿ ಸಿಗರೇಟನ್ನು ಹೊತ್ತಿಸಿ ಕೊಳ್ಳುತ್ತಿದ್ದರು.

ಹೆಚ್ಚು ಯಜ್ಞಪಶುಗಳು : ಸಾಮಂತಳಿಗೆ ಮತ್ತೊಮ್ಮೆ ಆರೋಗ್ಯ ಕೆಟ್ಟಾಗ ಅವಳು

೧೯೯೭ರ ಅಕ್ಟೋಬರ್‌ನ 'ರೀಡರ್ಸ್ ಡೈಜೆಸ್ಟ್' ಮಾಸಪತ್ರಿಕೆಯಲ್ಲಿ ಪ್ರಕಟವಾದ ಅಡಿತಾ ಕರ್ಲೊವಿಟ್ಜ್ ಅವರ "ವಾಟ್ ಯು ಡೋಂಟ್ ನೊ ಎಬೌಟ್ ಸೆಕೆಂಡ್‌ಹ್ಯಾಂಡ್ ಸ್ಮೋಕ್" ಲೇಖನದ ಅನುವಾದ.

* ಮತ್ತೊಬ್ಬರು ಬಿಟ್ಟ ಸಿಗರೇಟ್ ಹೊಗೆಯನ್ನು ಉಸಿರಾಟದ ಮೂಲಕ ಸೇವಿಸುವುದು.

ಬದುಕಿ ಉಳಿಯುವಳೆಂಬ ಭರವಸೆ ಡಾ|| ಡಿ. ಫ್ರಾನ್ಸಾಗೆ ಇರಲಿಲ್ಲ. ಎಳೆಯ ಶಿಶುಗಳು ಮತ್ತು ಚಿಕ್ಕ ಮಕ್ಕಳು ಪ್ರೌಢರಿಗಿಂತ ಪರೋಕ್ಷ ಧೂಮಪಾನ ಪ್ರಭಾವಕ್ಕೆ ಹೆಚ್ಚಾಗಿ ಬಲಿಬೀಳುವರೆಂದು ಡಾ|| ಡಿ. ಫ್ರಾನ್ಸಾ ಬೊವೆನ್ ದಂಪತಿಗಳಿಗೆ ಕಡೆಯ ಸಲ ಎಚ್ಚರಿಕೆ ನೀಡಿದನು. ಇತರ ನಿಕೊಟಿನ್ ವ್ಯಸನಿಗಳಂತೆ ಬೊವೆನ್ ದಂಪತಿಗಳಿಗೂ ಕೂಡ ತಮ್ಮ ಈ ಚಟಕ್ಕೂ ಮಗಳ ಉಬ್ಬಸ ರೋಗಕ್ಕೂ ಯಾವುದೇ ಸಂಬಂಧವಿದೆಯೆಂದು ಒಪ್ಪಿಕೊಳ್ಳಲು ತಯಾರಿರಲಿಲ್ಲ. ಅವಳ ಶರೀರದೊಳಗೇ ಅವರನ್ನು ಕರೆದುಕೊಂಡುಹೋಗಿ ವಿಷವಸ್ತುಗಳು ನಡೆಸುತ್ತಿರುವ ಕ್ರಿಯೆಯನ್ನು ತೋರಿಸಿದ್ದರೆ ಬಹುಶಃ ಅರ್ಥಮಾಡಿಕೊಳ್ಳುತ್ತಿದ್ದರೇನೋ!

ತಮ್ಮ ಸಿಗರೇಟಿನ ತುದಿಯಿಂದ ಹೊರಬರುವ ಹೊಗೆಸುರುಳಿಗಳು ಗಾಳಿಯೊಂದಿಗೆ ವಿಲೀನವಾಗಿ ಅದೃಶ್ಯವಾಗುವುದೊಂದೇ ಅಲ್ಲವೆಂದು ಬೊವೆನ್ ದಂಪತಿಗಳು ತಿಳಿದಿರಲಿಲ್ಲ. ಆ ಹೊಗೆಯಿಂದ ಕನಿಷ್ಠ ೪೩ ಕ್ಯಾನ್ಸರ್ ಕಾರಕಗಳನ್ನು ಒಳಗೊಂಡಂತೆ ಸುಮಾರು ನಾಲ್ಕು ಸಾವಿರಕ್ಕಿಂತಲೂ ಹೆಚ್ಚು ಪ್ರಬಲ ಪ್ರಾಣಾಂತಿಕಗಳು ವಾತಾವರಣವನ್ನು ಸೇರುತ್ತವೆ.

ಕ್ಯಾಡ್ಮಿಯಮ್ (ಒಂದು ಕ್ಯಾನ್ಸರ್-ಕಾರಕ ಲೋಹಧಾತು), ಅಮೋನಿಯ (ಶೌಚಾಲಯಗಳನ್ನು ಚೊಕ್ಕಟಗೊಳಿಸಲು ಉಪಯೋಗಿಸುವ ರಾಸಾಯನಿಕ), ಬೆನ್ಜಿನ್ (ಡಿಡಿಟಿ ತಯಾರಿಸಲು ಉಪಯೋಗಿಸುವ ವಸ್ತು), ಅಸಿಟೋನ್ (ಪ್ರಬಲ ದ್ರಾವಕ), ಫಾರ್ಮಾಲ್ಡಿಹೈಡ್ (ಕೊಳೆಯದಂತೆ ಮಾಡುವ ದ್ರವ) ಮತ್ತು ಸಾವಿರಾರು ವಿಷ ಅನಿಲಗಳನ್ನೂ, ಗಾಳಿಯಲ್ಲಿ ತೇಲಾಡುವ ಕಣಗಳನ್ನೂ ಸಾಮಂತಳು ಪ್ರತಿ ಉಸಿರಿನಲ್ಲೂ ಎಳೆದುಕೊಳ್ಳುತ್ತಿದ್ದಳು. ಆ ಅನಿಲಗಳಲ್ಲಿ ಒಂದು—ಬಣ್ಣವಿಲ್ಲದ ವಾಸನೆ ಇಲ್ಲದ ಕಾರ್ಬನ್ ಮಾನಾಕ್ಸೈಡ್—ಅವಳ ರಕ್ತದ ಹಿಮೊಗ್ಲೋಬಿನ್‌ನಲ್ಲಿ ಸೇರಿಹೋಗಿತ್ತು. ಈ ಅಪಾಯಕಾರಿ ಅನಿಲ ಆಮ್ಲಜನಕದ ಸ್ಥಾನವನ್ನು ಆಕ್ರಮಿಸಿಕೊಂಡು ಪುಪ್ಪುಸ ಮತ್ತು ಇನ್ನಿತರ ಅಂಗಗಳೆಡೆಗೆ ಧಾವಿಸಿತ್ತು.

ಬೊವೆನ್ ದಂಪತಿಗಳು ಪ್ರತಿಸಲ ಸಿಗರೇಟ್ ಎಳೆದಾಗಲೂ ಉರಿಯುತ್ತಿರುವ ಹೊಗೆಸೊಪ್ಪಿನ ಉಷ್ಣತೆಯನ್ನು ಹೆಚ್ಚಿಸುತ್ತಿದ್ದರು. ತಮ್ಮ ಪುಪ್ಪುಸ ಪ್ರವೇಶಿಸಬಹುದಾದ ಕೆಲವು ಶೇಕಡಾ ಪ್ರಮಾಣದ ರಾಸಾಯನಿಕಗಳನ್ನು ದಹಿಸುತ್ತಿದ್ದರು ಮತ್ತು ಸಿಗರೇಟಿನ ಮೂಲಕ ಒಳಗೆ ಎಳೆದುಕೊಂಡ ಗಾಳಿಯು ಹೊಗೆಯ ವಿಷವನ್ನು ತೆಳುವಾಗಿಸುತ್ತಿತ್ತು.

ಒಳಗೆ ಎಳೆದುಕೊಳ್ಳುವ ಹೊಗೆಯಿಂದ ಬೊವೆನ್ ದಂಪತಿಗಳು ಅತಿ ಹೆಚ್ಚಿನ ಅಪಾಯದಲ್ಲಿದ್ದರೂ ಅವರು ಬಿಡುವ ಹೊಗೆ ಅವರು ಒಳತೆಗೆದುಕೊಳ್ಳುವ ಹೊಗೆಗಿಂತ ಹೆಚ್ಚು ವಿಷಕಾರಿಯಾಗಿತ್ತು.

ಪ್ರಾಣಾಂತಿಕ ಉಬ್ಬಸ ಉಲ್ಬಣಗೊಂಡ ದಿನ ಸಿಗರೇಟಿನ ಹಲವಾರು ವಿಷಗಳು ಸಾಮಂತಳ ಸ್ಥಿತಿಯನ್ನು ಹದಗೆಡಿಸಿದುವು. ಅವಳ ಪುಪ್ಪುಸಗಳ ವಾಯುಕೋಶಗಳನ್ನು ಆವರಿಸಿದ್ದ ಸ್ನಾಯುಗಳು ಪೆಡಸಾಗಿ ಗಾಳಿ ಪ್ರವೇಶಿಸಲು ಅವಕಾಶವಾಗಲಿಲ್ಲ. ಸರಳ ಕ್ರಿಯೆಯಾದ ಉಸಿರಾಟವೂ ಸಹ ಸಾಮಂತಳಿಗೆ ಪ್ರಯಾಸವಾಯಿತು.

ಹುಟ್ಟುವ ಕೊಠಡಿಯು ತಂಡ ಸಮಯಕ್ಕೆ ಸರಿಯಾಗಿ ಬರದಿದ್ದರೆ ಸಾವಂತಳು ಅಸುನೀಗುತ್ತಿದ್ದಳು.

ಇದುವರೆಗೆ ತಿಳಿದಿರುವ ಪರೋಕ್ಷ ಧೂಮಪಾನದ ಪರಿಣಾಮಗಳು ತಮ್ಮ ಮಕ್ಕಳ ಬಳಿಯೇ ಧೂಮಪಾನ ಮಾಡುವ ದಂಪತಿಗಳಿಗೆ ಗಾಬರಿ ಹುಟ್ಟಿಸಬೇಕು. ಮಕ್ಕಳಿಗೆ ಉಂಟುಮಾಡುವ ಅಪಾಯಗಳ ಬಗ್ಗೆ ಡಾ|| ಡಿ. ಫಾನ್ನಾರವರು "ಪೀಡಿಯಾಟ್ರಿಕ್ ಅಂಡ್ ಜರ್ನಲ್ ಆಫ್ ಫ್ಯಾಮಿಲಿ ಪ್ರಾಕ್ಟೀಸ್"ನಲ್ಲಿ ಮುದ್ರಿತವಾದ ತಮ್ಮ ಎರಡು ಲೇಖನಗಳಲ್ಲಿ ಪ್ರಕಟಪಡಿಸಿದ್ದಾರೆ.

ಪ್ರಪಂಚಾದ್ಯಂತ ದೊರೆತ ನೂರಕ್ಕೂ ಹೆಚ್ಚು ಮಾಹಿತಿಗಳನ್ನು ವಿಶ್ಲೇಷಿಸಿದ ನಂತರ ಹೊಗೆಸೊಪ್ಪಿನ ಹೊಗೆಗೆ ಒಳಪಡುವ ಮಕ್ಕಳು ಈ ಕೆಳಗಿನ ಅಪಾಯಗಳಿಗೆ ತುತ್ತಾಗುವರೆಂದು ಡಾ|| ಡಿ. ಫ್ರಾನ್ನಾ ತೀರ್ಮಾನಿಸಿದರು.

ಶಿಶುಗಳು ಹುಟ್ಟಿದ ಕ್ಷಣವೇ ಮರಣವನ್ನಪ್ಪುವುದು :

ತಾಯಿ ಗರ್ಭಿಣಿ ಇದ್ದಾಗ ಧೂಮಪಾನ ಮಾಡಿದಲ್ಲಿ ಧೂಮಪಾನ ಮಾಡದವರ ಮಕ್ಕಳಿಗಿಂತ ಮೂರು ಪಟ್ಟು ಹೆಚ್ಚು ಶಿಶುಗಳು ಈ ಅಪಾಯಕ್ಕೆ ಒಳಗಾಗುತ್ತವೆ. ಹುಟ್ಟಿದ ನಂತರ ಸಿಗರೇಟಿನ ಹೊಗೆಗೆ ಒಳಗಾದಲ್ಲಿ ಎರಡು ಪಟ್ಟು ಹೆಚ್ಚು ಅಪಾಯಕ್ಕೆ ಈಡಾಗುತ್ತವೆ. ಮಕ್ಕಳಿಗೆ ಸಾಮಾನ್ಯವಾಗಿ ಬರುವ ಎಲ್ಲಾ ರೋಗಗಳೂ ಪರೋಕ್ಷ ವ್ಯಸನಿ ಮಕ್ಕಳಿಗೆ ಹೆಚ್ಚು ಬರುವ ಸಂಭವವಿದೆ.

ಕಿವಿಯ ಸೋಂಕು :

ಬಾಲ್ಯದಲ್ಲಿ ಸಾಮಾನ್ಯವಾಗಿ ಕಾಣಿಸಿಕೊಳ್ಳುವ ಕಿವಿಯ ಸೋಂಕು ಹೆಚ್ಚಾಗಿ ಪರೋಕ್ಷ ವ್ಯಸನಿ ಮಕ್ಕಳಲ್ಲಿ ಕಂಡುಬರುತ್ತದೆ. ಏಕೆ? ಸಿಗರೇಟಿನ ಹೊಗೆಯನ್ನು ಉಸಿರಾಡುವುದರಿಂದ ಕೆಲವು ವೈರಸ್ ಮತ್ತು ಬ್ಯಾಕ್ಟೀರಿಯಗಳ ವಿರುದ್ಧ ಮಕ್ಕಳಲ್ಲಿರುವ ನಿರೋಧ ಶಕ್ತಿಯು ಕುಂದುತ್ತದೆ.

ಉಸಿರಾಟದ ಸೋಂಕುಗಳು :

ವರ್ಷಪ್ರತಿ ಸಾವಿರಾರು ಮಕ್ಕಳು ಶ್ವಾಸನಾಳ ಸೋಂಕು ಮತ್ತು ನ್ಯೂಮೋನಿಯದಿಂದ ನರಳುತ್ತಾರೆ. ಶ್ವಾಸಕೋಶಗಳ ಕುಂಠಿತ ಬೆಳವಣಿಗೆಗೆ ಕಾರಣವೂ ಇದೇ ಆಗಿದೆ. ಇದರಿಂದ ಮುಂದಿನ ಜೀವನದಲ್ಲಿ ಆ ಮಕ್ಕಳು ಪುಪ್ಪುಸದ ರೋಗಗಳಿಗೆ ತುತ್ತಾಗುವರು.

ಅಸ್ತಮಾ :

ಉಬ್ಬಸ ರೋಗಿಗಳನ್ನು ನೋಡುವ ಸಾವಿರಾರು ವೈದ್ಯರು ಉಬ್ಬಸಕ್ಕೆ ಪರೋಕ್ಷ ಧೂಮಪಾನವೇ ಕಾರಣವೆಂದು ತಿಳಿಸಿದ್ದಾರೆ. ಮೊದಲೇ ಇರುವ ಉಬ್ಬಸವು ಸಿಗರೇಟ್ ಹೊಗೆಯನ್ನು ಸೇವಿಸುವುದರಿಂದ ಇನ್ನೂ ಹೆಚ್ಚಾಗುತ್ತದೆ. ಅಲ್ಲದೆ ಉಬ್ಬಸದ ಯಾವ ಲಕ್ಷಣವನ್ನೂ ಮೊದಲು ಹೊಂದಿರದ ಮಕ್ಕಳು ಹೊಗೆಯನ್ನು ಸೇವಿಸಿದ ಬಳಿಕ ರೋಗಕ್ಕೆ ತುತ್ತಾಗಿದ್ದಾರೆ.

ಪರೋಕ್ಷ ಧೂಮಪಾನದ ಬಗ್ಗೆ ತನ್ನ ಈ ತಿಳುವಳಿಕೆ ಹೊಗೆಸೊಪ್ಪಿನ ಕಾರ್ಖಾನೆಯ ಮೇಲಿನ ಧಾಳಿಯಾಗಬಹು

ದೆಂದು ಡಾ|| ಡಿ. ಫ್ರಾನ್ಸಾ ಊಹಿಸಿದ. ಇನ್ನೂ ಇತರ ಅಧ್ಯಯನಗಳೂ ಧೂಮಪಾನ ಮತ್ತು ರೋಗಕ್ಕೆ ಇರುವ ಸಂಬಂಧವನ್ನು ವ್ಯಕ್ತಪಡಿಸಿದವು. "ಪ್ರತಿಯೊಂದು ಅಂಕಿ ಸಂಖ್ಯೆಗಳನ್ನೂ ನಾವು ನಾಲ್ಕು ನಾಲ್ಕು ಬಾರಿ ಪರಿಶೀಲಿಸಿದ್ದೇವೆ"—ಡಾ|| ಡಿ. ಫ್ರಾನ್ಸಾ ಹೇಳಿದರು. ಹೊಗೆಸೊಪ್ಪಿನ ಕಾರ್ಖಾನೆ ಯಾವ ಟೀಕೆಯನ್ನು ಮಾಡದಿರುವುದು ಒಂದು ಸೋಜಿಗವಾಗಿತ್ತು. ಹೊಗೆಸೊಪ್ಪಿನವರ ದೊಡ್ಡ ಬಂದೂಕುಗಳಿಂದ ಬರಬಹುದಾದ 'ತಿರುಗು ಬಾಣ'ಗಳ ಕೊರತೆಯೇ ಡಾ|| ಡಿ. ಫ್ರಾನ್ಸಾ ಅವರ ಆವಿಷ್ಕಾರವನ್ನು ದೃಢಪಡಿಸಿತು.

ಅಪಾಯದ ಕರೆಗಂಟೆ :

ಪರೋಕ್ಷ ಧೂಮಪಾನವು ಕ್ಯಾನ್ಸರನ್ನು ಉಂಟುಮಾಡುವುದೆಂದು ಬಹಳ ಹಿಂದಿನಿಂದಲೂ ತಿಳಿದುಬಂದಿದೆ. ಧೂಮಪಾನ ಮಾಡದ ಹೆಂಗಸರು ಪರೋಕ್ಷ ಧೂಮಪಾನದಿಂದ ಎರಡರಷ್ಟು ಹೆಚ್ಚು ಹೃದ್ರೋಗಕ್ಕೆ ತುತ್ತಾಗುವರೆಂದು ಹಾರ್ವರ್ಡ್ ವಿಶ್ವವಿದ್ಯಾಲಯವು ತನ್ನ ಇತ್ತೀಚಿನ ಅಧ್ಯಯನದಿಂದ ತಿಳಿಸಿದೆ. ೧೯೯೪ರಲ್ಲಿ ಕ್ಯಾಲಿಫೋರ್ನಿಯದ ಸ್ಯಾನ್‌ಫ್ರಾನ್ಸಿಸ್ಕೊ ವಿಶ್ವವಿದ್ಯಾಲಯವು ಸ್ಟ್ಯಾಂಟನ್ ಗ್ಲಾಂಟ್ಸ್‌ರವರಿಗೆ ಒಂದು ಅನಾಮಧೇಯ ಅಂಚೆ ಕಟ್ಟನ್ನು ಕಳುಹಿಸಿ ಹೊಗೆಸೊಪ್ಪಿನ ಕಂಪೆನಿಗಳಿಂದ ಆಗುತ್ತಿರುವ ಅನ್ಯಾಯಕ್ಕೆ ಇಡೀ ಪ್ರಪಂಚದಲ್ಲಿ ಖಚಿತವಾದ ಸಾಕ್ಷಿ ಇದೆಯೆಂದು ತಿಳಿಸಿತು. ಆ ಕಟ್ಟಿನಲ್ಲಿ ಹೊಗೆಸೊಪ್ಪಿನ ಎರಡು ದೊಡ್ಡ ಕಂಪೆನಿಗಳ ನಾಲ್ಕು ಸಾವಿರ ಪುಟಗಳ ಗುಪ್ತ ದಾಖಲೆಗಳಿದ್ದುವು. ಪ್ರಸಾರ ಮಾಧ್ಯಮ ಮತ್ತು ಇಬ್ಬರು ಅಮೆರಿಕ ಶಾಸಕಾಂಗ ಸದಸ್ಯರೂ ಇದೇ ರೀತಿಯ ಅಂಚೆ ಕಟ್ಟುಗಳನ್ನು ಪಡೆದರು.

೧೯೫೦ರ ತರುವಾಯದ ಕಾಲಾವಧಿಯನ್ನು ಗಣನೆಗೆ ತೆಗೆದುಕೊಂಡು ಹೊಗೆಸೊಪ್ಪಿನಲ್ಲಿರುವ ಚಟ ಹುಟ್ಟಿಸುವ ಗುಣಗಳನ್ನೂ ಆರೋಗ್ಯಕ್ಕೆ ತರುವ ಹಾನಿಗಳನ್ನೂ ಸ್ವತಂತ್ರ ಸಂಶೋಧಕರು ಖಚಿತಪಡಿಸುವ ಮೊದಲೇ ಕಂಪೆನಿಯ ಸಂಶೋಧಕರು ದೃಢಪಡಿಸಿಕೊಂಡಿದ್ದರು. ಆ ಪತ್ರದ ಅನೇಕ ವಿಷಯಗಳನ್ನು ಸಾರ್ವಜನಿಕರಿಂದ ಗೋಪ್ಯವಾಗಿ ಇಡಲಾಗಿತ್ತು.

ಪರೋಕ್ಷ ಧೂಮಪಾನ ಧೂಮಪಾನ ಮಾಡದವರಿಗೆ ಹಾನಿಯುಂಟುಮಾಡುತ್ತದೆಂದು ಧೂಮಪಾನ ವ್ಯಸನಿಗಳಿಗೆ ತಿಳಿದರೆ ಅವರು ಆ ಚಟವನ್ನು ಬಿಡುವ ಸಂಭವವಿರುವುದು ಕಂಪೆನಿಯ ಕಾರ್ಯನಿರ್ವಾಹಕರಿಗೆ ಚಿಂತೆಯಾಗಿದೆ ಎಂಬುದನ್ನು ಮತ್ತೆ ಕೆಲವು ಪತ್ರಗಳು ತಿಳಿಸಿದುವು.

ಒಂದು ಹೊಗೆಸೊಪ್ಪಿನ ಕಂಪೆನಿಗಾಗಿ ಗೋಪ್ಯವಾಗಿ ಮಾಡಿದ ಅಧ್ಯಯನ ಗ್ಲಾಂಟ್ಸ್‌ನ ಸಹಗ್ರಂಥ ಕರ್ತೃತ್ವದೊಂದಿಗೆ 'ಸಿಗರೇಟ್ ಪೇಪರ್' ಎಂಬ ಪುಸ್ತಕದ ರೂಪದಲ್ಲಿ ಪ್ರಕಟವಾಯಿತು. ಪರೋಕ್ಷ ಧೂಮಪಾನ ಕಂಪೆನಿಗೆ ಧಕ್ಕೆ ತರುವ ಅಂಶವೆಂದು ಗುರುತಿಸಲಾಯಿತು. "ಧೂಮಪಾನ ವ್ಯಸನಿ ತನಗೇನು ಮಾಡಿಕೊಳ್ಳುವನೋ ಅದು ಅವನಿಗೆ ಸೇರಿದ್ದು—ಆದರೆ ಅವನು ಧೂಮಪಾನ ಮಾಡದವರಿಗೆ ಏನು ಮಾಡುವನೋ ಅದು ಚಿಂತನೆಯ ವಿಷಯವಾಗಿದೆ. ಹೊಗೆಸೊಪ್ಪಿನ ಕಂಪೆನಿಯ ಉಳಿಯುವಿಕೆಗೆ ಇದೊಂದು ಹಾನಿಕಾರಕ ಬೆಳವಣಿಗೆ ಎಂದು ಪರಿಗಣಿಸುತ್ತೇವೆ" ಎಂದು ಆ ಅಧ್ಯಯನಕಾರರು ಹೇಳಿಕೆಯನ್ನಿತ್ತರು.

ಸಿಗರೇಟಿನ ಹೊಗೆಗೆ ಒಡ್ಡಿಕೊಳ್ಳುವುದನ್ನು ತಡೆಯುವುದು :

ಮಕ್ಕಳ ತಜ್ಞರ ಪರೀಕ್ಷಣಾಕೊಠಡಿಯಲ್ಲಿ ಮೂರು ವರ್ಷದ ಡೇನಿಯಲ್ ರೈಡರ್ ತನ್ನ ತಂದೆಯ ತೊಡೆಯ ಮೇಲೆ ಉದಾಸೀನನಾಗಿ ಕುಳಿತಿದ್ದನು. ಹುಡುಗನ ತಾಯಿ ಎಲೆನ್‌ಳು ಹತ್ತಿರ ಬಂದು ಅವನಿಗೆ ಧೈರ್ಯ ತುಂಬಲು ಅವನ ಕಪ್ಪಾದ ರೇಷ್ಮೆಯಂತಿರುವ ಕೂದಲನ್ನು ನೇವರಿಸಿದಳು.

ಮಕ್ಕಳ ತಜ್ಞರ ಬಳಿ ಧಾವಿಸಿ ಬರುವ ಈ ತುರ್ತು ಭೇಟಿಗಳು ಎಲೆನ್ ದಂಪತಿಗಳಿಗೆ ಸರ್ವೇಸಾಮಾನ್ಯವಾಗಿ ಹೋಗಿತ್ತು. ಡೇನಿಯಲ್ ನಡುರಾತ್ರಿ ಎದ್ದು ತನ್ನ ಕಿವಿಯನ್ನು ಹಿಡಿದು ನೋವಿನಿಂದ ಕೂಗಿಕೊಳ್ಳುತ್ತಿದ್ದನು. ಎಲೆನ್‌ಳು ಗಲಿಬಿಲಿಗೊಂಡು ವೈದ್ಯರಿಗೆ ಫೋನ್ ಮಾಡುತ್ತಿದ್ದಳು. ಒಂದೆರಡು ವಾರಗಳಲ್ಲಿ ಪ್ರತಿಜೈವಿಕಗಳು ಸಮಸ್ಯೆಯನ್ನು ಬಗೆಹರಿಸುತ್ತಿದ್ದವು. ಡೇನಿಯಲ್‌ನ, ಒಂದು ಕಿವಿಯ ಸೋಂಕು ಪರಿಹಾರವಾಗುತ್ತಿದ್ದಂತೆಯೇ ಮತ್ತೊಂದು ಕಿವಿಯ ನೋವು ಪ್ರಾರಂಭವಾಗುತ್ತಿತ್ತು. ಸಮರ್ಪಣಾಭಾವದ ತಾಯಿ ಎಲೆನ್‌ಗೆ ಚಿಂತೆಯಿಂದ ಬಿಡುಗಡೆ ಸಿಗಲೇ ಇಲ್ಲ. ಡೇನಿಯಲ್ ಏಕೆ ಯಾವಾಗಲೂ ಅಸ್ವಸ್ಥ ?

ವೈದ್ಯರು ಡೇನಿಯಲ್‌ನನ್ನು ಪರೀಕ್ಷಿಸುತ್ತಿದ್ದಂತೆಯೇ ಎಲೆನ್ ಮತ್ತು ಅವಳ ಪತಿ ಜೊ ವೈದ್ಯರ ಪಕ್ಕದಲ್ಲಿಯೇ ಹೋಗಿ ನಿಂತರು. ಧೂಮಪಾನ ಮಾಡುವಿರಾ ಎಂದು ರೈಡರ್ ದಂಪತಿಗಳನ್ನು ವೈದ್ಯರು ಕೇಳಿದರು. ಹೌದೆಂದು ದಂಪತಿಗಳು ಒಪ್ಪಿಕೊಂಡರು. "ನಿಮ್ಮ ಬಟ್ಟೆಗಳ ಮೇಲಿನ ಸಿಗರೇಟ್ ಹೊಗೆಯ ವಾಸನೆಯನ್ನು ಕಂಡುಹಿಡಿದು ಧೂಮಪಾನ ಮಾಡುವರೆಂದೇ ನಾನು ಯೋಚಿಸಿದೆ. ನೀವಿಬ್ಬರೂ ಅವನ ಬಳಿ ಸಿಗರೇಟ್ ಸೇದುವುದನ್ನು ನಿಲ್ಲಿಸಿದರೆ ಅವನ ಕಿವಿಗಳಲ್ಲಿ ಆಗುವ ಬದಲಾವಣೆಯು ನಿಮಗೇ ಗೊತ್ತಾಗುವುದು."

ಎಲೆನ್ ದಿಗ್ಭ್ರಾಂತಳಾದಳು. ಮಕ್ಕಳ ಕಿವಿ ಸೋಂಕಿಗೂ ತಾಯಿತಂದೆಯರ ಧೂಮಪಾನಕ್ಕೂ ಸಂಬಂಧವಿದೆಯೆಂದು ಅವಳು ಇದುವರೆವಿಗೂ ಕೇಳಿರಲಿಲ್ಲ. ಆದರೆ ಅನಂತರ ಅವಳಿಗೆ ಮನವರಿಕೆಯಾಯಿತು. "ನನ್ನ ಮೂರ್ಖತೆಗೆ ನನಗೇ ನಾಚಿಕೆಯಾಯಿತು" ಎಲೆನ್ ಈಗಲೂ ಅದನ್ನು ನೆನಪಿಸಿಕೊಳ್ಳುತ್ತಾಳೆ. ಆ ಗಳಿಗೆಯಿಂದಲೇ ಎಲೆನ್ ತನ್ನ ಮಗುವಿನ ಬಳಿ ಧೂಮಪಾನ ಮಾಡಲು ಯಾರಿಗೂ ಅವಕಾಶ ಕೊಡಬಾರದೆಂದು ತೀರ್ಮಾನಿಸಿದಳು. ಜೊ ಸಹ ಅವಳ ನಿರ್ಧಾರವನ್ನೇ ಅನುಸರಿಸಿದನು. ಆದರೆ, ವೈದ್ಯನ ಅಭಿಪ್ರಾಯ ತಪ್ಪೆಂದು ಜೊ ತಿಳಿದಿದ್ದನು.

ಇಷ್ಟರಲ್ಲಿ ಎಲೆನ್ ಧೂಮಪಾನ ತ್ಯಜಿಸಿದಳು. "ನಾನು ಗರ್ಭಿಣಿಯೆಂದು ನನಗೆ ತಿಳಿಯಿತು. ಆದ್ದರಿಂದ ನಾನು ಧೂಮಪಾನ ಬಿಡಲು ಸುಲಭವಾಯಿತು."

ಯುಕ್ತಿ ಫಲಿಸಿತು. ಡೇನಿಯಲ್‌ಗೆ ಮುಂದಿನ ಒಂಭತ್ತು ತಿಂಗಳಲ್ಲಿ ಒಂದು ಸಲವೂ ಕಿವಿಯ ಸೋಂಕು ಬರಲಿಲ್ಲ

ಆದರೆ ಜೊ ತನ್ನ 'ಒಂದು ದಿನಕ್ಕೆ ಎರಡು ಪ್ಯಾಕೆಟ್‌ಗಳ' ಚಟದಿಂದಾಗಿ ಹೆಚ್ಚು ಹೊತ್ತನ್ನು ಗ್ಯಾರೇಜ್ ಆಚೆ ಇರುವ ಲಾಂಡ್ರಿ ಕೊಠಡಿಯಲ್ಲಿ ಕಳೆಯುತ್ತಿದ್ದ. ಆ ಕೊಠಡಿಯಿಂದ ಉಳಿದ ಮನೆಯ ಭಾಗಗಳಿಗೆ ಗಾಳಿ ಬರಲು ಯಾವ ಮಾರ್ಗವೂ ಇಲ್ಲದೆ

ಆ ಜಾಗವೊಂದೇ ಕ್ಷೇಮಕರವೆಂದು ಎಲೆನ್ ನಿರ್ಧರಿಸಿದ್ದಳು. "ಮನೆಯ ಯಾವುದಾದರೂ ಕೆಲಸವನ್ನು ಮಾಡಲು ಅಥವಾ ಶುಭರಾತ್ರಿ ಹೇಳಲು ಜೊ ನನ್ನ ಮನೆಯೊಳಗೆ ಬಾ ಎಂದು ಕರೆಯಬೇಕಿತ್ತು. ಕುಟುಂಬಕ್ಕಿಂತ ಅವನಿಗೆ ಸಿಗರೇಟ್ ಹೆಚ್ಚಾಗಿತ್ತು." ಎಲೆನ್ ನೆನೆಪಿಸಿಕೊಂಡಳು.

ತಮ್ಮ ಎರಡನೇ ಮಗು ಹುಟ್ಟಿದ ಸ್ವಲ್ಪ ದಿನಗಳಲ್ಲಿಯೇ ಜೊ ಮತ್ತು ಎಲೆನ್ ಬೇರೆಯಾದರು. ತನ್ನ ಆತಂಕವನ್ನು ನೀಗಿಸಿಕೊಳ್ಳಲು ಎಲೆನ್ ಮತ್ತೆ ಸಿಗರೇಟಿಗೆ ಶರಣಾದಳು. "ಆದರೆ ಮನೆಯೊಳಗೆ ಖಂಡಿತ ಇಲ್ಲ. ಒಳಗೆ ಸಿಗರೇಟ್ ಹೊಗೆಯ ವಾಸನೆ ಸ್ವಲ್ಪವೂ ಇರುತ್ತಿರಲಿಲ್ಲ."

ಕಳೆದ ಕ್ರಿಸ್‌ಮಸ್ ದಿನ ಐದು ವರ್ಷದ ಡೇನಿಯಲ್ ತನ್ನ ತಾಯಿಯನ್ನು ಒಂದೇ ಒಂದು ಕಾಣಿಕೆಯನ್ನು ಕೇಳಿದನು. ಅವನು ತನ್ನ ತಾಯಿ ಧೂಮಪಾನ ತ್ಯಜಿಸಬೇಕೆಂದು ಬಯಸಿದ.

"೧೯೯೭ರ ಜನವರಿ ಮೊದಲನೇ ತಾರೀಖು ನಾನು ಅವನಿಗಾಗಿ ಧೂಮಪಾನ ನಿಲ್ಲಿಸಿಬಿಟ್ಟೆ" ಎಲೆನ್ ಸಂತೋಷದಿಂದ ಹೇಳಿದಳು.

ಎಲೆನ್ ರೈಡರ್‌ನಂತೆ ದೃಢ ಮನಸ್ಸು ಎಲ್ಲರಿಗೂ ಇಲ್ಲದಿರುವುದು ದುರದೃಷ್ಟಕರ. ಕೆಲವರು ತಮ್ಮನ್ನು ಪ್ರೀತಿಸುವವರಿಗಾಗಿ ಸಿಗರೇಟ್ ತ್ಯಜಿಸಲು ಬಯಸಬಹುದು ಅಥವಾ ತಮ್ಮ ಆರೋಗ್ಯ ಸುಧಾರಣೆಗಾಗಿಯೇ ಇರಬಹುದು. ಆದರೆ ನಿಕೊಟಿನ್ ಚಟ ಮಾತ್ರ ಅತಿ ಬಲಶಾಲಿ. ಮತ್ತೆ ಕೆಲವರು ಸಿಗರೇಟ್ ಸೇದುವುದರಿಂದ ಆನಂದವನ್ನು ಅನುಭವಿಸುತ್ತಾ ಅದನ್ನು ಬಿಡುವ ಯೋಚನೆಯನ್ನೇ ಮಾಡುವುದಿಲ್ಲ.

ನಿಮಗೆ ತ್ಯಜಿಸಲು ಆಗದಿದ್ದರೆ ಅಥವಾ ಇಷ್ಟವಿಲ್ಲದಿದ್ದರೆ ನಿಮ್ಮ ಸುತ್ತ ಇರುವವರ ಆರೋಗ್ಯ ರಕ್ಷಿಸಲು ನೀವು ಮಾಡಬೇಕಾದುದು ಬಹಳವಿದೆ.

ನಿಮ್ಮ ಮನೆಯಲ್ಲಿ ಅಥವಾ ಕಾರಿನಲ್ಲಿ ಮಕ್ಕಳಿದ್ದರೂ ಸರಿ ಇಲ್ಲದಿದ್ದರೂ ಯಾರನ್ನೂ ಧೂಮಪಾನ ಮಾಡಲು ಬಿಡಬೇಡಿ. ನಿಮ್ಮ ಹಕ್ಕನ್ನು ಗೌರವಿಸಿ ಧೂಮಪಾನ ಮಾಡದಿರುವಂತೆ ಜನಗಳಿಗೆ ಸಭ್ಯತೆಯಿಂದ ವಿನಂತಿಸಿಕೊಳ್ಳಿ. ಹೊಗೆಯಿಂದ ಬರುವ ವಿಷವಸ್ತುಗಳನ್ನು ನೀವು ಕಾಣದಿದ್ದರೂ, ವಾಸನೆ ಇರದಿದ್ದರೂ ಅವು ಗಾಳಿಯಲ್ಲಿ ತೇಲಾಡುತ್ತಿರುತ್ತವೆ.

ನೀವು ಧೂಮಪಾನ ವ್ಯಸನಿಯಾದಲ್ಲಿ ಹೊರಗಡೆ ಅಥವಾ ಗ್ಯಾರೇಜ್‌ನಲ್ಲಿ ಸೇದಿ.

"ಉದಾಹರಣೆಗೆ, ಕೊಠಡಿಯಿಂದ ಹೊರಗಾಗಲೀ ಮಕ್ಕಳ ಪಾಲನ ಸ್ಥಳದಲ್ಲಾಗಲೀ ಸೇದದಿದ್ದರೆ ಸಾಲದು. ಧೂಮಪಾನ ಮಾಡುವ ಮತ್ತು ಮಾಡದಿರುವ ಸ್ಥಳಗಳೆಂದು ಪ್ರತ್ಯೇಕ ಮಾಡಿದರೆ ಕ್ಲೋರಿನ್ ಹಾಕಿದ ಮತ್ತು ಹಾಕದಿರುವ ಈಜುಕೊಳಗಳಷ್ಟೇ ವ್ಯತ್ಯಾಸವು ಎದ್ದು ಕಾಣುತ್ತದೆ." ಡಾ॥ ರೊನಾಲ್ಡ್ ಡೇವಿಸ್‌ರವರ ಹೇಳಿಕೆ.

"ಹೊಗೆಯು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಹರಿದು ಗಾಳಿಯು ಕಲುಷಿತವಾಗಿ ಅದೇ ಗಾಳಿಯು ಎಲ್ಲ ಕಡೆಯೂ ಪಸರಿಸುವುದರಿಂದ ಶಿಶುಗಳು ಮತ್ತು ಮಕ್ಕಳಿರುವ ಮನೆಯೊಳಗೆ ಖಂಡಿತವಾಗಿಯೂ ಧೂಮಪಾನ ಮಾಡಬಾರದು" ಡಾ॥ ಡೇವಿಸ್‌ರವರು ಕಟ್ಟುನಿಟ್ಟಾಗಿ ಹೇಳುತ್ತಾರೆ.

ನನ್ನ ವಿದ್ಯಾರ್ಜನೆ

ಬ್ರಿಗೇಡಿಯರ್ ಎಂ. ಎ. ಗೋಖಲೆ
ಮನೆ ನಂ. ೨೦೯, ಇ.ಎಸ್.ಐ. ಹಿಂಭಾಗ
ವೃಂದಾವನ ಬಡಾವಣೆ
ಮೈಸೂರು-೨೦

ಕಳೆದ ಅಕ್ಟೋಬರ್ ೯೬ರ 'ಪುಸ್ತಕ ಪ್ರಪಂಚ' ಸಂಚಿಕೆಯಲ್ಲಿ ಮಂಗಳೂರು, ಸರ್ಕಾರಿ ಕಾಲೇಜು ಹಾಗೂ ಮದರಾಸಿನ ಕ್ರಿಶ್ಚಿಯನ್ ಕಾಲೇಜುಗಳ ಶಿಕ್ಷಣದ ಹಿರಿಮೆ-ಗರಿಮೆಗಳ ಬಗ್ಗೆ, ಅವುಗಳಲ್ಲಿನ ಅಧ್ಯಾಪಕರು, ಅವರ ಬೋಧನಾಕ್ರಮ; ವಿದ್ಯಾರ್ಥಿ, ಅಧ್ಯಾಪಕರ ಗೌರವಪೂರ್ಣ; ಆರೋಗ್ಯಕರ ಸಂಬಂಧಗಳನ್ನು ತಿಳಿಸಿದ್ದೆ. ವಿದ್ಯಾರ್ಜನೆ ಒಂದು ಪವಿತ್ರ ಕರ್ತವ್ಯ. ವಿದ್ಯೆಯನ್ನು ಅವಿರತ ಶ್ರಮದಿಂದ ಗಳಿಸಿಕೊಂಡರೆ ಅದು ದಾರಿದೀಪವಾಗುವುದು.

೧೯೩೮ರಿಂದ ೧೯೪೪ರವರೆಗೆ ಮದರಾಸಿನ ಕ್ರಿಶ್ಚಿಯನ್ ಕಾಲೇಜಿನಲ್ಲಿ ನನ್ನ ವೈದ್ಯಕೀಯ ವ್ಯಾಸಂಗ. ಈಗಿನ ನಾಲ್ಕೂವರೆ ವರ್ಷದ ಎಂ.ಬಿ.ಬಿ.ಎಸ್ ಪದವಿಗೆ ತತ್ಸಮಾನವಾದ ಐದೂವರೆ ವರ್ಷದ ಪದವಿ ಅದು. ಅಂದಿನ ದಿನಗಳಲ್ಲಿ ವೈದ್ಯಕೀಯ ಶಿಕ್ಷಣ ಒಂದು ಕಾಲೇಜಿನಲ್ಲಿ ಕುಳಿತು ಕಲಿಯುವಂತಹದ್ದಲ್ಲ ಸಂಬಂಧಪಟ್ಟ ವಿಷಯಗಳನ್ನು ಬೇರೆ ಬೇರೆ ಆಸ್ಪತ್ರೆಗಳಿಗೆ ಭೇಟಿ ಕೊಟ್ಟು, ಪ್ರಾಯೋಗಿಕವಾಗಿ ಕಲಿಯಬೇಕಾಗಿತ್ತು. ವೈದ್ಯ ಶಿಕ್ಷಣದ ಕಲಿಕೆಗಾಗಿ ನಾವು, ಅಂದು ಹೋಗುತ್ತಿದ್ದ ಆಸ್ಪತ್ರೆಗಳ ವಿವರ ಹೀಗಿವೆ:

೧. ಕಣ್ಣಿನ ರೋಗಗಳು ಹಾಗೂ ಅವುಗಳ ಚಿಕಿತ್ಸೆ.	—'ಎಗ್ಮೋರ್'ನ ಕಣ್ಣಿನ ಆಸ್ಪತ್ರೆ.
೨ ಹೆಂಗಸರು, ಮಕ್ಕಳ ಖಾಯಿಲೆಗಳು ಮತ್ತು ಅವುಗಳಿಗೆ ಸಂಬಂಧಿಸಿದ ಚಿಕಿತ್ಸೆ.	—ಮದರಾಸಿನ ಹೆಂಗಸರ ಮತ್ತು ಮಕ್ಕಳ ಆಸ್ಪತ್ರೆ.
೩ ಮಾನಸಿಕ ಖಾಯಿಲೆ ಹಾಗೂ ಅದರ ನಿವಾರಣೆ.	—ಕಿಲ್‌ಪೋಕ್‌ನ ಮೆಂಟಲ್ ಆಸ್ಪತ್ರೆ.
೪ ಕ್ಷಯರೋಗ ಚಿಕಿತ್ಸೆ.	—ರಾಯಪೇಟೆಯ ಸ್ಯಾನಿಟೋರಿಯಂ.
೫ ಸಾಂಕ್ರಾಮಿಕ ರೋಗಗಳ ಚಿಕಿತ್ಸೆ.	—ಇದಕ್ಕೇ ಮೀಸಲಾದ ಪ್ರತ್ಯೇಕವಾದ ಆಸ್ಪತ್ರೆ.
೬ ಕುಷ್ಠರೋಗ.	—ಕುಷ್ಠರೋಗದ ಇನ್‌ಸ್ಟಿಟ್ಯೂಟ್.

ಇತ್ಯಾದಿ.

ಈ ಚಿಕಿತ್ಸಾಲಯಗಳು ಹಿಂದಿನ ಮದರಾಸ್ ನಗರದ ಬೇರೆ ಬೇರೆ ಪ್ರದೇಶಗಳಲ್ಲಿ ಇದ್ದುದರಿಂದ ವಿದ್ಯಾರ್ಥಿಗಳಾದ ನಾವು ಬೈಸಿಕಲ್‌ನಲ್ಲಿ, ಇಲ್ಲವೆ ಬಸ್ಸಿನಲ್ಲಿ ಹೋಗುತ್ತಿದ್ದೆವು, ಇಂದಿನಂತೆ ವೈದ್ಯಕೀಯ ಕಾಲೇಜಿನವರೆ ಒದಗಿಸುತ್ತಿರುವ ವಾಹನಗಳ ಸೌಕರ್ಯ ಅಂದು ಇರಲಿಲ್ಲ. ವೇಳಾಪಟ್ಟಿಯಂತೆ ನಮ್ಮ ಕಲಿಕೆಗೆ ಗೊತ್ತುಪಡಿಸಿದ ಆಸ್ಪತ್ರೆಗಳಿಗೆ, ನಾವುಗಳು ಬೆಳಗ್ಗೆ ಏಳೂವರೆ ಗಂಟೆಗೆ ಹೊರ ರೋಗಿಗಳ ವಿಭಾಗಕ್ಕೆ ಹೋಗಬೇಕಿತ್ತು. ಆ ಸಮಯಕ್ಕೆ ಸರಿಯಾಗಿ ನಮ್ಮ ಅಧ್ಯಾಪಕರು ಬರುತ್ತಿದ್ದರು. ಸಣ್ಣಪುಟ್ಟ ಶಸ್ತ್ರ ಚಿಕಿತ್ಸೆ ಮಾಡಬೇಕಾದರೆ, ಸಮೀಪದ ಆಪರೇಷನ್ ಥಿಯೇಟರ್‌ನಲ್ಲಿ ಶಸ್ತ್ರ ಕ್ರಿಯೆಯ ಕ್ರಮಗಳನ್ನು ಪ್ರಾಯೋಗಿಕವಾಗಿ ಕಲಿಸಿಕೊಡುತ್ತಿದ್ದರು.

ನಮ್ಮ ಕಾಲೇಜಿಗೆ ಆಗಾಗ ದೇಶ ವಿದೇಶಗಳ ಪ್ರಸಿದ್ಧ ತಜ್ಞರನ್ನು, ವಿಜ್ಞಾನಿಗಳನ್ನು ವಿಶೇಷೋಪನ್ಯಾಸಕ್ಕಾಗಿ ಆಮಂತ್ರಿಸಲಾಗುತ್ತಿತ್ತು. ೧೯೩೩ರಲ್ಲಿ ಜಗತ್ಪ್ರಸಿದ್ಧ ಭೌತ ವಿಜ್ಞಾನಿ ಸರ್. ಸಿ. ವಿ. ರಾಮನ್‌ರವರು ಆಗಮಿಸಿದ್ದರು. ರಾಮನ್‌ರವರ ಉಪನ್ಯಾಸಕ್ಕೂ ಮುನ್ನ ಉಪಹಾರದ ವ್ಯವಸ್ಥೆ ಮಾಡಲಾಗಿತ್ತು. ಕಾಲೇಜಿನ ವಿದ್ಯಾರ್ಥಿ ಕಾರ್ಯದರ್ಶಿಯಾದ ನನಗೂ ಉಪಹಾರದ ಆತಿಥ್ಯ. ಆ ಸಮಯದಲ್ಲಿ ಸಿ. ವಿ. ರಾಮನ್‌ರವರ ಎಡ ಭಾಗದಲ್ಲಿ ನಾನು, ಬಲಭಾಗದಲ್ಲಿ ಕಾಲೇಜಿನ ಪ್ರಿನ್ಸಿಪಾಲರಾದ ಡಾ|| ತಿರುಮೂರ್ತಿ ಆಸೀನರಾಗಿದ್ದೆವು. ತರುಣ ಹರೆಯದ ನನಗೆ ಜಗತ್ಪ್ರಸಿದ್ಧ ವಿಜ್ಞಾನಿ ಸರ್. ಸಿ. ವಿ. ರಾಮನ್ ಜತೆ ಉಪಹಾರ ಸ್ವೀಕರಿಸುವ ಅವಕಾಶ ಒದಗಿದ್ದು ಒಂದು ಪುಣ್ಯ ವಿಶೇಷ. ಇಂಥ ಸುವರ್ಣ ಸಂದರ್ಭವನ್ನು ಇಂದಿನಂತೆ ಚಿತ್ರೀಕರಿಸಿ, ಮಾಧ್ಯಮಗಳಿಗೆ, ಪತ್ರಿಕೆಗಳಿಗೆ ಕಳುಹಿಸಿ ಪ್ರಚಾರ ಪಡೆಯುವ ಗೀಳು ಇರಲಿಲ್ಲ; ಆಗಿದ್ದಲ್ಲಿ ಇನ್ನಷ್ಟು ಪ್ರಸಿದ್ಧ ನನ್ನದಾಗುತ್ತಿತ್ತು.

ಆ ದಿನದ ರಾಮನ್‌ರವರ ಭಾಷಣದ ವಿಷಯ "ಕ್ರಿಸ್ಟಲ್ಲ್ಯಾಡ್ಸ್ ಅಂಡ್ ಕೊಲ್ಲ್ಯಾಡ್ಸ್" (ಸ್ಫಟಿಕದಂಥ ವಸ್ತುಗಳು ಹಾಗೂ ಸ್ಫಟಿಕೇತರ ವಸ್ತುಗಳು.) ಪ್ರಿನ್ಸಿಪಾಲರಾದ ಡಾ|| ತಿರುಮೂರ್ತಿಯವರು ಪ್ರಾಸ್ತಾವಿಕವಾಗಿ ಕಾರ್ಯಕ್ರಮವನ್ನು ಹೀಗೆ ಪರಿಚಯ ಮಾಡಿಕೊಟ್ಟರು.

"ನಾವು ಇಂದಿನ ಕಾರ್ಯಕ್ರಮಕ್ಕೆ ಬರುವ ಪೂರ್ವದಲ್ಲಿ ಕಾಫಿ ಕುಡಿದೆವು, ಕಾಫಿಯಲ್ಲಿ ಸೇರಿದ ಸಕ್ಕರೆ ಒಂದು ಕ್ರಿಸ್ಟಲ್ಲ್ಯಾಡ್ ಮತ್ತು 'ಕಾಫಿಪುಡಿ' ಒಂದು ಕೊಲ್ಲ್ಯಾಡ್, ಈ ಎರಡು ವಿಷಯಗಳ ಬಗ್ಗೆ ನನ್ನ ಅರಿವು ಸೀಮಿತವಾದುದು" ಎಂದು ಇದರ ಬಗ್ಗೆ ವಿಸ್ತೃತವಾಗಿ ರಾಮನ್‌ರವರನ್ನು ಉಪನ್ಯಾಸ ಮಾಡಲು ನಮ್ರವಾಗಿ ವಿನಂತಿಸಿಕೊಂಡರು. ಪ್ರಾಚಾರ್ಯರಾದ ಡಾ|| ತಿರುಮೂರ್ತಿಯವರ ಸಮಯ ಪ್ರಜ್ಞೆ ಔಚಿತ್ಯ ಪೂರ್ಣವಾದದ್ದು.

ಇನ್ನು ಡಾ|| ರಾಮನ್‌ರವರ ಉಪನ್ಯಾಸದ ಬಗ್ಗೆ ಹೇಳಬೇಕೆ? "ಗಗನಂ ಗಗನಾಕಾರಂ, ಸಾಗರಃ ಸಾಗರೋಪಮಂ" ಎನ್ನುವಂತೆ, ಭಾಷಣದುದ್ದಕ್ಕೂ ವಿಷಯ ನಿರೂಪಣೆಗೆ ಬಳಸುತ್ತಿದ್ದ ಉಪಮೆ, ರೂಪಕ, ನುಡಿಗಟ್ಟು ಅಪೂರ್ವವಾದವುಗಳು. ಉಪನ್ಯಾಸ ಮುಗಿದನಂತರ

ವಂದನಾರ್ಪಣೆ ಸಲ್ಲಿಸುವ ಕಾರ್ಯ ನನ್ನದಾಗಿತ್ತು. ಈ ಅವಕಾಶ ದೊರಕಿದ್ದು ನನ್ನ ಸೌಭಾಗ್ಯ.

ನಮ್ಮ ಅಧ್ಯಾಪಕ ವೃಂದದಲ್ಲಿ ಆಂಗ್ಲರೂ ಇದ್ದರು, ಕರ್ನಲ್ ಸ್ಟ್ಯಾಟ್, ಮೇಜರ್ ಥಾಮಸ್, ಕರ್ನಲ್ ಮೆಕ್ರೊಬರ್ಟ್ಸ್. ಅವರೆಲ್ಲ ಆಂಗ್ಲರಾದರೂ ನಮ್ಮ ದೇಶದ ಅಧ್ಯಾಪಕರೊಂದಿಗೆ ಸೌಹಾರ್ದದಿಂದ ನಡೆದುಕೊಳ್ಳುತ್ತಿದ್ದರು. ಗುಲಾಮಗಿರಿಯ ಸೋಂಕು ಅವರಿಗಿರಲಿಲ್ಲ.

ನಮ್ಮ ಕಾಲೇಜಿನಲ್ಲಿ, ವೈದ್ಯಕೀಯ ಶಾಸ್ತ್ರದ ಕಲಿಕೆಗೆ, ಸಂಬಂಧಿಸಿದ ಒಂದು ವಿಷಯ ಸ್ಮರಣೀಯ. ಪರೀಕ್ಷೆಯ ಪೂರ್ವದ ಎರಡು ತಿಂಗಳಲ್ಲಿ ವಿಶೇಷ ತರಬೇತಿ, ಬೆಳಗ್ಗೆಯಿಂದ ಸಂಜೆಯವರೆಗೆ ಕಲಿಕೆಯಿಂದ ದಣಿವಳಿದ ವಿದ್ಯಾರ್ಥಿಗಳಿಗೆ ಸಂಜೆ ೫ರಿಂದ ೭ರವರೆಗೆ ವಿಶೇಷ ತರಗತಿಗಳು, ವಿದ್ಯಾರ್ಥಿಗಳಿಂದ ಸೇವಕನವರೆಗೆ ಪ್ರಾಧ್ಯಾಪಕರ ಖರ್ಚಿನಲ್ಲಿ ಕಾಫಿ ಸೇವಾರ್ಥ! ವಿಶೇಷ ತರಗತಿಯಲ್ಲಿ, ಪರೀಕ್ಷೆಯ ಮಾದರಿ ಪ್ರಶ್ನೆಗಳು; ಉತ್ತರಿಸುವ ವಿಧಾನಗಳು, ಔಚಿತ್ಯವರಿತು ವರ್ತಿಸುವ ರೀತಿ ನೀತಿಗಳನ್ನು ತಿಳಿಸಿಕೊಡುತ್ತಿದ್ದರು. ಮೌಖಿಕ ಪರೀಕ್ಷೆಗಳಲ್ಲಿ ವಹಿಸಬೇಕಾದ ಎಚ್ಚರ. ಇವುಗಳನ್ನು ಚಿಕಿತ್ಸಕ ದೃಷ್ಟಿಯಿಂದ ಪರಿಶೀಲಿಸಿ ಸಲಹೆ ಕೊಡುತ್ತಿದ್ದರು. ಇಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿಯ ಜ್ಞಾನದ ಮಟ್ಟವನ್ನು ಪರಿಕ್ಷಿಸಿ ಸೂಕ್ತ ಮಾರ್ಗದರ್ಶನ ನೀಡುತ್ತಿದ್ದರು. 'ಡು ನಾಟ್ ಬೀಟ್ ಎಬೌಟ್ ದಿ ಬುಷ್' ಎನ್ನುವುದನ್ನು ನೆನಪಿಗೆ ತಂದುಕೊಡುತ್ತಿತ್ತು. ಮೌಖಿಕ ಪರೀಕ್ಷೆಯಲ್ಲಿ ಕರ್ನಲ್ ಮೆಕ್‌ರಾಬರ್ಟ್ಸ್, ಡಾ|| ದಿನಕರ್ ರಾವ್, ಡಾ|| ಎಂ. ಜಿ. ಕಿಣಿ; ಡಾ|| ರಾಘವಚಾರಿ, ಡಾ|| ಪಾರುಕುಟ್ಟಿ ರಾಮನ್ ಮುಂತಾದವರು ಕೇಳುತ್ತಿದ್ದ ಪ್ರಶ್ನೆಗಳು ತುಂಬಾ ಚೇತೋಹಾರಿಯಾಗಿ ತೃಪ್ತಿಕೊಡುತ್ತಿದ್ದವು. ವಿದ್ಯಾರ್ಥಿಗಳು, ಶಾಸ್ತ್ರೀಯ, ಪ್ರಾಯೋಗಿಕ ಹಾಗೂ ಚಿಕಿತ್ಸೆಗೆ ಸಂಬಂಧಿಸಿದ ವಿಷಯ, ಪರೀಕ್ಷೆಗಳಲ್ಲಿ ಉತ್ತಮ ಅಂಕಗಳನ್ನು ಪಡೆದಿದ್ದರೆ, 'ಮೌಖಿಕ' ಪರೀಕ್ಷೆಯಲ್ಲಿ ಸುಲಭವಾಗಿ ಉತ್ತೀರ್ಣರಾಗಬಹುದಿತ್ತು, ಅಂದಿನ ಎಂ.ಬಿ.ಬಿ.ಎಸ್ ಪ್ರಸ್ತುತದ ಎಂ.ಡಿ.ಗೆ ಸಮಾನವಾದುದು ಎಂದು ಕೆಲವು ಪ್ರಾಧ್ಯಾಪಕರು ಹೇಳುವುದನ್ನು ನಾನು ಕೇಳಿದ್ದೇನೆ. ಈ ಮಟ್ಟದ ಶಿಕ್ಷಣವನ್ನು ಮದರಾಸು, ಮುಂಬಯಿ ಮತ್ತು ಕಲ್ಕತ್ತ ವಿಶ್ವವಿದ್ಯಾನಿಲಯಗಳು ನೀಡುತ್ತಿದ್ದವು.

ವಿದ್ಯಾರ್ಥಿ ಜೀವನದ ಒಂದೆರಡು ಘಟನೆಗಳು ನನ್ನ ಸ್ಮೃತಿಪಟಲದಲ್ಲಿವೆ. ನನಗೆ ನೆನಪಿರುವಂತೆ ಕೀಲ್‌ಪೋಕ್‌ನ ಮಾನಸಿಕ ಆಸ್ಪತ್ರೆಯಲ್ಲಿನ ಮುಖ್ಯದ್ವಾರ ಸದಾ ಮುಚ್ಚಿರುತ್ತಿತ್ತು. ಅದನ್ನು ತೆರೆಯಲು ಸಾಧಾರಣವಾಗಿ ಗುಣಮುಖರಾದ ರೋಗಿಗಳನ್ನು ನೇಮಕ ಮಾಡುತ್ತಿದ್ದರು. ಒಂದು ದಿನ ಆಸ್ಪತ್ರೆಯ ಅಧೀಕ್ಷಕರಾದ ಡಾ|| ವೆಂಕಟಸುಬ್ಬರಾವ್ ಅವರು ಮುಖ್ಯ ದ್ವಾರದ ಹೊರಗಿನಿಂದ ಬಂದು ಗೇಟ್ ತೆರೆಯಲು ಕೋರಿದರು. ಆ ಸಂದರ್ಭದಲ್ಲಿ ನಡೆದ ಸಂಭಾಷಣೆ ಹೀಗಿದೆ.

ಕಾವಲುಗಾರ :—ಯಾರು ನೀವು ?

ಡಾ|| ವಿ. ರಾವ್ :—ನನ್ನ ಹೆಸರು ಡಾ|| ವೆಂಕಟಸುಬ್ಬರಾವ್. ಈ ಆಸ್ಪತ್ರೆಯ ಅಧೀಕ್ಷಕ.

ಕಾವಲುಗಾರ:—ಈ ಆಸ್ಪತ್ರೆಗೆ ಬರುವ ರೋಗಿಗಳು ಅನೇಕರು ಇದೇ ರೀತಿ ಹೇಳಿ ಒಳ ನುಗ್ಗುತ್ತಾರೆ, ನಾನು ಬಾಗಿಲು ತೆರೆಯುವುದಿಲ್ಲ. ನಂತರ ವೆಂಕಟಸುಬ್ಬರಾಯರು ವಿಧಿ ಇಲ್ಲದೆ ಆಫೀಸಿಗೆ ಫೋನ್ ಮಾಡಿ ಡಾಕ್ಟರ್ ಕರೆಯಿಸಿ ಆಸ್ಪತ್ರೆ ಒಳಗೆ ಹೋಗಬೇಕಾಯಿತು.

ಮತ್ತೊಂದು ಸಂದರ್ಭ, ೧೯೪೩ ರಲ್ಲಿ ಹೆರಿಗೆ ಆಸ್ಪತ್ರೆಯಲ್ಲಿ ನನಗೆ ರಾತ್ರಿ ಕರ್ತವ್ಯ. ಹಿರಿಯ ವಿದ್ಯಾರ್ಥಿಯಾದ ನಾನೇ ವೈದ್ಯ. ಎಲ್ಲ ಹೆರಿಗೆ ಪ್ರಕರಣಗಳನ್ನು ಎಚ್ಚರವಿದ್ದು ಪರಿಶೀಲಿಸಬೇಕು. ಒಂದು ದಿನ ನಡುರಾತ್ರಿ ೨-೩೦ರ ಸಮಯದಲ್ಲಿ ಹೆಂಗಸೊಬ್ಬಳು ಪ್ರಸವ ವೇದನೆಯಿಂದ ನರಳುತ್ತಿದ್ದಳು, ಪರೀಕ್ಷಿಸಲು ಜನನಾಂಗದಲ್ಲಿ ಮಗುವಿನ ಪೃಷ್ಠ ಕಾಣುತ್ತಿತ್ತು. ಹೆರಿಗೆಯಾಗುತ್ತಿಲ್ಲ. ಮಗುವಿನ ತಲೆ ದೊಡ್ಡದಿರುವುದು ಎಕ್ಸ್‌ರೇಯ ಪರಿಶೀಲನೆಯಿಂದ ತಿಳಿದು ಬಂತು. ತೆಂಗಿನಕಾಯಿ ಗಾತ್ರದ ದೊಡ್ಡ ತಲೆ! ಮಗುವಿನ ಹೃದಯದ ಮಿಡಿತ ನಿಂತುಹೋಗಿದೆ. ಹೆರಿಗೆಯಾಗುವುದು ಅಸಂಭವ, ತುರ್ತು ಶಸ್ತ್ರಚಿಕಿತ್ಸೆಯಾಗಬೇಕು; ಇಲ್ಲವಿದ್ದರೆ ತಾಯಿಯ ಮರಣ ಶತಸಿದ್ಧ. ನಮ್ಮ ವೈದ್ಯಕೀಯ ಅಧೀಕ್ಷಕರು ನನಗೆ ಬೋಧಕರು ಆದ ಶ್ರೀಮತಿ ಡಾ|| ಪಾರುಕುಟ್ಟಿರಾಮನ್‌ರವರನ್ನು ಆಸ್ಪತ್ರೆಯ ಆವರಣದಲ್ಲಿದ್ದ ಅವರ ಮನೆಯಲ್ಲಿ ರಾತ್ರಿ ೩ ಗಂಟೆ ಸಮಯದಲ್ಲಿ ಎಚ್ಚರಿಸಿ ಕರೆದು ತಂದೆ. ಡಾ|| ರಾಮನ್ ಪರೀಕ್ಷಿಸಿ; ಕಪಾಲಕ್ಕೆ ರಂಧ್ರ ಕೊರೆದು, ಮೆದುಳನ್ನು ಬೇರ್ಪಡಿಸಿ ಅನಂತರ ಮಗುವನ್ನು ಹೊರ ತೆಗೆಯಲಾಯಿತು; ತಾಯಿಯ ಜೀವ ಉಳಿಯಿತು. ಮಗು ಮುಂಚೆಯೇ ಸತ್ತಿತ್ತು. ನನ್ನ ಮುಂಜಾಗ್ರತೆಯ ಬಗ್ಗೆ ಡಾ|| ರಾಮನ್ ಮೆಚ್ಚಿಗೆ ವ್ಯಕ್ತಪಡಿಸಿದರು; ಮತ್ತು ಈ ಕೇಸಿನ ಪೂರ್ಣ ವರದಿ ತಯಾರಿಸಿಡುವಂತೆ ಸೂಚಿಸಿ; ಪ್ರಸವ ಶಾಸ್ತ್ರದಲ್ಲಿ ಬಹು ಮುಖ್ಯ ವಿಷಯವಾದ ಪ್ರೆಸೆನ್‌ಟೇಷನ್ ಬಗ್ಗೆ ಅಧ್ಯಯನ ನಡೆಸಲು ತಿಳಿಸಿ, ಈ ಕುರಿತು ಎದುರಾಗುವ ಸಮಸ್ಯೆಗಳ ಬಗ್ಗೆ ವಿಚಾರ ವಿನಿಮಯಕ್ಕೆ ಡಾ|| ಪಾರುಕುಟ್ಟಿರಾಮನ್ ಆಹ್ವಾನಿಸಿದರು.

ಸರ್ ಆರ್ಕಾಟ್ ಲಕ್ಷ್ಮಣಸ್ವಾಮಿ ಮೊದಲಿಯಾರ್‌ರವರು ಖ್ಯಾತ ಪ್ರಸೂತಿ ತಜ್ಞರು, ಮದರಾಸು ವಿಶ್ವವಿದ್ಯಾನಿಲಯದ ಉಪಕುಲಪತಿಗಳು ಆಗಿದ್ದವರು; ೧೯೪೩-೪೪ರ ಅವಧಿಯಲ್ಲಿ ನಮಗೆ ಪ್ರಸೂತಿ ಶಾಸ್ತ್ರದ ಪ್ರಾಧ್ಯಾಪಕರಾಗಿದ್ದರು. ಮದರಾಸಿನ ಎಗ್ಮೋರ್ ಹೆಂಗಸರ ಆಸ್ಪತ್ರೆಯಲ್ಲಿ ಡಾ|| ಮೊದಲಿಯಾರ್‌ರವರು ವೈದ್ಯರು. ಆ ಆಸ್ಪತ್ರೆ ೩೫೦೦ ಹಾಸಿಗೆಯಲ್ಲಿನ ರೋಗಿಗಳಿಗೆ ಒದಗಬಹುದಾದ ಚಿಕಿತ್ಸಾ ಸೌಲಭ್ಯಗಳನ್ನು ಹೊಂದಿತ್ತು. ಒಂದು ದಿನ ಡಾ|| ಮೊದಲಿಯಾರ್, ವಿದ್ಯಾರ್ಥಿಗಳನ್ನು ಮುಂಜಾನೆ ೮ ಗಂಟೆಗೆ ಕರೆಸಿದರು. ಪರೀಕ್ಷೆ ಮಾಡುವ ಮೇಜಿನ ಮೇಲೆ ಒರ್ವ ಗರ್ಭಿಣಿ ಮಲಗಿದ್ದಾಳೆ. ಪ್ರಸವ ಶಾಸ್ತ್ರವನ್ನು ಓದಿಕೊಂಡ ನಮಗೆ ಕೆಲವು ಪ್ರಶ್ನೆಗಳನ್ನು ಕೇಳಿದರು. ನಮ್ಮ ಉತ್ತರಗಳು ಅವರಿಗೆ ತೃಪ್ತಿತಂದಂತಾಗಲಿಲ್ಲ. ಈಗ ರೋಗಿಯನ್ನು ಪರೀಕ್ಷಿಸುವ ವಿಧಾನಗಳ ಬಗ್ಗೆ ಚರ್ಚೆ ಆರಂಭಿಸಿದರು.

ಪ್ರಥಮವಾಗಿ ಕು|| 'ಅ'ಳನ್ನು ಕರೆದರು. ಆಕೆ ರೋಗಿಯನ್ನು ಪರೀಕ್ಷಿಸಿದನಂತರ ಕು|| 'ಬ'ಳನ್ನು ಕರೆದರು. 'ಬ' ಪರೀಕ್ಷಿಸಿದ ಮೇಲೆ, ಡಾ|| ಮೊದಲಿಯಾರ್ ಒಟ್ಟು ಅನುಭವವನ್ನು ಹೀಗೆ ನಿರೂಪಿಸಿದರು.

"ಈ ಇಬ್ಬರೂ ವಿದ್ಯಾರ್ಥಿನಿಯರು ಗರ್ಭಿಣಿಯನ್ನು ಹೇಗೆ ಪರೀಕ್ಷೆ ಮಾಡಬಾರದು ಎಂಬುದನ್ನು ತೋರಿಸಿಕೊಟ್ಟಿದ್ದಾರೆ. ಸರಿಯಾದ ಕ್ರಮವನ್ನು ನಾನು ಈಗ ತೋರಿಸುತ್ತೇನೆ" ಎಂದು ತಿಳಿಸಿ ೪೦ ನಿಮಿಷ ಪಾಠ ಮಾಡಿದರು. ಡಾ|| ಮೊದಲಿಯಾರ್‌ರವರ ಪಾಂಡಿತ್ಯಪೂರ್ಣ ಬೋಧನಾಕ್ರಮ ವಿದ್ಯಾರ್ಥಿಗಳಿಗೆ ಚೈತನ್ಯಪೂರ್ಣವಾದುದು. ಕಲಿಸುವ ಕಲೆಯಲ್ಲಿ ಅವರು ಅಗ್ರಗಣ್ಯರು, ಬ್ರಿಟೀಷರು ನಮ್ಮನ್ನು ಆಳುವ ಸಂದರ್ಭದಲ್ಲಿ; ಆಂಗ್ಲ ವೈದ್ಯರಾದ ಮೇಜರ್ ಥಾಮಸ್‌ರವರು, ಡಾ|| ಮೊದಲಿಯಾರ್‌ರವರ ಸಹಾಯಕರಾಗಿ ದುಡಿಯುತ್ತಿದ್ದರು.

ವೈದ್ಯಕೀಯ ಶಿಕ್ಷಣದಲ್ಲಿ ರೋಗಗಳನ್ನು ಪತ್ತೆಮಾಡಿ, [illegible] ಚಿಕಿತ್ಸೆ ನೀಡಿ ಶಾಶ್ವತ ಊನದಿಂದ ತಪ್ಪಿಸುವುದು ಮಹತ್ವದ ಮಜಲು. ಒಮ್ಮೆ ಆಸ್ಪತ್ರೆಗೆ ಹೆಣ್ಣುಮಗಳೊಬ್ಬಳು ತನ್ನ ಒಂದು ವರ್ಷದ ಕಂದನೊಂದಿಗೆ ಬಂದಳು. ಆ ಗಂಡು ಮಗುವಿಗೆ ಎರಡೂ ಕಾಲುಗಳು 'ಸೊಟ್ಟಡಿ'ಯಾಗಿದ್ದವು. ಈ ರೀತಿಯ 'ತಿರುಚುಪಾದ' ಹುಟ್ಟಿನಿಂದ ಬರುವ ಒಂದು ಕಾಯಿಲೆ. ನಮ್ಮ ಪ್ರಾಧ್ಯಾಪಕರಾದ ಡಾ|| ಕಿಣಿಯವರು, ಮಗುವಿನ ತಾಯಿಯನ್ನು ಪ್ರಶ್ನಿಸಿ ಮಾಹಿತಿ ಪಡೆದು, ಈ ರೋಗದ ಬಗ್ಗೆ ಒಂದು ಉಪನ್ಯಾಸ ನೀಡಿದರು; ಎಕ್ಸ್-ರೇ ತೆಗೆಸಿ ಪರಿಶೀಲಿಸಿದನಂತರ, ಅರಿವಳಿಕೆ ನೀಡಿ, ಚಿಕಿತ್ಸೆಯಲ್ಲಿ ಕೃತಕ ಅಂಗ ಅಳವಡಿಸಿ, ಮಗುವಿನ ಕಾಲಿನ ವಿಕೃತಿಯನ್ನು ಸರಿಪಡಿಸಲು ಪ್ಲಾಸ್ಟರ್ ಹಾಕಿದರು. ಮಗುವಿನ ತಾಯಿಗೆ ಯೋಗ್ಯವಾದ ಸಲಹೆಕೊಟ್ಟು, ೬ ವಾರಗಳನಂತರ ಮಗುವನ್ನು ಕರೆದು ತರುವಂತೆ ಹೇಳಿದರು. ವಿದ್ಯಾರ್ಥಿಗಳ ಸಮ್ಮುಖದಲ್ಲಿ ನಡೆದ ಚಿಕಿತ್ಸೆಯನ್ನು ಕುರಿತಂತೆ 'ಟೆಲಿಪಿಸ್' ಎಂಬ ವಿಷಯದ ಬಗ್ಗೆ ಅಧ್ಯಯನ ಮಾಡುವಂತೆ ತಿಳಿಸಿದರು. ಡಾ|| ಕಿಣಿಯವರು ನಡೆಸಿಕೊಟ್ಟ 'ಮೆನಿಪ್ಯುಲೇಶನ್' ಚಿಕಿತ್ಸೆಯ ವಿವರಗಳ ಟಿಪ್ಪಣಿ ಸಿದ್ಧಪಡಿಸಲು ಸೂಚಿಸಿ ಈ ಬಗ್ಗೆ ಗುಂಪು ಚರ್ಚೆಗೆ ವಿದ್ಯಾರ್ಥಿಗಳನ್ನು ಆಮಂತ್ರಿಸಿದರು. ಅಂದಿನ ದಿನಗಳಲ್ಲಿ ವೈದ್ಯಕೀಯ ಶಿಕ್ಷಣ ಪ್ರಾಯೋಗಿಕವಾದದ್ದು, ಚಿಕಿತ್ಸಕ ಬುದ್ಧಿ ಅಕ್ಷಯವಾದುದು ಎಂಬುದನ್ನು ನಾನು ಮತ್ತೆ ಪ್ರಸ್ತಾಪಿಸಬೇಕಾಗಿಲ್ಲ.

ಅಧ್ಯಾಪಕ ವೃತ್ತಿ ಬಹಳ ಪವಿತ್ರವಾದದ್ದು, ಅದರಲ್ಲೂ ವೈದ್ಯಕೀಯ ಶಿಕ್ಷಣದಲ್ಲಿ ಶಿಕ್ಷಕರ ಜ್ಞಾನ, ಕೌಶಲ್ಯಗಳು ಬಹಳ ಜವಾಬ್ದಾರಿಯುತ. ಜ್ಞಾನದಲ್ಲಿ ಸೂರ್ಯನಂತೆ ಪ್ರಕಾಶನೂ, ಶಶಿಯಂತೆ ಶಾಂತನೂ, ದೇವಗುರು ಬೃಹಸ್ಪತಿಯಂತೆ ಪ್ರಾಜ್ಞನೂ, ಶಿಲ್ಪಿಯಂತೆ ಕಲಾಚಾತುರ್ಯನೂ ಆಗಿರಬೇಕು.

ಸುಂದರ ಮನೆಗೆ ೩೫ ಸೂತ್ರಗಳು

ಜಿ. ಕುಮಾರಪ್ಪ
ಸಹಾಯಕ ಮಾಹಿತಿ ಅಧಿಕಾರಿ
ರಾಷ್ಟ್ರೀಯ ಗ್ರಂಥಾಲಯ
(ಕನ್ನಡ ವಿಭಾಗ)
ಕಲ್ಕತ್ತ-೭೦೦೦೨೭

ಪ್ರಶ್ನೆ—೧. ಮನೆಯನ್ನು ಉತ್ತಮಗೊಳಿಸುವುದನ್ನು ಹೇಗೆ ಆರಂಭಿಸಬೇಕು?

ನಿಮ್ಮ ಮನೆಯ ಒಳಗೆ ಮತ್ತು ಹೊರಗೆ ಉತ್ತಮಗೊಳಿಸಬೇಕಾದ ಅಂಶಗಳನ್ನು ಕುರಿತು ಯೋಚಿಸಿರಿ. ಅನಂತರ ಅವುಗಳನ್ನು ಮುಂದಿನ ಮೂರು ವರ್ಗಗಳಲ್ಲಿ ಹೀಗೆ ವಿಭಾಗಿಸಿರಿ.

(i) ಬದಲಾವಣೆ
(ii) ದುರಸ್ತಿ
(iii) ಅಭಿವೃದ್ಧಿ ಅಥವಾ ಉತ್ತಮಗೊಳಿಸುವಿಕೆ.

ಬದಲಾವಣೆ ಎಂದರೆ ನಿಮ್ಮ ಮನೆಯಲ್ಲಿ ಈಗಾಗಲೇ ಇರುವ ವಸ್ತುಗಳಲ್ಲಿ ಏನನ್ನು ತೆಗೆದುಹಾಕಿ ಬೇರೆಯದನ್ನು ಕೊಳ್ಳಬೇಕೆಂದು ಯೋಚಿಸುತ್ತೀರೋ ಅದು; ದುರಸ್ತಿಯೆಂದರೆ ಕೆಟ್ಟಿರುವ ಸ್ವಿಚ್, ಸೋರುತ್ತಿರುವ ಛಾವಣಿ ಇತ್ಯಾದಿಗಳು. ಇರುವ ವಸ್ತುಗಳನ್ನೇ ದುರಸ್ತಿಗೊಳಿಸುವುದು; ಅಭಿವೃದ್ಧಿ ಅಥವಾ ಉತ್ತಮಗೊಳಿಸುವಿಕೆ ಎಂದರೆ, ನೀವು ಮನೆಗೆ ಹೊಸದಾಗಿ ಸೇರಿಸುವ ಅಂಶಗಳು. ಉದಾಹರಣೆಗೆ ಹೊಸದಾಗಿ ಬಣ್ಣ ಮಾಡಿಸುವುದು ಇತ್ಯಾದಿ.

ಇದಕ್ಕಾಗಿ ನೀವು ಮನೆಯಲ್ಲಿ ಇತರರ ಅಭಿಪ್ರಾಯ ಪಡೆಯಬೇಕಾಗಬಹುದು. ಅಡುಗೆ ಮನೆಯಲ್ಲಿ ಬಹಳ ಬಿಸಿ ಎಂದು ನಿಮ್ಮ ತಾಯಿ ಗೊಣಗುಟ್ಟುತ್ತಿರಬಹುದು; ಪಾತ್ರಸಾಧನಗಳನ್ನು ಇರಿಸಿರುವ ಹಲಗೆಯ ಪಟ್ಟಿ ಕೈಗೆಟುಕುತ್ತಿಲ್ಲ ಎಂದು ನಿಮ್ಮ ಪುಟ್ಟ ಮಗಳು ಹೇಳುತ್ತಿರಬಹುದು—ಇವೆಲ್ಲವುಗಳ ಪಟ್ಟಿ ಮಾಡಿದ ಮೇಲೆ ಅವುಗಳಲ್ಲಿ ಕೂಡಲೇ ಗಮನಹರಿಸಬೇಕಾದವುಗಳ ಬಗ್ಗೆ ಚಿಂತಿಸಿ. ಇವುಗಳಲ್ಲೆಲ್ಲ ದುರಸ್ತಿ ಮಾಡಬೇಕಾದ ವಿಚಾರಗಳನ್ನು ಮಾತ್ರ ಮುಂದೂಡಬೇಡಿ. ಹೀಗೆ ಮುಂದೂಡುವುದೆಂದರೆ ಅಪಾಯಕ್ಕೆ ಆಹ್ವಾನ ಕೊಟ್ಟಂತೆಯೇ.

೧೯೯೬ರ ಅಕ್ಟೋಬರ್‌ನ 'ರೀಡರ್ಸ್ ಡೈಜೆಸ್ಟ್' ಮಾಸಪತ್ರಿಕೆಯಲ್ಲಿ ಪ್ರಕಟವಾದ "೩೫ ಸ್ಟೆಪ್ಸ್ ಟು ಎ ಬೆಟರ್ ಹೋಂ" ಎನ್ನುವ ಲೇಖನದ ಸಂಗ್ರಹಾನುವಾದ

೨. ಮನೆಯಲ್ಲಿ ವಿವಿಧ ವಿನ್ಯಾಸ ಇರುವ ನೆಲಹಾಸನ್ನು ಬಳಸಲೇ?

ಇದು ನಿಮ್ಮ ಅಭಿರುಚಿಯನ್ನು ಅವಲಂಬಿಸಿದೆ. ವಿನ್ಯಾಸ ಇಲ್ಲದ ನೆಲಹಾಸಾದರೆ ಅದರ ಮೇಲೆ ಬೀಳುವ ಧೂಳು ಎದ್ದು ಕಾಣುತ್ತದೆ. ಇಂಥ ಹುಗಳೇ ಬೇಕೆಂದರೆ ತಿಳಿಯಾದ ಬಣ್ಣದ ನೆಲಹಾಸನ್ನು ಕೊಳ್ಳಿರಿ. ನೆಲಹಾಸನ್ನು ಪದೇ ಪದೆ ಬದಲಾಯಿಸಲು ಸಾಧ್ಯವಿಲ್ಲ. ಆದುದರಿಂದ ಇವುಗಳನ್ನು ಎಚ್ಚರಿಕೆಯಿಂದ ಆಯ್ಕೆ ಮಾಡಿರಿ.

೩. ವಿನೈಲ್ ಟೈಲ್‌ಗಳು ನಿಜಕ್ಕೂ ನೀರು ನಿರೋಧಕವೇ? ಮತ್ತು ಅವು ಹೆಚ್ಚು ಕಾಲ ಬಾಳಿಕೆ ಬರುತ್ತವೆಯೇ?

ವಿನೈಲ್ ಟೈಲ್‌ಗಳು ನೀರು ನಿರೋಧಕವೇನೊ ಹೌದು. ಆದರೆ ಹೆಚ್ಚು ನೀರು ಬೀಳದ ಜಾಗಗಳಿಗೆ ಅವು ಸೂಕ್ತ. ಉದಾಹರಣೆಗೆ ಅಡುಗೆ ಮನೆ. ಆದರೆ ಸ್ನಾನದ ಮನೆಗೆ ಬೇಡ. ಇವು ಹೆಚ್ಚು ಕಾಲ ಬಾಳಿಕೆ ಬರುತ್ತವೆ. ಅಲ್ಲದೆ ಹಾಳಾದ ಟೈಲ್‌ಗಳನ್ನು ಇತರ ಟೈಲ್‌ಗಳಿಗೆ ಹಾನಿಮಾಡದೆ ಬದಲಾಯಿಸಬಹುದು.

೪. ನಯವಾದ ನೆಲಹಾಸು ಬಿಲ್ಲೆಗಳು ಬಚ್ಚಲು ಮನೆಗೆ ಸೂಕ್ತವೇ?

ಇಲ್ಲ. ಇವು ಬಹಳ ನಯವಾಗಿರುವುದರಿಂದ ಜಾರಿ ಬೀಳುವ ಸಂಭವ ಇರುತ್ತದೆ. ಜಾರಿಕೆ ಇಲ್ಲದ ಬಿಲ್ಲೆಗಳನ್ನು ಬಳಸಿ. ಆದರೆ ನಯವಾದ ಬಿಲ್ಲೆಗಳನ್ನು ಬಚ್ಚಲು ಗೋಡೆಗಳಿಗೆ ಬಳಸಬಹುದು.

೫. ನೆಲಕ್ಕೆ ನೆಲಗಂಬಳಿ ಹಾಸಬಹುದೆ?

ಒಳ್ಳೆಯದೇ. ನೆಲಗಂಬಳಿ ಇದ್ದರೆ ಪುಟ್ಟ ಮಕ್ಕಳು ಬಿದ್ದಲ್ಲಿ ಪೆಟ್ಟಾಗುವುದಿಲ್ಲ. ಒಡೆಯುವ ವಸ್ತುಗಳು ಕೈಜಾರಿ ಬಿದ್ದರೂ ಒಡೆಯದೆ ಇರುವ ಸಾಧ್ಯತೆಗಳಿವೆ. ಇದು ಒಳ್ಳೆಯ ಅಭಿರುಚಿಯೂ ಹೌದು. ಆದರೆ ನೆಲಗಂಬಳಿಯನ್ನು ವ್ಯಾಕ್ಯೂಮ್ ಕ್ಲೀನರ್‌ನಿಂದ ಪದೇ ಪದೆ ಕ್ಲೀನ್ ಮಾಡುವುದನ್ನು ಮರೆಯಬೇಡಿ.

೬. ನನ್ನ ಸಣ್ಣ ಕೊಠಡಿಯನ್ನು ದೊಡ್ಡದಾಗಿ ಕಾಣುವಂತೆ ಮಾಡುವುದು ಹೇಗೆ?

ಕೊಠಡಿಯನ್ನು ಓರಣವಾಗಿಡಿ. ಗೋಡೆ ಮತ್ತು ಮೇಲ್ಛಾವಣಿಗೆ ತಿಳಿಯಾದ ಬಣ್ಣ ಬಳಿಯಿರಿ; ಅದಷ್ಟೂ ಕಡಿಮೆ ಪೀಠೋಪಕರಣ ಬಳಸಿರಿ; ಸಾಧ್ಯವಾದಷ್ಟೂ ನೆಲ ಹೆಚ್ಚು ಕಾಣುವಂತಿರಲಿ; ಖಾಲಿ ಗೋಡೆಯ ಮೇಲೆ ದೊಡ್ಡ ಕನ್ನಡಿಯನ್ನು ತೂಗು ಹಾಕಿರಿ. ರಾತ್ರಿಯ ವೇಳೆ ತಂಪು ಬೆಳಕಿನ ದೀಪಗಳನ್ನು (ಬಲ್ಬ್) ಬಳಸಿರಿ.

೭. ಗೋಡೆಯ ಮೇಲಿನ ನೀರಿನ ಕಲೆಯನ್ನು ಹೋಗಲಾಡಿಸುವುದು ಹೇಗೆ?

ನೀರು ಮೇಲಿನಿಂದ ಕೆಳಕ್ಕೆ ಹರಿಯುವುದರಿಂದ ಮೇಲ್ಛಾವಣಿ ಅಥವಾ ಗೋಡೆಯ ಹೊರಭಾಗ ಮಳೆಯ ನೀರನ್ನು ಹೀರಿಕೊಳ್ಳುವುದು. ಇದಕ್ಕೆ

ಕಾರಣವಿರಬಹುದು. ಆದುದರಿಂದ ತಾತ್ಕಾಲಿಕ ಪರಿಹಾರಗಳನ್ನು ಉದಾಹರಣೆಗೆ ಹೊಸದಾಗಿ ಬಣ್ಣ ಬಳಿಸುವುದು ಇತ್ಯಾದಿ—ಬಳಸಬೇಡಿ.

ನೀರು ಸೋರುತ್ತಿರುವ ಜಾಗವನ್ನು ಪತ್ತೆ ಮಾಡಿ, ರಿಪೇರಿ ಮಾಡಿರಿ.

೮. ಗೋಡೆಗೆ ವಾಲ್‌ಪೇಪರ್ ಬಳಸಬಹುದೇ?

ವಾಲ್‌ಪೇಪರ್ ವಿಲಾಸಿ ಜೀವನದ ಗುರುತು. ಅದು ಬೇರೆ ಬೇರೆ ಬಣ್ಣ, ಚಿತ್ರಗಳಲ್ಲಿ ದೊರೆಯುತ್ತದೆ. ಅದನ್ನು ಬಹಳ ಬೇಗ ಗೋಡೆಗೂ ಅಂಟಿಸಬಹುದು. ಆದರೆ, ನಿಲ್ಲಿ. ಒಂದೇ ಬಗೆಯ ವಾಲ್‌ಪೇಪರ್ ನೋಡಿ ನೋಡಿ ನಿಮಗೆ ಬೇಸರ ಎನ್ನಿಸಿದರೆ, ಅದನ್ನು ಕಿತ್ತು ಬೇರೆ ವಾಲ್‌ಪೇಪರ್ ಅಂಟಿಸುವುದು, ಹೊಸದಾಗಿ ಪೆಯಿಂಟ್ ಮಾಡಿಸುವುದಕ್ಕಿಂತ ಹೆಚ್ಚು ವೆಚ್ಚದಾಯಕ. ವಾಲ್‌ಪೇಪರ್ ಬೇಕೇ ಬೇಕೆನ್ನಿಸಿದರೆ ತಿಳಿ ಬಣ್ಣಗಳ ಆಯ್ಕೆ ಒಳ್ಳೆಯದು.

೯. ಪರದೆಗಳನ್ನು ತೂಗುಹಾಕುವುದು ಹೇಗೆ?

ಪರದೆಗಳನ್ನು ತೂಗುಹಾಕಲು ಅಲಂಕಾರಿಕ ಕೋಲುಗಳನ್ನು ಬಳಸಿರಿ. ಅವು ಕಿಟಕಿ ಅಥವಾ ಬಾಗಿಲಿನ ಅಳತೆಗಿಂತ ೨೦–೨೫ ಸೆಂ. ಮೀ. ಹೆಚ್ಚು ಉದ್ದವಿರಲಿ. ಇದರಿಂದ ಪರದೆಗಳನ್ನು ಪೂರ್ತಿ ಪಕ್ಕಕ್ಕೆ ಎಳೆದು, ಹೆಚ್ಚು ಗಾಳಿ, ಬೆಳಕು ಒಳಗೆ ಬರುವಂತೆ ಮಾಡಬಹುದು.

೧೦. ಪರದೆಗಳ ಮೇಲಿನ ಕಲೆಯನ್ನು ಹೇಗೆ ಹೋಗಲಾಡಿಸಬಹುದು?

ಕಲೆ ಶಾಯಿ ಬಾಲ್‌ಪೆನ್‌ನಿಂದ ಆಗಿದ್ದಲ್ಲಿ, ಮನೆಯಲ್ಲಿ ಇರುವ ಡಿಟರ್ಜೆಂಟ್ ಸೋಪಿನಿಂದ ತೊಳೆಯಿರಿ. ಆನಂತರ ಗ್ಲೈಕೋಲ್ ಮಿಶ್ರಣದಿಂದ ಸ್ಪಂಜ್ ಮಾಡಿರಿ. (ಗ್ಲೈಕೋಲ್ ಮಿಶ್ರಣ ಪ್ರಯೋಗ ಶಾಲೆಗಳಿಗೆ ವಸ್ತುಗಳನ್ನು ಮಾರಾಟಮಾಡುವವರಲ್ಲಿ ದೊರೆಯುತ್ತದೆ.) ಕಲೆ ಆದ ಕೂಡಲೇ ಅದನ್ನು ತೊಳೆದು ಹೋಗಲಾಡಿಸುವುದು ಸೂಕ್ತ.

೧೧. ಪಾಲಿಯೆಸ್ಟರ್ ಪರದೆಗಳು ಹೆಚ್ಚು ಸೂಕ್ತವೇ?

ಹೌದು. ಏಕೆಂದರೆ ಅವುಗಳನ್ನು ಸುಲಭವಾಗಿ ತೊಳೆಯಬಹುದು; ನೀರಿನಲ್ಲಿ ನೆನೆ ಹಾಕುವುದರಿಂದ ಅವು ಕುಗ್ಗುವುದಿಲ್ಲ; ಕಲೆಗಳನ್ನು ಸುಲಭವಾಗಿ ತೊಳೆದು ತೆಗೆಯಬಹುದು; ಮತ್ತು ಅವು ಬಹಳ ಕಾಲ ಬಾಳಿಕೆ ಬರುತ್ತವೆ.

೧೨. ಸೋಫಾ ಕವರಿನ ಮೇಲಿನ ಕಲೆಯನ್ನು ಹೋಗಲಾಡಿಸುವುದು ಹೇಗೆ?

ಮೊದಲಿಗೆ ಕಾರ್ಬನ್ ಟೆಟ್ರಾಕ್ಲೋರೈಡನ್ನು ಬಳಸಿ ಕಲೆಯಲ್ಲಿನ ಗ್ರೀಸನ್ನು ಹೋಗಲಾಡಿಸಿ ನಂತರ ಬ್ಲೀಚಿಂಗ್ ಪೌಡರ್ ಬಳಸಿ ಕಲೆಯಲ್ಲಿನ ಬಣ್ಣವನ್ನು ಹೋಗಲಾಡಿಸಿ. ಆನಂತರ ಉತ್ತಮ ಸೋಪಿನಿಂದ ತೊಳೆಯಿರಿ.

೧೩. ಪ್ಲೈವುಡ್‌ಗಿಂತ ನಿಜವಾದ ಮರದ ಹಲಗೆ ಒಳ್ಳೆಯದೇ?

ಇದು ಪ್ಲೈವುಡ್‌ನ ಗುಣದ ಮೇಲೆ ನಿರ್ಧಾರಿತವಾಗುತ್ತದೆ. ಮರದ ಹಲಗೆಗಳು ಈಗ ಅಪರೂಪವಾಗುತ್ತಿದ್ದು ಹೆಚ್ಚು ವೆಚ್ಚದಾಯಕ. ಮರದ ಹಲಗೆಯಂತೆಯೇ ಒಳ್ಳೆಯ ಪ್ಲೈವುಡ್ ಗಟ್ಟಿಮುಟ್ಟಾಗಿರುತ್ತದೆ. ಆದ್ದರಿಂದ ಒಳ್ಳೆಯ ದರ್ಜೆಯ ಪ್ಲೈವುಡ್ ಆಯ್ಕೆ ಮಾಡಿಕೊಳ್ಳಿರಿ.

೧೪. ಗೋಡೆಗಳಿಗೆ ಮರದ ಚೌಕಟ್ಟು ಬಳಕೆ?

ಇದು ಐಷಾರಾಮದ ಆಸೆ. ಆದರೆ ನೆನಪಿಡಿ, ಮರದ ಚೌಕಟ್ಟು ಬೆಂಕಿ ಹರಡಲು ಕಾರಣವಾಗುತ್ತದೆ. ಚಿಕ್ಕ ಪುಟ್ಟ ಬೆಂಕಿ ಅಪಘಾತಗಳೂ ಸಹ ದೊಡ್ಡ ಅಪಘಾತಗಳಾಗಲು ಕಾರಣವಾಗಬಹುದು. ನೀವು ಫ್ಲ್ಯಾಟ್‌ಗಳಲ್ಲಿ ವಾಸಿಸುತ್ತಿದ್ದರೆ ಇದರ ಆಸೆ ಬಿಡುವುದೇ ಒಳ್ಳೆಯದು.

೧೫. ಪುಸ್ತಕಗಳ ಕಪಾಟುಗಳನ್ನು ಎಲ್ಲಿ ಇರಿಸಬೇಕು?

ದೊಡ್ಡ ಪುಸ್ತಕ ಕಪಾಟುಗಳು ಮನೆಯ ಅಂದವನ್ನು ಹೆಚ್ಚಿಸುತ್ತವೆ. ಅವು ಮನೆ ಒಡೆಯನ ಮನಸ್ಸಿನ ಕೈಗನ್ನಡಿಯೂ ಹೌದು. ಕಪಾಟುಗಳನ್ನು ಮಾಡಲು ಉತ್ತಮ ದರ್ಜೆಯ ಮರಗಳನ್ನು ಬಳಸಿ. ಕಪಾಟುಗಳಿಗೆ ಗಾಜಿನ ಅಥವಾ ಮರದ ಬಾಗಿಲನ್ನು ಮಾಡಿಸಿ. ಇದರಿಂದ ಧೂಳು, ಕೀಟಗಳು ಪುಸ್ತಕಗಳಲ್ಲಿ ಸೇರುವುದನ್ನು ತಪ್ಪಿಸಬಹುದು.

೧೬. ಮೆರೀನ್ ಪ್ಲೈವುಡ್‌ನ್ನು ಬಳಸಬಹುದೇ?

ಮೆರೀನ್ ಪ್ಲೈವುಡ್‌ಗೆ ಸಾಧಾರಣ ಪ್ಲೈವುಡ್‌ಗಿಂತ ಹೆಚ್ಚು ಬೆಲೆ. ಅದು ಶಾಖ ಮತ್ತು ನೀರು ನಿರೋಧಕ. ಆದರೂ, ಸಾಧಾರಣ ಪೀಠೋಪಕರಣಗಳಿಗೆ ಉತ್ತಮ ದರ್ಜೆಯ ಪ್ಲೈವುಡ್ ಸಾಕಾಗುತ್ತದೆ.

೧೭. ಕ್ಯಾಬಿನೆಟ್ ಬಾಗಿಲುಗಳಿಗೆ ಮತ್ತು ಮೇಜಿನ ಮೇಲು ಹಾಸನ್ನಾಗಿ ಅಕ್ರಿಲಿಕ್ ಶೀಟ್‌ಗಳನ್ನು ಬಳಸಬಹುದೇ?

ಅಕ್ರಿಲಿಕ್ ಶೀಟ್‌ಗಳನ್ನು ಕ್ಯಾಬಿನೆಟ್‌ನ ಮುಂಭಾಗದಲ್ಲಿ ಬಳಸುವುದು ಅನುಕೂಲಕರ. ಗಾಜಿನಂತೆ ಇವು ಒಡೆಯುವುದಿಲ್ಲ. ಆದರೆ ಮೇಜಿನ ಮೇಲಿನ ಹಾಸನ್ನಾಗಿ ಇವುಗಳನ್ನು ಬಳಸಬೇಡಿ. ಏಕೆಂದರೆ ಬಹಳ ಬೇಗ ಇವುಗಳ ಮೇಲೆ ಗೆರೆಗಳಾಗುತ್ತವೆ.

೧೮. ಎಂಡಿಎಫ್ ಎಂದರೇನು?

ಮೀಡಿಯಂ ಡೆನ್ಸಿಟಿ ಫೈಬರ್ ಬೋರ್ಡ್, ಮರ ಅಥವಾ ಪ್ಲೈವುಡ್‌ಗೆ ಬದಲಾಗಿ ಇದನ್ನು ಬಳಸಬಹುದು. ಪೀಠೋಪಕರಣಗಳು ಕಪಾಟುಗಳನ್ನು ಮಾಡಲು ಇದನ್ನು ಬಳಸಬಹುದು. ಆದರೆ, ಮನೆಯ ಹೊರಗೆ ಬಳಸುವ ವಸ್ತುಗಳನ್ನು ತಯಾರಿಸಲು ಇದನ್ನು ಬಳಸಬೇಡಿ. ಏಕೆಂದರೆ, ಇದು ತೇವಾಂ

ವನ್ನು ಹೀರಿಕೊಳ್ಳುವುದರಿಂದ ಬಹಳ ಬೇಗ ಹಾಳಾಗುತ್ತದೆ.

೧೯. ಮರಗೆಲಸವನ್ನು ಉತ್ತಮಪಡಿಸಿಕೊಳ್ಳುವುದು ಹೇಗೆ?

ಮರವನ್ನು ನೀವೇ ಕೊಳ್ಳಿರಿ. ಬಡಗಿಗಳು ಕೊಳ್ಳಲು ಹೇಳಬೇಡಿರಿ. ಇವುಗಳನ್ನು ಕೊಳ್ಳುವ ಮುನ್ನ ತಿಳಿದವರನ್ನು ವಿಚಾರಿಸಿರಿ. ಬೇರೆ ಬೇರೆ ಅಂಗಡಿಗಳಲ್ಲಿ ಬೆಲೆಯನ್ನು ತುಲನೆ ಮಾಡಿರಿ. ಬಡಗಿಗಳಿಗೆ ದಿನಗೂಲಿ ನೀಡುವುದಕ್ಕಿಂತ ಒಟ್ಟು ಕೆಲಸದ ಮೇಲೆ ಕೂಲಿ ನಿರ್ಧರಿಸುವುದು ಸೂಕ್ತ.

೨೦. ಮರದ ಪೀಠೋಪಕರಣಗಳು ಹೆಚ್ಚು ಬಾಳಿಕೆ ಬರುವಂತೆ ಹೇಗೆ ಮಾಡಬಹುದು?

ಹೆಚ್ಚು ಜೋಪಾನವಾಗಿರಿಸಿಕೊಳ್ಳುವುದರಿಂದ ಮರದ ಪೀಠೋಪಕರಣಗಳು ನೂರಾರು ವರ್ಷ ಬಾಳಿಕೆ ಬರುತ್ತವೆ. ಅವುಗಳ ಮೇಲೆ ಚೆಲ್ಲುವ ದ್ರವ ಪದಾರ್ಥಗಳನ್ನು ಕೂಡಲೇ ಒರೆಸಿ ಬಿಡಿ. ಅವು ಹಳೆಯದಾದಂತೆ ಕಂಡಕೂಡಲೇ ಅವುಗಳಿಗೆ ಮತ್ತೆ ಪಾಲಿಷ್ ಮಾಡಿಸಿ ಪೀಠೋಪಕರಣಗಳ ಯಾವುದೇ ಭಾಗ ಹಾಳಾಗಿದ್ದಲ್ಲಿ ಅಥವಾ ಹಾಳಾಗುವಂತೆ ಕಂಡುಬಂದಲ್ಲಿ ಕೂಡಲೇ ರಿಪೇರಿ ಮಾಡಿಸಿರಿ. ಬಾಗಿಲುಗಳು, ಕಪಾಟುಗಳನ್ನು ನಿಧಾನವಾಗಿ ಮುಚ್ಚಿರಿ. ಮುಚ್ಚುವಾಗ ಬಟ್ಟೆ ಅಥವಾ ಇತರ ವಸ್ತುಗಳು ಅವುಗಳ ನಡುವೆ ಸಿಕ್ಕಿಕೊಳ್ಳದಂತೆ ನೋಡಿಕೊಳ್ಳಿ. ಪೀಠೋಪಕರಣಗಳನ್ನು ಸೂರ್ಯನ ನೇರ ಬಿಸಿಲಿಗೆ ಇರಿಸಬೇಡಿ ಹಾಗೆಯೇ ತೇವಾಂಶಗಳ ಬಗ್ಗೆ ಎಚ್ಚರಿಕೆಯಿಂದಿರಿ.

೨೧. ಕಲಾತ್ಮಕ ವಸ್ತುಗಳಲ್ಲಿ ಅಥವಾ ಪ್ರಾಚೀನ ವಸ್ತುಗಳಲ್ಲಿ ಹಣ ತೊಡಗಿಸಬಹುದೇ?

ಇವುಗಳಿಂದ ನಿಮಗೇನು ಬೇಕು ಎನ್ನುವುದರ ಮೇಲೆ ಇದು ನಿರ್ಧಾರಿತವಾಗುತ್ತದೆ—ಸಂತೋಷ ಅಥವಾ ಹಣ. ಬರಿಯ ಸಂತೋಷಕ್ಕಾಗಿ ಇವುಗಳ ಮೇಲೆ ಹಣ ತೊಡಗಿಸುವುದಾದರೆ ಮತ್ತೆ ಯೋಚಿಸಲೇ ಬೇಡಿ. ಕೊಂಡುಕೊಳ್ಳಿ. ಖುಷಿಪಡಿ.

ಆದರೆ, ಇವುಗಳನ್ನು ಬಂಡವಾಳ ತೊಡಗಿಸುವ ವಸ್ತುಗಳಾಗಿ ಚಿಂತಿಸಿದರೆ, ಇವು, ಸ್ಟಾಕ್ ಮಾರುಕಟ್ಟೆಯಂತೆ, ಕೆಟ್ಟ ಬಂಡವಾಳವೂ ಆಗಬಹುದು, ಒಳ್ಳೆಯ ಬಂಡವಾಳವೂ ಆಗಬಹುದು.

ಕಲಾಕಾರರ ಪ್ರಸಿದ್ಧಿಯ ಆಧಾರದ ಮೇಲೆ ಪೆಯಿಂಟಿಂಗ್‌ಗಳ ಬೆಲೆ ನಿರ್ಧಾರಿತವಾಗುತ್ತದೆ. ಮೂವತ್ತು ವರ್ಷಗಳ ಹಿಂದೆ ಒಂದೂ ಪೆಯಿಂಟಿಂಗ್ ಮಾರಲಾರದ ಕಲಾಕಾರರು ಇಂದು ಒಂದೊಂದು ಕ್ಯಾನ್‌ವಾಸ್ ಅನ್ನು ಲಕ್ಷಾಂತರ ರೂಪಾಯಿಗಳಿಗೆ ಮಾರುತ್ತಿದ್ದಾರೆ. ಆದುದರಿಂದ, ಪ್ರಸಿದ್ಧವಾಗಿರದ, ತಮ್ಮದೇ ಛಾಪನ್ನು ಹೊಂದಿರುವ ಯುವ ಕಲಾಕಾರರ ಪೆಯಿಂಟಿಂಗ್‌ಗಳನ್ನು ಕೊಳ್ಳಿರಿ. ಮೂವತ್ತು-ನಲವತ್ತು ವರ್ಷಗಳ ನಂತರ ನೀವು ಲಕ್ಷಾಂತ

ರೂಪಾಯಿ ಗಳಿಸಬಹುದು. ಆದರೆ ಇದಕ್ಕೆ ಯಾವ ಗ್ಯಾರಂಟಿಯೂ ಇಲ್ಲ.

೨೨. ಗೋಡೆಯಲ್ಲಿ ಚಿತ್ರಗಳನ್ನು ಹೇಗೆ ತೂಗು ಹಾಕುವುದು ಸರಿ?

ಮೊಳೆಗಳನ್ನು ಗೋಡೆಗೆ ಹೊಡೆಯಬೇಡಿ. ಅವು ಗೋಡೆಯನ್ನು ಹಾಳು ಮಾಡುತ್ತವೆ. ಗೋಡೆಯನ್ನು ಡ್ರಿಲ್ ಮಾಡಿ. ಪ್ಲಾಸ್ಟಿಕ್ ರೋಲ್ ಪ್ಲಗ್ ಬಳಸಿ. ಈ ರೋಲ್ ಪ್ಲಗ್‌ನಲ್ಲಿ ಸ್ಕ್ರೂ ತಿರುಗಿಸಿ. ಅದರ ಮೇಲೆ ಚಿತ್ರವನ್ನು ತೂಗು ಹಾಕಿರಿ.

ದೊಡ್ಡ, ಭಾರವಾದ ಚಿತ್ರಗಳನ್ನು ನಿಮ್ಮ ಹಾಸಿಗೆಯ ಮೇಲೆ, ಮಕ್ಕಳ ಕೊಠಡಿಗಳಲ್ಲಿ ತೂಗು ಹಾಕಬೇಡಿರಿ. ಬದಲಾಗಿ ಲೋಹದ ಪಟ್ಟಿಗಳ ಮೂಲಕ ಗೋಡೆಗೆ ಬಂಧಿಸಿರಿ.

೨೩. ವಾಷಿಂಗ್ ಮೆಷಿನನ್ನು ಎಲ್ಲಿ ಇರಿಸಬೇಕು?

ಅಡುಗೆ ಮನೆ ಉತ್ತಮ ಸ್ಥಳ. ಅಲ್ಲಿ ಜಾಗ ಇಲ್ಲದಿದ್ದಲ್ಲಿ ಬಚ್ಚಲು ಮನೆಯಲ್ಲಿ ಅಥವಾ ಅದರ ಹತ್ತಿರ.

೨೪. ವಾಷಿಂಗ್ ಮೆಷಿನ್ ಬಳಸುವಾಗ ವಿದ್ಯುತ್ ಬಳಕೆಯನ್ನು ಹೇಗೆ ಕಡಿಮೆ ಮಾಡಬಹುದು?

ವಾಷಿಂಗ್ ಮೆಷಿನ್‌ನಲ್ಲಿ ನೀರನ್ನು ಬಿಸಿ ಮಾಡುವ ಹೀಟರ್‌ನ್ನು ಬಳಸಬೇಡಿ. ಏಕೆಂದರೆ, ಇತ್ತೀಚಿನ ಸೋಪಿನ ಪುಡಿಗಳಿಗೆ ಬಿಸಿ ನೀರಿನ ಅವಶ್ಯಕತೆ ಇಲ್ಲ.

೨೫. ರೆಫ್ರಿಜರೇಟರನ್ನು ಬಳಸುವಾಗ ವಿದ್ಯುಚ್ಛಕ್ತಿಯನ್ನು ಹೇಗೆ ಉಳಿಸಬಹುದು?

ರೆಫ್ರಿಜರೇಟರನ್ನು ಯಾವಾಗಲೂ ಆನ್ ಮಾಡಿ ಇರಿಸಿದ್ದರೂ ಸಹ ಅದು ನಿರ್ಧಾರಿತ ತಂಪನ್ನು ಕಾಯ್ದುಕೊಳ್ಳಲು ತನ್ನಷ್ಟಕ್ಕೆ ತಾನೇ ಆನ್-ಆಫ್ ಆಗುತ್ತಿರುತ್ತದೆ. ಹೆಚ್ಚು ವಿದ್ಯುತ್ ಉಳಿಸಲು: ಫ್ರಿಜ್‌ನ ಒಳಗಿನ ತಂಪನ್ನು ಹಾಗೆಯೇ ಉಳಿಸಲು ಯತ್ನಿಸಿರಿ— ಇದಕ್ಕಾಗಿ ಫ್ರಿಜ್‌ನ ಬಾಗಿಲನ್ನು ಆದಷ್ಟು ಕಡಿಮೆ ಬಾರಿ ತೆರೆಯಿರಿ; ಬಿಸಿಯಾದ ವಸ್ತುಗಳನ್ನು ಫ್ರಿಜ್‌ನಲ್ಲಿ ಇರಿಸಬೇಡಿ; ಫ್ರಿಜ್ ಹಳೆಯದಾದಂತೆ ಅದರ ಸುತ್ತ ಇರುವ ರಬ್ಬರ್ ಹೊದಿಕೆ ಪರೀಕ್ಷಿಸುತ್ತಿರಿ. ಅದರಿಂದ ತಂಪು ಹವೆ ಹೊರಬರುತ್ತಿದ್ದರೆ, ನೀವು ವಿದ್ಯುತ್ತನ್ನು ಅಪವ್ಯಯ ಮಾಡುತ್ತಿದ್ದೀರಿ ಎಂದರ್ಥ. ಕಾಲದಿಂದ ಕಾಲಕ್ಕೆ ಡಿ-ಫ್ರಾಸ್ಟ್ ಮಾಡುತ್ತಿರಿ.

೨೬. ದೂರವಾಣಿ ಸಂಪರ್ಕ ಮಾಡಲು ಅತ್ಯುತ್ತಮ ವಿಧಾನ ಯಾವುದು?

ಹೆಚ್ಚಿನ ದೂರವಾಣಿಗಳಲ್ಲಿನ ತೊಂದರೆಗಳು ಮನೆಯಲ್ಲಿನ ಸಂಪರ್ಕಗಳಲ್ಲಿನ ದೋಷಗಳಿಂದ ಉಂಟಾಗಿರುತ್ತವೆ. ಆದುದರಿಂದ ಟೆಲಿಫೋನ್ ವೈರ್‌ಗಳನ್ನು ಅವುಗಳ ಪಾಯಿಂಟ್‌ಗಳಲ್ಲಿ ಬಿಗಿಯಾಗಿ ಬಂಧಿಸಿ. ಮಾರುಕಟ್ಟೆಯಲ್ಲಿ ದೊರೆಯುವ ಟೆಲಿಫೋನ್ ಕಾಂಟ್ಯಾಕ್ಟ್ ಬಾಕ್ಸ್ ಅಥವಾ ಪ್ಲಗ್ ಟೆಲಿಫೋನ್

ಪ್ಲಗ್‌ಗಳನ್ನು ಬಳಸಿ. ಇವು ಕಡಿಮೆ ಬೆಲೆಯಲ್ಲಿ ದೊರೆಯುತ್ತವೆ.

೨೭. ಬೆಂಕಿ ಆರಿಸುವ ಪುಟ್ಟ ಉಪಕರಣಗಳು ಎಷ್ಟು ದಿನ ಬಾಳಿಕೆ ಬರುತ್ತವೆ?

ಪ್ರತಿಯೊಂದು ಮನೆಯಲ್ಲೂ ಬೆಂಕಿ ಆರಿಸುವ ಉಪಕರಣ ಇರಲೇಬೇಕು. ಇವು ಸುಮಾರು ಎರಡು ವರ್ಷಗಳವರೆಗೆ ಬಾಳಿಕೆ ಬರುತ್ತವೆ. ಆನಂತರ ಅವು ತಂತಾನೇ ಖಾಲಿ ಆಗಿರುತ್ತವೆ.

೨೮. ಅಡುಗೆ ಮನೆಯ ವಿನ್ಯಾಸದಲ್ಲಿ ಗಮನಿಸಬೇಕಾದ ಮುಖ್ಯ ಅಂಶಗಳಾವುವು?

ಒಲೆಯ ಕಟ್ಟೆ, ಫ್ರಿಜ್, ತೊಳೆಯುವ ತೊಟ್ಟಿ—ಇವು ಮೂರು ಹತ್ತಿರ ಹತ್ತಿರ ವಿರಲಿ. ಗೋಡೆಯಲ್ಲಿನ ಕಪಾಟುಗಳು ಸುಲಭವಾಗಿ ಕೈಗೆ ಎಟಕುವಂತೆ ಇರಲಿ. ಸ್ಟೌವ್ ಅನ್ನು ಗಾಳಿ ಬೀಸುವೆಡೆ ಇರಿಸಬೇಡಿ. ಸಾಕಷ್ಟು ಬೆಳಕು ಅಡುಗೆ ಮನೆಯಲ್ಲಿ ಬೀಳುವಂತಿರಲಿ.

೨೯. ಮೈಕ್ರೋವೇವ್ ಒಲೆ ಹೆಚ್ಚು ಉಪಯೋಗಿಯೇ?

ಹೌದು. ಅಡುಗೆಯಲ್ಲಿ ಅವು ಬಹಳಷ್ಟು ವೇಳೆಯನ್ನು ಉಳಿಸುತ್ತವೆ.

೩೦. ಕಟ್ಟಿಕೊಳ್ಳುವ ಮೋರಿಗೆ ಏನು ಮಾಡಬೇಕು?

ಮೋರಿಯೊಳಗೆ ಸ್ವಲ್ಪ ಕಾಸ್ಟಿಕ್ ಸೋಡಾ ಹಾಕಿ, ಬಿಸಿ ನೀರು ಸುರಿಯಿರಿ. ವ್ಯಾಕ್ಯೂಂ ಕ್ಲೀನರ್ ಮೂಲಕ ಗಾಳಿಯನ್ನು ಮೋರಿಯೊಳಕ್ಕೆ ಬ್ಲೋ ಮಾಡಬಹುದು. ಇವುಗಳಿಗೂ ಮೋರಿ ತೆರೆದುಕೊಳ್ಳದಿದ್ದರೆ ದುರಸ್ತಿ ಮಾಡುವವರನ್ನು ಕರೆಸಿ.

೩೧. ಟ್ರ್ಯಾಕ್ ಶೆಲ್ಫ್‌ಗಳನ್ನು ಬಳಸುವುದು ಸೂಕ್ತವೇ?

ಹೌದು, ಏಕೆಂದರೆ ನಿಮಗೆ ಬೇಕಾದ ಅಳತೆಗೆ ಅವುಗಳನ್ನು ಫಿಕ್ಸ್ ಮಾಡಬಹುದು.

೩೨. ವಿದ್ಯುತ್ ಉಪಕರಣಗಳನ್ನು ಹೇಗೆ ಸುರಕ್ಷಿತವಾಗಿರುವಂತೆ ಮಾಡಬಹುದು?

ಶಾರ್ಟ್ ಹೊಡೆಯುವುದನ್ನು ತಪ್ಪಿಸಲು ಅಥವಾ ಓವರ್ ಲೋಡ್ ಆಗುವುದನ್ನು ತಡೆಯಲು ವಿಶೇಷ ಉಪಕರಣಗಳನ್ನು—ಉದಾಹರಣೆಗೆ: ಮಿನಿ ಸರ್ಕ್ಯೂಟ್-ಬ್ರೇಕರ್‌ಗಳನ್ನು ಬಳಸಿರಿ.

೩೩. ಸ್ಲೈಡಿಂಗ್ ಬಾಗಿಲುಗಳು ಹೇಗೆ ಉಪಯುಕ್ತ?

ಸ್ಲೈಡಿಂಗ್ ಬಾಗಿಲುಗಳು ಪಕ್ಕಕ್ಕೆ ಜಾರುವುದರ ಮೂಲಕ ದಾರಿ ನೀಡುತ್ತವೆ. ಹೀಗಾಗಿ ಚಿಕ್ಕ ಕೊಠಡಿಗಳು ಅಥವಾ ಚಿಕ್ಕ ಒಳ ಓಣಿಗಳಲ್ಲಿ ಇವು ಬಹಳ ಉಪಯೋಗಿ. ಏಕೆಂದರೆ, ಇವು ಗೋಡೆಗೆ ಹೊಂದಿಕೊಂಡಂತೇ ಇರುವುದರಿಂದ, ಇವು ಹೆಚ್ಚಿನ ಸ್ಥಳ ಆಕ್ರಮಿಸುವುದಿಲ್ಲ. ಆದರೆ, ಮುಂಬಾಗಿಲುಗಳಿಗೆ ಮಾತ್ರ ಈ ಬಾಗಿಲನ್ನು ಅಳವಡಿಸಬೇಡಿ.

೩೪. ಮನೆಯನ್ನು ಉತ್ತಮಗೊಳಿಸುವ ಮುಖ್ಯ ನಿರ್ಧಾರವನ್ನು ಹೇಗೆ ತೆಗೆದು ಕೊಳ್ಳಬಹುದು?

ಆ ಮನೆಯಲ್ಲಿ ನೀವು ಎಷ್ಟು ಕಾಲ ಇರುತ್ತೀರಿ ಎನ್ನುವುದನ್ನು ಮೊದಲು ಯೋಚಿಸಿ. ಮೂರು ವರ್ಷಗಳಿಗಿಂತಲೂ ಕಡಿಮೆ ಕಾಲ ವಾಸವಾಗಿ ಇರುವುದಾದರೆ ದೊಡ್ಡ ಮೊತ್ತವನ್ನು ಖರ್ಚು ಮಾಡಿ ಮನೆಯನ್ನು ಉತ್ತಮಗೊಳಿಸಬೇಡಿ. ಐದು ವರ್ಷಗಳಿಗಿಂತ ಹೆಚ್ಚು ಕಾಲ ವಾಸಿಸುವ ಸಾಧ್ಯತೆಗಳಿದ್ದಲ್ಲಿ ಹೆಚ್ಚಿನ ಮೊತ್ತವನ್ನು ವೆಚ್ಚ ಮಾಡಿದರೂ ಸರಿ, ಅದರ ಪ್ರತಿಫಲ ನಿಮಗೆ ದೊರೆಯುತ್ತದೆ.

೩೫. ಗೃಹ ಅಭಿವೃದ್ಧಿ ಸಾಲವನ್ನು ತೆಗೆದು ಕೊಳ್ಳುವುದು ಒಳ್ಳೆಯದೇ?

ಹೌದು. ಆದರೆ, ನೀವು ಆ ಸಾಲವನ್ನು ಹಿಂತಿರುಗಿಸಲು ಬೇಕಾದ ಆದಾಯವನ್ನು ಹೊಂದಿದ್ದರೆ ಮಾತ್ರ. ಕಡಿಮೆ ಬಡ್ಡಿಯ ಹಣಕಾಸಿನ ಸಂಸ್ಥೆಗಳಿಗಿಂತಲೂ ನಿಮ್ಮದೇ ಉಳಿತಾಯಗಳಿಂದ— ಪ್ರಾವಿಡೆಂಟ್ ಫಂಡ್, ಫಿಕ್ಸೆಡ್ ಡಿಪಾಜಿಟ್ ಇತ್ಯಾದಿ—ಹಣ ಎರವಲು ಪಡೆಯಿರಿ.

ಮನೆಯನ್ನು ಉತ್ತಮಗೊಳಿಸುವ ವೆಚ್ಚ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಲೇ ಇರುತ್ತದೆ. ಆದುದರಿಂದಲೇ ಈ ವಿಷಯದಲ್ಲಿ ಹೆಚ್ಚಿನ ಕಾಲಹರಣ ಮಾಡುವುದು ಉಚಿತವಲ್ಲ. ಮನೆಯನ್ನು ಉತ್ತಮಗೊಳಿಸಲು ಒಳ್ಳೆಯ ಮಾಲನ್ನು ಬಳಸಿರಿ. ಕಂಟ್ರಾಕ್ಟರ್ ಅಥವಾ ಕೆಲಸಗಾರರ ಬಳಿ ಚೌಕಾಸಿ ಮಾಡಿ, ಖರ್ಚನ್ನು ಆದಷ್ಟೂ ಕಡಿಮೆ ಮಾಡಿ.

ಸಾಲ ಪಡೆಯುವಾಗಲೂ ಅಷ್ಟೇ. ಕಂಪನಿಯ ನೀತಿ ನಿಯಮಗಳನ್ನು ಎಚ್ಚರಿಕೆಯಿಂದ ಓದಿ ಅರ್ಥ ಮಾಡಿಕೊಂಡು, ಕರಾರಿಗೆ ಸಹಿ ಮಾಡಿ.

ನಿಜಮೌಲ್ಯವಿರುವ ಯಾವುದೂ ಮಹತ್ವಾಕಾಂಕ್ಷೆಯಿಂದ ಇಲ್ಲವೆ ಕರ್ತವ್ಯಪ್ರಜ್ಞೆಯಿಂದ ಉದ್ಭವಿಸದು; ಬದಲು, ಮನುಷ್ಯರ ಮತ್ತು ವಸ್ತುಗಳ ಬಗೆಗಿನ ಪ್ರೀತಿ ಮತ್ತು ನಿಷ್ಠೆಗಳಿಂದ ಮಾತ್ರ ಹೊಮ್ಮೀತು.

—ಐನ್‌ಸ್ಟೈನ್

ಪುಸ್ತಕ ಪರಿಚಯ

ಸಸ್ಯ ಪುರಾಣ (ಬಿಡಿ ಲೇಖನಗಳು)—ಲೇ: ಬಿ. ಜಿ. ಎಲ್. ಸ್ವಾಮಿ; ಪ್ರ: ನವಕರ್ನಾಟಕ ಪ್ರಕಾಶನ. ೧೨೮ ಪುಟಗಳು; ೩೫ ರೂಪಾಯಿಗಳು.

ಈ ಪುಸ್ತಕದ ರಕ್ಷಾ ಕವಚ ಸುಂದರವಾಗಿದೆ. ಸಹಜವಾಗಿ ಕವಚದ ನಾಲ್ಕನೆಯ ಪುಟವನ್ನು ಮೊದಲು ಓದಿದೆ. ಅಲ್ಲಿ ಪುಸ್ತಕದ ಮತ್ತು ಲೇಖಕರ ಬಗ್ಗೆ ಪ್ರಕಾಶಕರು ಬರೆದಿದ್ದಾರೆ. ಕೊನೆಯ ವಾಕ್ಯ ಹೀಗಿದೆ—"ಇದರಿಂದ (ಈ ಪುಸ್ತಕದಿಂದ) ಓದುಗರಿಗೆ ಕಾವ್ಯ ಭಾಸವೂ ಆಗುತ್ತದೆ. ಸಸ್ಯ ಶಾಸ್ತ್ರದ ಪರಿಚಯವೂ ಆಗುತ್ತದೆ."

"ಹಿಂದಿನ ಕವಿಗಳು ತಮ್ಮ ಕಾವ್ಯಗಳಲ್ಲಿ ಬಹಳಷ್ಟು ಸಸ್ಯಗಳನ್ನು ಹೆಸರಿಸಿದ್ದಾರೆ ಆದರೆ ಈ ಹೆಸರುಗಳು, ವರ್ಣನೆಗಳೆಲ್ಲಾ ಕವಿಸಮಯವಾಗಿವೆಯೇ ಹೊರತು ಆ ಸಸ್ಯಗಳ ಅನನ್ಯತೆಯ ಪರಿಚಯ ಕವಿಗಳಿಗಿಲ್ಲ" ಎಂಬ ಅಭಿಪ್ರಾಯವನ್ನು ಹೊಂದಿದವರಾಗಿ ಬಿ. ಜಿ. ಎಲ್. ಸ್ವಾಮಿಯವರು ಹರಿಹರ, ಪಂಪ, ಬಸವಣ್ಣನವರ ಕಾವ್ಯಗಳಲ್ಲಿ ಬರುವ ಸಸ್ಯಗಳನ್ನು ಕಾವ್ಯಾತ್ಮಕವಾಗಿಯೂ ವೈಜ್ಞಾನಿಕವಾಗಿಯೂ ಪರಿಚಯಿಸಲು ಈ ಪುಸ್ತಕದಲ್ಲಿ ಪ್ರಯತ್ನಿಸಿದ್ದಾರೆ. ಇದರಲ್ಲಿ ೯೫ ಸಸ್ಯಗಳ ಶಾಸ್ತ್ರೀಯ ಹೆಸರುಗಳನ್ನೂ ಕೊಟ್ಟು ವಿವರಿಸಲು ಶ್ರಮಿಸಿದ್ದಾರೆ. ಆದರೆ ಕಾವ್ಯ, ವಿಜ್ಞಾನ, ಎರಡೂ ದೃಷ್ಟಿಗಳಿಂದಲೂ ಇಲ್ಲಿ ಸಸ್ಯಗಳು ಸಮೃದ್ಧವಾಗಿ ದೃಷ್ಟಿಗೊಂಡಿಲ್ಲ. ಔಷಧಿ, ಆಹಾರ, ಅಲಂಕಾರ, ಮರವಾಗಿ, ಹೂವಾಗಿ, ಕಾಯಿ ಹಣ್ಣುಗಳಾಗಿ ಸಸ್ಯದ ಗುಣವಿಶೇಷಗಳು, ಸಸ್ಯಗಳ ವಂಶಾಭಿವೃದ್ಧಿ, ಮಣ್ಣು, ಹವಾಗುಣ ಇತ್ಯಾದಿಯಾಗಿ ಸಸ್ಯಗಳ ಗುಣವಿಶೇಷಗಳನ್ನು ಸರಿಯಾಗಿ, ಆಳವಾಗಿ, ಅಧ್ಯಯನಾತ್ಮಕವಾಗಿ, ಆಕರ್ಷಕವಾಗಿ, ಪರಿಚಯಿಸಿದ ಪದ ಸಂಚಯದಿಂದ ನಮ್ಮ ತಿಳಿವಳಿಕೆ ಹೆಚ್ಚಾಗುವುದಿಲ್ಲ. ಕಡ್ಲೆ ಹಿಟ್ಟು, ಸಕ್ಕರೆ, ತುಪ್ಪಗಳು ಸಮಪಾತದಲ್ಲಿ ಬೆಂದರೆ ರುಚಿಯಾದ ಮೈಸೂರುಪಾಕು ಆಗುತ್ತದೆ. ಪಾತ ಸರಿಯಾಗಿಲ್ಲವೆಂದು ಆಮೇಲೆ ಸಕ್ಕರೆ, ತುಪ್ಪಗಳನ್ನು ಮೇಲಿಂದ ಉದುರಿಸಿದರೆ ಹೇಗಾದೀತು? ಸಕ್ಕರೆಯೂ ರುಚಿಯೆ. ತುಪ್ಪವೂ ರುಚಿಯೆ. ಹಾಗಾಗಿದೆ ಇಲ್ಲಿಯ ಕಾವ್ಯ ವಿಚಾರಗಳು. ಹಲವಾರು ಕಾವ್ಯಗಳನ್ನು ಓದಿದ್ದು ಈ ಪುಸ್ತಕದಲ್ಲಿ ವ್ಯಕ್ತವಾಗುತ್ತದೆ. ಆದರೆ ಯಾವುದೇ ಕಾವ್ಯದ ಪರಿಚಯ ಇದರಲ್ಲಿ ಆಗುವುದಿಲ್ಲ. ಹಿನ್ನೆಲೆ, ಮುನ್ನೆಲೆಗಳಿಲ್ಲದೆ ಕಾವ್ಯ ತುಣುಕುಗಳನ್ನು ತುರುಕುವುದರಿಂದ ಪ್ರಯೋಜನವಾಗುವುದಿಲ್ಲ.

ಸಸ್ಯಗಳ ಬಗ್ಗೆ ಶಾಸ್ತ್ರೀಯ ಅಧ್ಯಯನ ಎಂದು ಹೇಳುವಾಗ ಲೇಖಕರ ಧಾಟಿಯಲ್ಲಿ ದಾನಿನಾನುತನ (ಸುಪೀರಿಯಾರಿಟಿ ಕಾಂಪ್ಲೆಕ್ಸ್) ಕಾಣುವುದು. ಸಸ್ಯಗಳು

ನವು ಅಧ್ಯಯನದಿಂದಾಗಿ ಶ್ರೇಷ್ಠವಾಗುವುದಿಲ್ಲ. ನಾವು ಅವುಗಳ ಶ್ರೇಷ್ಠತೆಯನ್ನು ಅರಿಯುವ ಪ್ರಯತ್ನ ಮಾತ್ರ. ಶಾಸ್ತ್ರೀಯ ಹೆಸರನ್ನು ಕೊಟ್ಟಿದ್ದರಿಂದ, ಹೂವು ಹಣ್ಣುಗಳನ್ನು ಒಂದು ಮರ್ಜೆಯೊಳಗೆ ವರ್ಗೀಕರಿಸಿದ್ದರಿಂದ ನಾವು ಹಿಂದಿನ ಕವಿಗಳಿಗಿಂತ ಸಸ್ಯಗಳ ಬಗ್ಗೆ ಹೆಚ್ಚು ತಿಳಿದಿದ್ದೇವೆಂಬುದು ಭ್ರಮೆ ಎನಿಸುತ್ತದೆ. ಇಂದಿನಂತೆ ವಿಜ್ಞಾನವಿರಲೀ, ಸಾಹಿತ್ಯವಿರಲೀ, ಅಂದು ಜೀವನವನ್ನು ಬಿಟ್ಟ ಹೊಸ ವಿಭಾಗಗಳಿರಲಿಲ್ಲ. ಅವರು ಸಸ್ಯಗಳೊಂದಿಗೆ ಸಹಬಾಳ್ವೆ ನಡೆಸಿದವರು. ಜೀವನೋತ್ಸಾಹದ ಆಧಿತ್ಯದಲ್ಲಿ ಅಂತಃಸ್ಫೂರಣೆಯಿಂದ ಬರೆದವರು. ಈಗಲೂ ಹಳ್ಳಿಯ ಮೂಲೆಗೆ ಹೋಗಿ. ಮಣ್ಣಿನ ಮಕ್ಕಳನ್ನು ತಮ್ಮದಾದ ವೈಜ್ಞಾನಿಕ ಜ್ಞಾನವನ್ನು ಬದಿಗಿಟ್ಟು ಮಾತನಾಡಿಸಿ. ಅಲ್ಲಿರುವ ಜ್ಞಾನಭಂಡಾರವನ್ನು ಗುರುತಿಸಿ. ಸಾವಿರಗಟ್ಟಲೆ ಸಸ್ಯಗಳನ್ನು ಗುರುತಿಸಿ. ಅವುಗಳ ವೈಭವವನ್ನು ಹೇಳುವ ಶ್ರೀಮಂತರು.

ಪುಟ ೨೨ರಲ್ಲಿ ಚೂತ ಎಂದರೆ ಮಾವಿನ ಬಗ್ಗೆ ಮಾತನಾಡಿದ್ದಾರೆ. ಹರಿಹರನು ಹೂಮಾಲೆ ಹೆಣೆಯಲು "ಬಾಲಚೂತದ" ಕೆಳಗೆ ಕುಳಿತುಕೊಂಡನಂತೆ. ಇಲ್ಲಿ ಬಾಲಚೂತ ಎಂದರೆ ಸಣ್ಣ ಮಾವಿನ ಮರ ಎಂದು ಅರ್ಥವಲ್ಲ. ಹೊಸದಾಗಿ ಚಿಗುರಿದ ಮಾವು ಎಂಬುದು ತಾತ್ಪರ್ಯ ಎಂದು ಲೇಖಕರು ವಿವರಿಸಿದ್ದಾರೆ. ಇಂಥಾ ಸೃಜನಾತ್ಮಕ ವಿಶ್ಲೇಷಣೆಗಳೇ ಪುಸ್ತಕ ಪೂರ್ತಿ ಇರುತ್ತಿದ್ದರೆ, ಅವು ಹಂತಹಂತವಾಗಿ ಬೆಳವಣಿಗೆಗೊಂಡಿದ್ದರೆ ಎಷ್ಟು ಚೆನ್ನಾಗಿತ್ತು ಎಂದೆನಿಸಿತು.

ಈ ಪುಸ್ತಕದಲ್ಲಿ ಸೊಗಸಾದ ರೇಖಾಚಿತ್ರಗಳಿವೆ ಎಂದು ಪ್ರಕಾಶಕರು ತಿಳಿಸಿದ್ದಾರೆ. ಸೊಗಸಾಗಿವೆ ನಿಜ. ಆದರೆ ಯಾವ ಚಿತ್ರವೂ ಆ ಗಿಡವನ್ನು ಪರಿಚಯಿಸುವ ಸಹಜತೆಯನ್ನು ಹೊಂದಿಲ್ಲ. ಹರಿಹರನನ್ನು ದಾಟಿ, ಪಂಪನ ವಿಷಯಕ್ಕೆ ಬಂದಾಗ ರೇಖಾಚಿತ್ರಗಳಿಲ್ಲ. ಆದರೆ ವಿಷಯ ಮೊದಲಿನದಕ್ಕಿಂತ ಮೇಲ್ಮಟ್ಟದಲ್ಲಿದೆ.

ಪುಟ ೫೦ರಲ್ಲಿ "ಪಂಪನು ಕವಿಯ ರಾಜಮಾರ್ಗವನ್ನು ತೊರೆದು ಸಾಮಾನ್ಯನು ನಡೆಯುವ ರಸ್ತೆಯನ್ನು ಹೊಕ್ಕಿದ್ದಾನೆ" ಎಂದಿದ್ದಾರೆ. ಈ ಹೇಳಿಕೆಗೆ ಅವರು ಕೊಟ್ಟ ವಿವರಣೆ ಹೀಗಿದೆ—"ಖಾಂಡವ ವನದಲ್ಲಿ ಬೆಳೆಯುವ ಗಿಡ ಮರಗಳ ಪಟ್ಟಿಯನ್ನು ತಿಳಿಸಿ ಇಷ್ಟೆಲ್ಲಾ ಸಸ್ಯಗಳು ಒಂದೇ ಕಡೆ ಬೆಳೆಯಲಾರವು. ಸಸ್ಯ ಶಾಸ್ತ್ರೀಯವಾಗಿ ಒಂದೊಂದು ಸಸ್ಯಗಳ ಗುಣಧರ್ಮ ಬೇರೆ ಬೇರೆ. ಮಳೆಯ ಪ್ರಮಾಣಕ್ಕೆ ಸರಿಯಾಗಿ ಸಸ್ಯಗಳು ಇರುತ್ತವೆ. ಹಾಗಾಗಿ ಪಂಪನು ತನಗೆ ಗೊತ್ತಿರುವ ಎಲ್ಲಾ ಗಿಡಗಳ ಹೆಸರುಗಳನ್ನು ಖಾಂಡವವನದಲ್ಲಿ ವರ್ಣನೆ ಎಂಬ ಸಂಪ್ರದಾಯಕ್ಕೆ ಬದ್ಧನಾಗಿ ತುರುಕಿದ್ದಾನೆ."

ಈ ಹೇಳಿಕೆ ಸಮಂಜಸವಾಗಿ ಕಾಣುವುದಿಲ್ಲ, ಯಾಕೆಂದರೆ ಅಂದಿನ ಕಾಲ, ಗುಣ ಈಗ ಇರಬೇಕಾಗಿಲ್ಲ. ಆಗಿನ ಮಳೆಯ ಸ್ಥಿತಿಯೇ ಈಗ ಇದೆ ಎಂದು ಹೇಳಲಾಗುವುದಿಲ್ಲ. ಸ್ವಾಭಾವಿಕವಾಗಿ ನೂರಾರು ಜಾತಿ ಸಸ್ಯಗಳು ಒಂದೇ ಜಾಗದಲ್ಲಿ ಬೆಳೆಯದಿರಬಹುದು. ಆದರೆ ಉದ್ದೇಶಪಟ್ಟರೆ ಬೆಳೆಸಲು ಸಾಧ್ಯವಿದೆ ನನ್ನ ತೋಟದಲ್ಲಿ ಹಿಮಾಲಯದಿಂದ ಕನ್ಯಾಕುಮಾರಿವರೆಗಿನ ಸಾವಿರಾರು

ಸಸ್ಯ ವೈವಿಧ್ಯಗಳನ್ನು ಆಸಕ್ತಿಗಾಗಿ ಬೆಳೆದಿದ್ದೇನೆ. ಇಂಥಾ ಆಸಕ್ತ, ಪ್ರಕೃತಿಯ ಕುರಿತಾಗಿ ಪ್ರಯೋಗ ಅಂದು ಖಾಂಡವವನದಲ್ಲಿ ನಡೆದಿಲ್ಲವೆಂದು ಹೇಳಲು ನಮಗೆ ಹಕ್ಕಿಲ್ಲ. ಖಾಂಡವವನ ಔಷಧೀಯ ವನವೆಂದೇ ವಿವರಣೆ. ಅಗ್ನಿಯ ಮಾಂದ್ಯ ರೋಗ ಪರಿಹಾರಕ್ಕಾಗಿಯೇ ಅದನ್ನು ಸುಡಲಾಗಿದೆ. ಅದು ನೈಸರ್ಗಿಕ ಅರಣ್ಯವಲ್ಲ.

ಪುಟ ೧೩೧ರಲ್ಲಿ ಬಸವಣ್ಣನವರ ವಚನ —"ಮಸಿಯ ಹೂಸಿ ನೇರಲ ಹಣ್ಣು ಮಾರುವಂತೆ" ಜನರ ಮೋಸದ ಮನೋವೃತ್ತಿಯನ್ನು ವಿವರಿಸುವ ಬಸವಣ್ಣನನ್ನು ಸಮರ್ಥಿಸಲು ಬಿ. ಜಿ. ಎಲ್. ಸ್ವಾಮಿಯವರು ಕೊಟ್ಟಿರುವ ಆಧುನಿಕ ಉದಾಹರಣೆ ಭಯ ಹುಟ್ಟಿಸುವಂತಿದೆ—"ಬೆಂಗಳೂರು ತರಕಾರಿ ಮಾರುಕಟ್ಟೆಯಲ್ಲಿ ಟೊಮೆಟೋ ಕಾಯಿಗಳ ರಾಶಿ ಒಂದು ಕಡೆ. ಇನ್ನೊಂದು ಕಡೆ ಹಣ್ಣಿನ ರಾಶಿ. ಪಕ್ಕದಲ್ಲಿರುವ ಪಾತ್ರೆಯಲ್ಲೊಂದು ದ್ರಾವಣ. ಬಟ್ಟೆಯಲ್ಲಿ ಅದ್ದಿ ಕಾಯಿಯನ್ನು ಒರಸಿದ ಮರುಕ್ಷಣದಲ್ಲಿ ಕಾಯಿ ಟೊಮೆಟೋ ಹಣ್ಣು! ಈ ಮ್ಯಾಜಿಕ್ಕಿಗೆ, ಮೋಸಕ್ಕೆ ವಿಜ್ಞಾನ ಸಹಕಾರಿ. ಎರಿತ್ರೋಮೈಸಿನ್ ಎಂಬ ಆಂಟಿಬಯೋಟಿಕ್‌ನ್ನು ಸೀಮೆಎಣ್ಣೆಯಲ್ಲಿ ಹಾಕಿ ಸವರಿದರೆ ಈ ಮಾಯೆ ತಲೆದೋರುವುದು."

ಇಂಥಾ ವಿಶಿಷ್ಟ ವಿಸ್ತಾರ ಪುಸ್ತಕದ ಎಲ್ಲಿಡೆ ಇರುತ್ತಿದ್ದರೆ? ಎಂದೆಂದುಕೊಳ್ಳುತ್ತಾ ಓದಿ ಮುಗಿಸಿದೆ.

ಎ. ಪಿ. ಚಂದ್ರಶೇಖರ
'ಇಂದ್ರಪ್ರಸ್ಥ'
ಸಾವಯವ ಫಾರ್ಮ್ ಮತ್ತು ನರ್ಸರಿ
ಕಳಲವಾಡಿಗ್ರಾಮ, ಉದ್ಬೂರು ಅಂಚೆ
ಮೈಸೂರು–೫೭೦೦೦೮

* * * * *

ಬಣ್ಣದೋಕಳಿ: (ವಿವಿಧ ಭಾಷೆಗಳ ವಿಶಿಷ್ಟ ಅನುವಾದಿತ ಕಥೆಗಳು)— ಅನು: ದು. ನಿಂ. ಬೆಳಗಲಿ; ಪ್ರ: ವಿಶ್ವಕರ್ನಾಟಕ ಸಾಹಿತ್ಯ ಮಂಟಪ, 'ಕಾದಂಬರಿ', ಸೋಮವಾರಪೇಟೆ, ಬನಹಟ್ಟಿ—೫೮೭೩೧೧, ಬಾಗಲಕೋಟೆ ಜಿಲ್ಲೆ.

ಶ್ರೀ ದು. ನಿಂ. ಬೆಳಗಲಿ ಅವರು ವಿವಿಧ ಭಾಷೆಗಳ ವಿಶಿಷ್ಟ ಕತೆಗಳನ್ನು ಆಯ್ದುಕೊಂಡು ಕನ್ನಡಕ್ಕೆ 'ಬಣ್ಣದೋಕುಳಿ' ಹೆಸರಿನಲ್ಲಿ ಅನುವಾದಿಸಿಕೊಟ್ಟಿರುವ ಕೃತಿ ಇದು. ಫ್ರೆಂಚ್, ಉರ್ದು, ಹಿಂದಿ, ಇಂಗ್ಲಿಷ್, ಮರಾಠಿ, ರಶಿಯನ್ ಭಾಷೆಗಳ ಹೆಸರಾಂತ ಕತೆಗಾರರ ಕಥೆಗಳನ್ನು ಕನ್ನಡಕ್ಕೆ ಅನುವಾದಿಸಿಕೊಟ್ಟು ಇತರೆ ಭಾಷೆಗಳ ಜನಜೀವನಗಳ ಪರಿಚಯ ಮಾಡಿಕೊಟ್ಟಿದ್ದಾರೆ. ಅನುವಾದಕರು ಹೇಳುವಂತೆ

'ಹಿಂದಿಯಲ್ಲಿ ಅನುವಾದಗೊಂಡ ಇತರ ಭಾಷೆಗಳ ಕತೆಗಳನ್ನೇ ಕನ್ನಡಕ್ಕೆ ಭಾಷಾಂತರಿಸಿದ್ದೇನೆ. ಮೂಲ ಲೇಖಕರಿಗೆ ನ್ಯಾಯ ಸಿಗಬೇಕಾದರೆ, ಅದೇ ಮೂಲ ಭಾಷೆಯಿಂದ ಅನುವಾದಗೊಳ್ಳಬೇಕೆಂಬ ವಾದವೇನೋ ನಿಜ, ಆದರೆ ವಿಶ್ವದ ಹಾಗೂ ಭಾರತೀಯ ಎಷ್ಟು ಭಾಷೆಗಳನ್ನು ಒಬ್ಬ ಲೇಖಕ ಅರಿಯಲು ಸಾಧ್ಯ?' ಎಂಬ ಮಾತನ್ನೂ ವಿನಮ್ರವಾಗಿ ಹೇಳುತ್ತಾ ತಮ್ಮ ಅನುವಾದಿತ ಕತೆಗಳು ಮೂಲಕ್ಕೆ ಚ್ಯುತಿಬರದಂತೆ ಪಡಿಮೂಡಿವೆ ಎಂಬುದನ್ನು ತಿಳಿಸಲೆತ್ನಿಸಿದ್ದಾರೆ.

ಈ ಹತ್ತು ಕತೆಗಳಲ್ಲಿ ಕಾಣ ಬರುವ ವಸ್ತು ವಿಭಿನ್ನವಾದುದು. ಸಮಾಜದ ವಿವಿಧ ಸ್ತರಗಳಲ್ಲಿ ಕಂಡು ಬರುವ ಮೋಸ, ವಂಚನೆ, ಕಟ್ಟುಕಟ್ಟಳೆ, ಅಜ್ಞಾನ, ವಿನೋದ, ಸಮಯಸಾಧಕತನ, ವರ್ಣ ವ್ಯವಸ್ಥೆಯ ದಬ್ಬಾಳಿಕೆ ಇತ್ಯಾದಿ ಅಂಶಗಳನ್ನು ಈ ಕತೆಗಳಲ್ಲಿ ಗುರುತಿಸುವುದರ ಜೊತೆಗೆ ಒಂದೊಂದು ಕತೆಗಳೂ ಕೂಡ ಓದುಗರನ್ನು ತಮ್ಮೆಡೆಗೆ ಸೆಳೆದುಕೊಳ್ಳುವಲ್ಲಿ ಯಶಸ್ವಿಯೆನಿಸಿವೆ. 'ಬಂಗಾರ ಕೂದಲಿನ ಹುಡುಗಿ' ಕತೆ ಕೊನೆಯವರೆಗೂ ಕುತೂಹಲ ಹುಟ್ಟಿಸಿಕೊಳುತ್ತಲೇ ಹೋಗಿ ಫೌಲೆರಾಯ್ ಸ್ಥಿತಿಯನ್ನು ಕಂಡು ಮರುಕಹುಟ್ಟಿಸತೊಡಗುತ್ತದೆ. ಕಂದಾಚಾರಕ್ಕೆ ಬಲಿಯಾಗಿಸುವ ಓರ್ವ ಬಡ ಮಹಿಳೆಯ ಕತೆ 'ಅಪರಾಧಿ'ಯಲ್ಲ ನೈಜವಾಗಿ ಮೂಡಿಬಂದಿದೆ. ಹಾಗೆಯೇ 'ಟೈಂಬಾಂಬ್' ಕತೆಯಲ್ಲಿ 'ಹೆದರಿಕೆ' ಹುಟ್ಟಿಸುತ್ತಲೇ ಕ್ಷಣಕಾಲ ಗೊಂದಲಹುಟ್ಟಿಸುವ, ಸಣ್ಣ ಸಮಸ್ಯೆಯ ನಿವಾರಣೆ ಬಗ್ಗೆ ಅಧಿಕಾರಸ್ಥರನ್ನು ಹೇಗೆ ತಳಮಳಗೊಳಿಸಬಹುದೆಂಬ ಚಿತ್ರಣವಿದೆ. ಅಜ್ಞಾನದಲ್ಲೇ ಇರುವ ವಿಶ್ವಾಸಗಳಿಗೆ 'ಸೆಕ್ಸ್' ಬಗ್ಗೆ ಹೇಗೆ ಅರಿವಿರಬೇಕೆಂಬುದನ್ನು 'ಅಪರಿಚಿತೆ' ಕತೆಯಲ್ಲಿ ಚಿತ್ರಿಸಲಾಗಿದೆ. ಗ್ರಾಮೀಣ ದಲಿತರ ಒಂದು ಅಸಹಾಯಕ ಜೀವಂತ ಚಿತ್ರಣ 'ಠಾಕೂರರ ಬಾವಿ'. 'ಮೋಜಿ-ನಾಟ' ಕತೆ ಒಂದು ನಗೆಯ ಪ್ರಸಂಗವನ್ನು ಸೊಗಸಾಗಿ ಪ್ರತಿಬಿಂಬಿಸುತ್ತದೆ. ಒಟ್ಟಿನಲ್ಲಿ 'ಬಣ್ಣದೋಕುಳಿ' ಕನ್ನಡಕ್ಕೆ ಅನುವಾದಗೊಂಡಿರುವ ಉತ್ತಮ ಕತೆಗಳ ಸಣ್ಣಕತೆಗಳ ಸಂಕಲನ ಎನ್ನಲಡ್ಡಿಯಿಲ್ಲ.

ಜೀನಹಳ್ಳಿ ಸಿದ್ಧಲಿಂಗಪ್ಪ
೩೮೯, ೧೧ನೇ ಮುಖ್ಯ ರಸ್ತೆ
ಸರಸ್ವತಿಪುರಂ, ಮೈಸೂರು-೯

ಓದುಗರ ಅನಿಸಿಕೆ

ಮಾನ್ಯರೇ,

ಅನೇಕ ದಿವಸಗಳಿಂದ ಪುಸ್ತಕ ಪ್ರಪಂಚ ಓದುತ್ತಿದ್ದೇನೆ. ಈ ಸಲದ ಸಂಚಿಕೆಯನ್ನು ಓದಿ, ನನ್ನ ಅನಿಸಿಕೆಗಳನ್ನು ತಮಗೆ ತಿಳಿಸಬೇಕೆಂದು ನಿರ್ಧರಿಸಿ ಬರೆಯುತ್ತಿದ್ದೇನೆ.

ಈ ಸಂಚಿಕೆಯಲ್ಲಿ ಎಲ್ಲ ವಿಷಯಗಳ ಬಗ್ಗೆ ಬರೆದ ಲೇಖನಗಳೂ ಮೆಚ್ಚುವಂಥವವಿವೆ.

ಅದರಲ್ಲಿಯೂ ಶ್ರೀ ದೇಜಗೌ ಅವರ ಬರವಣಿಗೆ ಅತ್ಯಂತ ಪ್ರಶಂಶನೀಯವಾದುದು. ಅವರ ಸಂಪಾದಕೀಯಗಳೇ ಸಾಕು, ಪುಸ್ತಕ ಪ್ರಪಂಚವನ್ನು ಶಾಶ್ವತವಾಗಿ ಉಳಿಸಲು. ಅವರ ಹದವರಿತ ಅನುಭವಪೂರ್ಣ ಬರವಣಿಗೆ, ವಿಷಯದ ವಿಶ್ಲೇಷಣೆ, ಎಲ್ಲದಕ್ಕೂ ಹೆಚ್ಚು ನಿರೂಪಣೆ ತುಂಬಾ ಚೆನ್ನಾಗಿರುತ್ತವೆ. ಅವರ ಸಂಪಾದಕೀಯವನ್ನು ಓದಿದಾಗಲೆಲ್ಲ, ಶ್ರೀ ಸಂತೋಷಕುಮಾರ ಗುಲ್ವಾಡಿಯವರು 'ತರಂಗ'ದ ಸಂಪಾದಕೀಯ ಲೇಖನಗಳನ್ನು ಪ್ರತ್ಯೇಕ ಪುಸ್ತಕವನ್ನಾಗಿ ಭಾಗ-೧, ಭಾಗ-೨ ಎಂದು ಪ್ರಕಟಿಸಿದುದು ನೆನಪಾಗುತ್ತದೆ. ಅವು ಓದುಗರಿಗೆ ಅನುಕೂಲವಾಗಿವೆ.
ಅದಕ್ಕೆ, ಶ್ರೀ ದೇಜಗೌ ಅವರ ಅಮೂಲ್ಯವಾದ ಸಂಪಾದಕೀಯಗಳನ್ನು ಪುಸ್ತಕ ರೂಪದಲ್ಲಿ ಪ್ರಕಟಿಸುವುದು, ಕನ್ನಡ ಸಾರಸ್ವತ ಲೋಕಕ್ಕೆ ಉಪಕಾರ ಮಾಡಿದಂತಾಗುವುದು.

'ಉಪಾಧ್ಯಾಯರ ದಿನ—ಒಂದು ವಿವೇಚನೆ'ಯಲ್ಲಿ ಶಿಕ್ಷಣದ ಮೂಲಧ್ಯೇಯ ಮತ್ತು ಶಿಕ್ಷಕರ ಕರ್ತವ್ಯದ ಬಗ್ಗೆ ತುಂಬಾ ಚೆನ್ನಾಗಿ ನಿರೂಪಿಸಲಾಗಿದೆ.
'ನಿಯಮ ಉಲ್ಲಂಘನೆ' ಬಹಳ ಹೃದಯಸ್ಪರ್ಶಿಯಾಗಿದೆ.

ಒಟ್ಟಿನಲ್ಲಿ ಪುಸ್ತಕ ಪ್ರಪಂಚದ ಗುಣಮಟ್ಟ ದಿನೇ ದಿನೇ ಹೆಚ್ಚುತ್ತಿರುವುದು ಸಂತೋಷದ ವಿಷಯ.

ಗೌರವಪೂರ್ವಕವಾಗಿ
ತಮ್ಮ ವಿಶ್ವಾಸಿ
ಮಾಧವರಾವ್ ಮುಧೋಳ್

ಮೈಸೂರು

ಮಾನ್ಯರೇ

ಸರಿಸುಮಾರು ೩ ದಶಕಗಳ ಹಿನ್ನೆಲೆಯುಳ್ಳ 'ಪುಸ್ತಕ ಪ್ರಪಂಚ'ದಲ್ಲಿ ಪ್ರಕಟವಾಗುವ ಲೇಖನಗಳ ವಸ್ತು, ವಿಷಯ, ಭಾಷೆ, ಚಿತ್ರ, ಆಶಯಗಳಲ್ಲಿ ಶುಚಿ ಶುದ್ಧತೆಯನ್ನು ಕಾಯ್ದುಕೊಂಡಿರುವುದಕ್ಕೆ ಹೆಮ್ಮೆ ಎನಿಸುತ್ತದೆ. ಮಹಿಳೆಯರನ್ನು ಕುರಿತ ಬರಹಗಳು ಹಾಗೂ ಮಹಿಳಾ ಲೇಖಕಿಯರನ್ನು ಪ್ರೋತ್ಸಾಹಿಸುತ್ತಿರುವುದನ್ನು ಪ್ರತಿ ಸಂಚಿಕೆಯಲ್ಲೂ ಗಮನಿಸುತ್ತಿದ್ದೇನೆ, ಇದು ನಿಜಕ್ಕೂ ಆರೋಗ್ಯಪೂರ್ಣ ಬೆಳವಣಿಗೆ, ಈ ಬಗ್ಗೆ ನನ್ನ ಅಭಿನಂದನೆಗಳು.

ಜನವರಿ ೯೮ ನೇ 'ಪುಸ್ತಕ ಪ್ರಪಂಚ'ದಲ್ಲಿ ಪ್ರಕಟವಾದ ಶ್ರೀ ಮಾಧವರಾವ್ ಮುಧೋಳ್‌ರವರ 'ಎಚ್ಚರಿಕೆಯ ಅಗ್ನಿಪರೀಕ್ಷೆ' ಒಂದು ಉತ್ತಮವಾದ ಅನುವಾದ ಲೇಖನ. ಮದರ್ ತೆರೆಸಾರವರ ಜೀವನ ಸಾಧನೆಗಳನ್ನು ಪರೋಕ್ಷವಾಗಿ ವ್ಯಕ್ತಪಡಿಸುತ್ತದೆ. ಮದರ್‌ರವರಿಗೆ ಚಿಕಿತ್ಸೆ ನೀಡುವುದರ ಮೂಲಕ ಕೋಟಿ ಕೋಟಿ ಜನರ ಸೇವೆಗೆ ಅವರನ್ನು ಸಜ್ಜುಗೊಳಿಸುವ ಡಾ|| ಲಂಬಾರ್ಡಿಯವರ ವೈದ್ಯಕೀಯ ಕ್ಷೇತ್ರದ ಅನುಭವವನ್ನು ಮೂಲ ಲೇಖಕರ ಆಶಯಕ್ಕೆ ಚ್ಯುತಿ ಬರದಂತೆ ಮುಧೋಳ್‌ರವರು ಸೊಗಸಾಗಿ ಅನುವಾದಿಸಿದ್ದಾರೆ.

ಫೆಬ್ರವರಿ ೯೮ ನೇ ಸಂಚಿಕೆಯಲ್ಲಿ ಪ್ರಕಟವಾದ ಡಾ|| ಎಸ್. ರಾಘವಕುಮಾರಿಯವರ ಲೇಖನ 'ಉಪಾಧ್ಯಾಯರ ದಿನ: ಒಂದು ವಿವೇಚನೆ' ಒಂದು ಉತ್ತಮ ಬರಹ. ಆದರೆ, ಅದು ಪ್ರಕಟವಾದ ಸಮಯದ ಬಗ್ಗೆ ನನಗೆ ಕೊರಗಿದೆ; ಈ ಲೇಖನ ಸೆಪ್ಟೆಂಬರ್ ಸಂಚಿಕೆಯಲ್ಲಿ ಪ್ರಕಟವಾಗಿದ್ದರೆ ತುಂಬಾ ಚೆನ್ನಾಗಿತ್ತು. ಸನ್ನಿವೇಶ ಸಂದರ್ಭಕ್ಕೆ ಅನುಗುಣವಾಗಿ ಲೇಖನಗಳನ್ನು ಪುಸ್ತಕ ಪ್ರಪಂಚ ಹಿಂದಿನಿಂದ ಪ್ರಕಟಿಸುತ್ತಿರುವುದನ್ನು ಗಮನಿಸಿದ್ದೇನೆ. ಅದರಂತೆ ಈ ಲೇಖನವೂ ಪ್ರಕಟವಾಗಿದ್ದರೆ ಹೆಚ್ಚು ಸೂಕ್ತವಾಗುತ್ತಿತ್ತು. ಇದನ್ನು ತಾವು ಮಾಡುತ್ತೀರೆಂದು ಪುಸ್ತಕ ಪ್ರಪಂಚದ ಅಭಿಮಾನಿಯಾಗಿ ತಿಳಿಸಬಯಸುತ್ತೇನೆ.

ಕೆ.ಎನ್. ಪುರ, ಉದಯಗಿರಿ ಜಯಮ್ಮ
ಮೈಸೂರು–೫೭೦೦೧೧

Statement of ownership and other particulars about the monthly periodical **"PUSTAKA PRAPANCHA"** as required to be published under rule 8 of the Registration of Newspapers (Central) Rules 1956.

FORM IV

Place of Publication	— Karnataka State Adult Education Council. 5/1 Vinoba Road, Manasagangothri, Mysore-6
Periodicity	— Monthly
Printer's Name	— Papanna
Nationality & Address	— Indian Karnataka State Adult Education Council Printing Press 5/1 Vinoba Road, Manasagangothri, Mysore-6
Publisher's Name & Address	— R. L. Mangalore General Secretary Karnataka State Adult Education Council 5/1 Vinoba Road, Manasagangothri, Mysore-6
Nationality	— Indian
Editor's Name	— Chandrashekhararadhya
Nationality	— Indian
Address	— Karnataka State Adult Education Council 5/1 Vinoba Road, Manasagangothri, Mysore-6

I, the General Secretary hereby declare that the particulars given above are true to the best of my knowledge and belief.

R. L. Mangalore
General Secretary
KARNATAKA STATE ADULT EDUCATION COUNCIL
MYSORE

1 March 1997

Reg. No. KRNN.29 / WPP 6

LICENCE No. 21
LICENCED TO POST WITH PAYMENT

ಸಮಿತಿಯ ವಿಶೇಷ ಪ್ರಕಟಣೆಗಳು

Edited by Chandrashekhararadhya, Printed by Papanna
Printed & Published by Karnataka State Adult Education Council, 5/1, Vinoba Road, Manasa Gangothri, Mysore-570 006.